"ಬೆಂಗಳೂರು ನಿರ್ಮಾಪಕ ಕೆಂಪೇಗೌಡ"

ಒಂದು ಅಧ್ಯಯನ

(ಇತಿಹಾಸ ಎಂ.ಫಿಲ್. ಪದವಿಗಾಗಿ

ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಎಂ.ಫಿಲ್ ನಿಬಂಧ)

ಸಂಶೋಧಕಿ ಮತ್ತು ನೊಂದಣಿ ಸಂಖ್ಯೆ :

ಪವಿತ್ರ.ಎ.ಬಿ

KRSMH - 00367

ಮಾರ್ಗದರ್ಶಕರು :

ಜಿ.ಟಿ.ಸೋಮಶೇಖರ್

ಕರ್ನಾಟಕ ಸಂಘ (ರಿ) ಮಂಡ್ಯ.

ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ

(ಕನ್ನಡ ವಿ.ವಿ. ಹಂಪಿ ಮಾನ್ಯತೆ ಪಡೆದಿದೆ)

2008 - 2009

“ಬೆಂಗಳೂರು ನಿರ್ಮಾಪಕ ಕೆಂಪೇಗೌಡ” ಒಂದು ಅಧ್ಯಯನ

(ಇತಿಹಾಸ ಎಂ.ಫಿಲ್. ಪದವಿಗಾಗಿ

ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಎಂ.ಫಿಲ್ ನಿಬಂಧ)

ಸಂಶೋಧಕಿ ಮತ್ತು ನೊಂದಣಿ ಸಂಖ್ಯೆ :

ಪವಿತ್ರ.ಎ.ಬಿ

KRSMH - 00367

ಮಾರ್ಗದರ್ಶಕರು :

ಜಿ.ಟಿ.ಸೋಮಶೇಖರ್

ಕರ್ನಾಟಕ ಸಂಘ (ರಿ) ಮಂಡ್ಯ.

ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ

(ಕನ್ನಡ ವಿ.ವಿ. ಹಂಪಿ ಮಾನ್ಯತೆ ಪಡೆದಿದೆ)

2008 - 2009

678

ಮಾರ್ಗದರ್ಶಕರ ಪ್ರಮಾಣಪತ್ರ

"*ಬೆಂಗಳೂರು ನಿರ್ಮಾಪಕರ ಕೆಂಪೇಗೌಡ - ಒಂದು ಅಧ್ಯಯನ*" ಎಂಬ ಪ್ರಬಂಧವನ್ನು ಕನ್ನಡ ವಿಶ್ವವಿದ್ಯಾನಿಲಯದ ಎಂ.ಫಿಲ್ ಪದವಿಗಾಗಿ ಕುಮಾರಿ ಪವಿತ್ರ.ಎ.ಬಿ. ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಧೃಢೀಕರಿಸುತ್ತೇನೆ.

ಸ್ಥಳ : ಮೈಸೂರು

ದಿನಾಂಕ : 23.09.2009

(ಜಿ.ಟಿ.ಸೋಮಶೇಖರ್)
ಉಪನ್ಯಾಸಕರು,
ಇತಿಹಾಸ ವಿಭಾಗ,
ಮಾನಸ ಗಂಗೋತ್ರಿ,
ಮೈಸೂರು.

ಸಂಶೋಧಕರ ಪ್ರಮಾಣಪತ್ರ

ಹಂಪಿಯ ಕನ್ನಡ ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದಿರುವ ಮಂಡ್ಯದ ಕರ್ನಾಟಕ ಸಂಘವು ನಡೆಸುತ್ತಿರುವ ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರದಲ್ಲಿ 2008-09ನೇ ಸಾಲಿಗೆ ಇತಿಹಾಸ ಎಂ.ಫಿಲ್ ಅಭ್ಯರ್ಥಿಯಾಗಿ ನಾನು ಪ್ರವೇಶ ಪಡೆದಿರುತ್ತೇನೆ. ನನ್ನ ಎಂ.ಫಿಲ್ ಅಧ್ಯಯನದ ಅಂಗವಾಗಿ ಸಂಶೋಧನಾ ನಿಬಂಧ ರಚಿಸಲು ''*ಬೆಂಗಳೂರು ನಿರ್ಮಾಪಕ ಕೆಂಪೇಗೌಡ - ಒಂದು ಅಧ್ಯಯನ*' ವನ್ನು ಆಯ್ಕೆ ಮಾಡಿಕೊಂಡು *ಜಿ.ಟಿ.ಸೋಮಶೇಖರ*ರವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಈ ನಿಬಂಧವನ್ನು ರಚಿಸಿರುತ್ತೇನೆ.

ಈ ನಿಬಂಧವನ್ನಾಗಲೀ, ನಿಬಂಧದ ಅಧ್ಯಾಯಗಳನ್ನಾಗಲೀ ಬೇರೆ ಯಾವ ಗ್ರಂಥಗಳು ಹಾಗೂ ನಿಯತಕಾಲಿಕೆಗಳಲ್ಲಿ ಪ್ರಕಟಿಸಿರುವುದಿಲ್ಲ. ಮತ್ತು ಕನ್ನಡ ವಿಶ್ವವಿದ್ಯಾನಿಲಯವು ನೀಡುವ ಎಂ.ಫಿಲ್ ಪದವಿಗಾಗಿ ಈ ನಿಬಂಧವನ್ನು ಒಪ್ಪಿಸಿದ್ದೇನೆ.

ಸ್ಥಳ : MANDYA

ದಿನಾಂಕ : 23/09/09

Pavithra.A.B

(ಕುಮಾರಿ ಪವಿತ್ರ.ಎ.ಬಿ)

ಸಂಶೋಧಕ ಚರಿತ್ರೆ ವಿಭಾಗ
ಕರ್ನಾಟಕ ಸಂಘ (ರಿ) ಮಂಡ್ಯ
ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
(ಕನ್ನಡ ವಿ.ವಿ.ಹಂಪಿ. ಮಾನ್ಯತೆ ಪಡೆದಿದೆ)

ಪರಿವಿಡಿ

ಅಧ್ಯಾಯ 1 : ಪೀಠಿಕೆ

1.1 ಉದ್ದೇಶ ಮತ್ತು ವ್ಯಾಪ್ತಿ

ಜನರ ಜೀವನೋಪಾಯಕ್ಕೆ ಹಾಗೂ ಭೂಮಾಲೀಕರ ಆದಾಯ ಅಂತಸ್ತು ಮತ್ತು ರಕ್ಷಣೆಗೆ ಭೂಮಿ ಮೂಲ ಸಂಪನ್ಮೂಲವಾದಾಗ ಕಾಡನ್ನು ನಾಡಾಗಿಸುವ ಪ್ರಕ್ರಿಯೆ ವಿಜಯನಗರ ಕಾಲದಲ್ಲಿ ಮತ್ತಷ್ಟು ಚುರುಕುಗೊಂಡಿತು. ದಕ್ಷಿಣ ಭಾರತದಲ್ಲಿ ಪ್ರಚಲಿತವಾಗಿದ್ದ ಈ ಸಿದ್ಧಾಂತವನ್ನು ಬರ್ಟನ್ ಸ್ಟೈನ್[1] ಮೂರು ಹಂತಗಳಲ್ಲಿ ಗುರುತಿಸಿದ್ದಾನೆ. ಕ್ರಿ.ಶ.10ನೆಯ ಶತಮಾನದಲ್ಲೇ ದಕ್ಷಿಣ ಕರ್ನಾಟಕದಲ್ಲಿ ರೈತರು ಅರೆಕಾಲಿಕ ಸೈನಿಕರಾಗಿಯೂ ದುಡಿಯುತ್ತಿದ್ದರು. ಇಂತಹ ರೈತ ಸೈನಿಕ ವ್ಯವಸ್ಥೆಯಲ್ಲಿ ವಿಜಯನಗರ ಸಾರ್ವಭೌಮದ ಗಮನ ಸೆಳೆದು ಯಲಹಂಕ ವಂಶದ ರೈತ ಕುಟುಂಬವೂ ಕಿರುರಾಜರಾಗಿ[2] ವಂಶಾಧಿಕಾರ ದಕ್ಕಿಸಿಕೊಂಡಿತು. ಸನ್ನಿವೇಶದ ಶಿಶುವಾಗಿ ರೈತ ಸೈನಿಕ ವ್ಯವಸ್ಥೆಯಲ್ಲಿ ಏಳ್ಗೆಗೆ ಬಂದ ಯಲಹಂಕ ವಂಶಸ್ಥರು ನಾಡಪ್ರಭುಗಳಾಗಿ ಆಳಿದರೂ, ಸಾರ್ವಭೌಮತ್ವಕ್ಕೆ ವಿಧೇಯರಾಗಿದ್ದುದಕ್ಕೆ ಶಾಸನಾಧಾರಗಳಿವೆ.

ಯಲಹಂಕ ಬೆಂಗಳೂರಿನ ಸಮೀಪದ ನಿರ್ದಿಷ್ಟ ಸ್ಥಳವಾದರೂ ಸುತ್ತಮುತ್ತಲಿನ ಪ್ರದೇಶಗಳನ್ನೊಳಗೊಂಡ ನಾಡಾಗಿತ್ತು. ಇದರ ಎಲ್ಲೆಯನ್ನು ಕರಾರುವಕ್ಕಾಗಿ ಗುರುತಿಸಲಾಗದಿದ್ದರೂ, ಇಂದಿನ ಬೆಂಗಳೂರು, ನೆಲಮಂಗಲ, ಮಾಗಡಿ, ಕುಣಿಗಲ್ ಮತ್ತು ತುಮಕೂರಿನ ಕೆಲವು ಭಾಗಗಳು ಇದರಲ್ಲಿ ಸೇರಿದ್ದವೆಂಬುದು ಖಚಿತ. ಮಾಗಡಿ ಸೀಮೆಯು ಯಲಹಂಕ ಪ್ರಭುಗಳ ಆಡಳಿತಕ್ಕೊಳಪಟ್ಟಿತ್ತು.

ವಿಜಯನಗರದ ಅರಸರು ನಾನಾ ಪಾಳೇಗಾರರಿಗೆ, ನಾಡಪ್ರಭುಗಳಿಗೆ ಸಣ್ಣಪುಟ್ಟ ಪ್ರದೇಶಗಳನ್ನು ವಾರ್ಷಿಕ ಪೊಗದಿ ಮತ್ತು ಸೈನಿಕ ಸಹಾಯಕ್ಕಾಗಿ ನೀಡಿದ್ದರು. ಉತ್ತರಭಾಗದ ತಾಳೇಪಟ್ಟಗಳು ರಾಜಧಾನಿಯ ಪ್ರತ್ಯಕ್ಷಾಧಿಪತ್ಯದಲ್ಲಿದ್ದವು. ದಕ್ಷಿಣ ಭಾಗದ ಪಾಳೇಪಟ್ಟುಗಳು ಮಹಾಮಂಡಲೇಶ್ವರನ ಅಂಕೆಯಲ್ಲಿದ್ದವು. ಶ್ರೀರಂಗಪಟ್ಟಣ ದಕ್ಷಿಣದಲ್ಲಿ, ಮಹಾಮಂಡಲೇಶ್ವರನ ರಾಜಧಾನಿಯಾಗಿತ್ತು.[3]

ವಿಜಯನಗರದ ಅರವೀಡು ಸಂತತಿಯ ಪತನಾನಂತರ ಬದಲಾದ ಪರಿಸ್ಥಿತಿಯಲ್ಲಿ, ಶಕ್ತಿ ಸಾಮರ್ಥ್ಯಗಳಿದ್ದ ಪಾಳೇಗಾರರು ಮೆಲ್ಲಮೆಲ್ಲನೆ ಸ್ವತಂತ್ರರಾಗತೊಡಗಿದರು. ಇಂತಹದರಲ್ಲಿ ಹಾಗಲವಾಡಿ ಯಲಹಂಕ ಮತ್ತು ಬಳ್ಳಾಪುರದ ಪ್ರಭುಗಳು ಪ್ರಮುಖರು.

ಮಧ್ಯಕಾಲೀನ ಭಾರತದ ಇತಿಹಾಸದಲ್ಲಿ ವಿಜಯನಗರದ ಸಾಮ್ರಾಜ್ಯಕ್ಕೆ ಇತಿಹಾಸಕಾರರು ಹೆಚ್ಚಿನ ಮಹತ್ವವನ್ನು ನೀಡುತ್ತಾರೆ. ಕಾರಣವೇನೆಂದರೆ ತಮ್ಮ ರಾಜ್ಯಕ್ಕೆ ಅಥವಾ ಸಾಮ್ರಾಜ್ಯವನ್ನು ಶಾಂತಿ ಸುಭಿಕ್ಷೆ ಮತ್ತು ನೆಮ್ಮದಿಯಿಂದ ನಡೆಸಿಕೊಂಡು ಹೋದ ಪರಿಣಾಮಗಳನ್ನು ಕಟ್ಟಿಕೊಂಡು ವಿಜಯನಗರದರಸರ ಅಪ್ಪಣೆ ಪಡೆದು ನೆಮ್ಮದಿಯಿಂದ ಇರುತ್ತಿದ್ದರಲ್ಲದೆ ತಮ್ಮ ಪ್ರಭುವಿಗೆ ಇಲ್ಲವೇ ವಿಜಯನಗರ ಸಾಮ್ರಾಜ್ಯಕ್ಕೆ ಶತ್ರುಭಾದೆ ತಟ್ಟಿದರೆ ಅದನ್ನು ನಿವಾರಿಸಲು ಟೊಂಕ ಕಟ್ಟಿ ನಿಲ್ಲುತ್ತಿದ್ದರು. ಇಂತಹ ಪಾಳೇಯ ಪಟ್ಟು ಎಂದರೆ ಯಲಹಂಕ ನಾಡು ಪ್ರಭುಗಳು ಮೊದಲು ಯಲಹಂಕದಲ್ಲಿ ತಲೆ ಎತ್ತಿ ಕ್ರಮೇಣ ಬೆಂಗಳೂರು ಪಟ್ಟಣವನ್ನು ಕಟ್ಟಿ, ಉಳಿಸಿ, ಬೆಳಸಿದ ಕೀರ್ತಿ ಈ ನಾಡ ಪ್ರಭುಗಳಿಗೆ ಸಲ್ಲುತ್ತದೆ.[4]

ಈ ನಾಡಪ್ರಭುಗಳು ವಿಜಯನಗರದ ಸಾರ್ವಭೌಮರಿಗೂ, ಶ್ರೀರಂಗಪಟ್ಟಣದ

ಮಹಾಮಂಡಲೇಶ್ವರನಿಗೂ, ವಿಧೇಯರಾಗಿದ್ದರು. ಸಾರ್ವಭೌಮ ದೊರೆಗಳು ಮತ್ತು ಸಾಗುವಳಿದಾರರ ಮಧ್ಯೆ ಕೊಂಡಿಯಂತಿದ್ದ ನಾಡಪ್ರಭುಗಳು ಸಾರ್ವಭೌಮರಿಗೆ ಮೂರನೇ ಒಂದು ಭಾಗ ಪೊಗದಿಯನ್ನು ಕೊಡಬೇಕಾಗಿತ್ತು.[5]

ಆಡಳಿತ, ಧರ್ಮ, ಶಿಕ್ಷಣ, ಸಾಹಿತ್ಯ ಮತ್ತು ಕಲಾಕ್ಷೇತ್ರದಲ್ಲಿ ವಿಜಯ ನಗರದ ಆದರ್ಶವನ್ನು ಅನುಸರಿಸಿದ ಯಲಹಂಕ ಪ್ರಭುಗಳು ಯುದ್ಧ ಆಕ್ರಮಣಗಳಿಗಿಂತ ಪ್ರಜಾಹಿತ ಕಾರ್ಯದಲ್ಲಿ ಮಹತ್ವದ ಪಾತ್ರ ವಹಿಸಿದರು.[6] ಸೀಮಿತ ಪ್ರದೇಶದ ಪ್ರಜೆಗಳ ಸಮಸ್ಯೆಗೆ ಆಧ್ಯ ಗಮನವನ್ನು ನೀಡಿ ಅವರ ಸುಖ ನೆಮ್ಮದಿಯನ್ನು ಮುಖ್ಯ ಗುರಿಯಾಗಿಸಿಕೊಂಡಿದ್ದರು.

ಹೀಗೆ ನಿಷ್ಠರಾಗಿದ್ದ ಯಲಹಂಕ ನಾಡಪ್ರಭುಗಳಲ್ಲಿ ಅತ್ಯಂತ ಪ್ರಖ್ಯಾತರಾದ ಅರಸನೇ ಕೆಂಪೇಗೌಡ, ಹಿರಿಯ ಕೆಂಪೇಗೌಡ. ನಾಡ ಪ್ರಭು ಕೆಂಪೇಗೌಡ ಅಥವಾ ಬೆಂಗಳೂರು ಕೆಂಪೇಗೌಡ. ಅವನು ಈ ವಂಶದಲ್ಲೇ ಅತ್ಯಂತ ಪ್ರಸಿದ್ಧಯುತರಾಗಿದ್ದು ಇಂದಿನ ಕರ್ನಾಟಕದ ರಾಜಧಾನಿಯಾದ ಬೆಂಗಳೂರನ್ನು ನಿರ್ಮಿಸಿದ ಕೀರ್ತಿ ಇವನಿಗೆ ಸಲ್ಲುತ್ತದೆ. ಕೆಂಪೇಗೌಡ ಒಬ್ಬ ನಿಷ್ಠಾವಂತ ರಾಜನಾಗಿ, ಪ್ರಜಾಹಿತಪಾಲಕನಾಗಿ 1513ರಿಂದ 1569ರವರೆಗೆ ಸುಮಾರು 56 ವರ್ಷಗಳ ಕಾಲ ರಾಜ್ಯವಾಳಿ ಬೆಂಗಳೂರು ಎಂಬ ಹಳ್ಳಿಯನ್ನು ಮಹಾನಗರವಾಗಿ ಮಾರ್ಪಡಿಸಿಕೊಂಡು ಯಲಹಂಕ ಪ್ರಭುಗಳಲ್ಲೇ ಅತ್ಯಂತ ಹೆಚ್ಚಿನ ಪ್ರಖ್ಯಾತಿಯನ್ನು ಪಡೆದನು.[7]

ಕೆಂಪೇಗೌಡನ ಬಗ್ಗೆ ಆತನ ಪೂರ್ವಿಕರ ಬಗ್ಗೆ 50ಕ್ಕೂ ಹೆಚ್ಚು ಶಾಸನಗಳು, ವಿದೇಶೀಯರ ಬರವಣಿಗೆಯೇ ಅಲ್ಲದೇ ಕೆಂಪೇಗೌಡ ಯಶಃ ಪ್ರತಾಪ ಕೀರ್ತನೆಗಳು ಇವೇ

ಮುಂತಾದವು ಕೆಂಪೇಗೌಡನ ಚರಿತ್ರೆಯನ್ನು ತಿಳಿಯಲು ನಮ್ಮ ನೆರವಿಗೆ ಬರುತ್ತವೆ.[8]

ಹೀಗೆ ಹಿರಿಯ ಕೆಂಪೇಗೌಡನಿಗೆ ಸಂಬಂಧಿಸಿದಂತೆ ಹಲವಾರು ಅಂಶಗಳು ಕಂಡುಬರುತ್ತವೆ. ಇವನು ಬೆಂಗಳೂರಿನ ಕೆಂಪೇಗೌಡನೆಂದು ಪ್ರಸಿದ್ಧನಾದವನು. ಅಷ್ಟೇ ಅಲ್ಲದೇ ತಂದೆ ಕೆಂಪೇನಂಜೇಗೌಡನ ಕಾಲದಲ್ಲಿ ಯುವರಾಜನಾಗಿದ್ದಾಗಲೇ ವಿಜಯನಗರದ ಕಣ್ಣಿಗೆ ಬಿದ್ದವನು ಹೀಗೆ ಕೆಂಪೇಗೌಡನಿಗೆ ಸಂಬಂಧಪಟ್ಟಂತೆ ನಾಲ್ಕು ಅಧ್ಯಾಯಗಳಾಗಿ ವಿಂಗಡಿಸಲಾಗಿದ್ದು,

1.2 ಅಧ್ಯಾಯಗಳ ವಿಂಗಡಣೆ

ಅದರಲ್ಲಿ ಮೊದಲನೇ ಅಧ್ಯಾಯದಲ್ಲಿ ಕೆಂಪೇಗೌಡರ ಮೂಲದ ಬಗ್ಗೆ ವಿವರಿಸಲಾಗಿದೆ. ಇದರಲ್ಲಿ ಇವರ ವಂಶಸ್ಥರು ಎಲ್ಲಿಯವರು, ಇಲ್ಲಿಗೆ ಹೇಗೆ ಬಂದು ನೆಲೆಸಿದರು ಎಂಬುದರ ಬಗ್ಗೆ ಹೇಳಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಕೆಂಪೇಗೌಡರಿಗೆ ಸಂಬಂಧಿಸಿದಂತೆ ರಾಜಕೀಯ ಇತಿಹಾಸದ ಅಡಿಯಲ್ಲಿ ಅವನ ಜೀವನ, ಅವನ ವಂಶವೃಕ್ಷಗಳ ಬಗ್ಗೆ ಹೇಳಲಾಗಿದೆ.

ಇನ್ನು ಮೂರನೆಯ ಅಧ್ಯಾಯದಲ್ಲಿ ಕೆಂಪೇಗೌಡ ಒಂದು ಹಳ್ಳಿಯಾಗಿದ್ದ ಬೆಂಗಳೂರನ್ನು ಒಂದು ಮಹಾನಗರವನ್ನಾಗಿ ಹೇಗೆ ಮಾರ್ಪಡಿಸಿದ. ಅಲ್ಲದೇ ಆ ನಗರವನ್ನು ನಿರ್ಮಿಸಲು ಕೈಗೊಂಡ ಕಾರ್ಯ ಯೋಜನೆಗಳು ಏನೆಂಬುದನ್ನು ವಿವರಿಸಲಾಗಿದೆ. ಈ ನಗರವನ್ನು ಮಹಾನಗರವಾಗಿ ಮಾರ್ಪಡಿಸಿ ಅದಕ್ಕೆ ಬೇಕಾದ ಎಲ್ಲಾ ಸವಲತ್ತುಗಳನ್ನು

ಒದಗಿಸಿ ಆಧುನಿಕ ಕಾಲ ನಾಚುವಂತೆ ಆಮಹಾನಗರದ ನಿರ್ಮಾಣ ಮಾಡಿದ ಎಂಬುದನ್ನು ವಿವರಿಸಲಾಗಿದೆ.

ಇನ್ನು ಕೊನೆಯ ಅಂದರೆ ನಾಲ್ಕನೆಯ ಅಧ್ಯಾಯದಲ್ಲಿ ಅವನ ಆಡಳಿತಕ್ಕೆ ಸಂಬಂಧಪಟ್ಟಂತೆ ಆಡಳಿತ, ಸಾಮಾಜಿಕ, ಸೈನ್ಯ, ಆರ್ಥಿಕತೆ, ಶಿಕ್ಷಣ ಮತ್ತು ಕಲೆ - ವಾಸ್ತುಶಿಲ್ಪಕ್ಕೆ ಸಂಬಂಧಪಟ್ಟಂತೆ ಇವುಗಳೆಲ್ಲವನ್ನು ಈ ಆಡಳಿತದೊಳಗೆ ಸೇರಿಸಿ ವಿವರಿಸಲಾಗಿದೆ. ಇದರಲ್ಲಿ ಕೆಂಪೇಗೌಡ ತನ್ನ ಆಳ್ವಿಕೆಯ ಕಾಲದಲ್ಲಿ ಸಾಮಾಜಿಕತೆ, ಸೈನ್ಯ, ಆರ್ಥಿಕತೆ ಹೀಗೆ ಹಲವಾರು ಅಂಶಗಳು ಹೇಗಿತ್ತು ಎಂಬುದನ್ನು ವಿವರಿಸಲಾಗಿದೆ.

ಒಟ್ಟಾರೆಯಾಗಿ ಹೇಳುವುದಾದರೆ ಕೆಂಪೇಗೌಡ ಒಬ್ಬ ಧೀಮಂತ ವ್ಯಕ್ತಿಯಾಗಿ ಆದರ್ಶ ವ್ಯಕ್ತಿಯಾಗಿ ಕಾಣುವುದರಲ್ಲಿ ಸಂಶಯವೇನಿಲ್ಲ. ಕೆಂಪೇಗೌಡ ಒಬ್ಬ ಕಲಾತ್ಮಕ ವ್ಯಕ್ತಿ. ಅವನ ಆದರ್ಶಗಳು ಯಾವಾಗಲೂ ಅನುಕರಣೀಯ.

ಅಡಿಟಿಪ್ಪಣಿ

1. ಬರ್ಟನ್ ಸ್ಟೈನ್, ಅಗ್ರೇರಿಯನ್ ಇಂಟಿಗ್ರೇಷನ್ ಆಫ್ ಸೌತ್ ಇಂಡಿಯ, (ನವದೆಹಲಿ - 1979) ಪುಟ - 187

2. ಡಾ.ರಾಮಕೃಷ್ಣ.ಆರ್, ಇದರಲ್ಲಿ ಪ್ರೊ.ಕೃಷ್ಣಯ್ಯ.ಎಂ.ಹೆಚ್, ಡಾ.ದೇವರಕೊಂಡಾರೆಡ್ಡಿ (ಸಂ) ಕೆಂಪೇಗೌಡ ವಂಶಸ್ಥರು
(ಬೆಂಗಳೂರು, ಜನತಾ ಶಿಕ್ಷಣ ಸಂಸ್ಥೆ, ವಿವೇಕಾನಂದ ಕಾಲೇಜು - 1996) ಪುಟ - 4.

3. ರೈಸ್.ಬಿ., ಟೆನಿಸ್ ಮೈಸೂರು, ಸಂಪುಟ 1, (ವೆಸ್ಟ್ ಮಿನಿಸ್ಟರ್, 1897) ಪುಟ - 136

4. ಡಾ|| ಬಿ.ಪಾಂಡುಕುಮಾರ್ - 1600 ವರ್ಷಗಳ ಒಕ್ಕಲಿಗರ ಇತಿಹಾಸ ಬೆಂಗಳೂರು 2007 ಪುಟ - 31

5. ಡಾ|| ಮುನಿರಾಜಪ್ಪ - ಮಾಗಡಿ ಸೀಮೆ - ಇತಿಹಾಸ - ಸಂಸ್ಕೃತಿ ಪುಟ - 33

6. ಕ್ಯೂ.ಜೆ.ಎಂ.ಎಸ್. XIII ಪುಟ - 740

7. ಅನಕೃ - ಕೆಂಪೇಗೌಡ.

8. ಡಾ|| ಬಿ.ಪಾಂಡುಕುಮಾರ್ - 1600 ವರ್ಷಗಳ ಒಕ್ಕಲಿಗರ ಇತಿಹಾಸ - ಬೆಂಗಳೂರು - 2007 ಪುಟ - 32-33

ಅಧ್ಯಾಯ 2 : ಕೆಂಪೇಗೌಡನ – ಮೂಲ

2.1 ಐತಿಹ್ಯಗಳು

ಬೆಂಗಳೂರು ನಿರ್ಮಾಪಕ ಕೆಂಪೇಗೌಡನ ಪೂರ್ವಿಕರು ತಮಿಳುನಾಡಿನ ಕಂಚೀಪುರದಿಂದ ವಲಸೆ ಬಂದವರೆಂದು ಐತಿಹ್ಯಗಳಿವೆ. ಒಂದು ಲಾವಣಿಯ ಪ್ರಕಾರ ಕಂಚೀಪುರದ ಹತ್ತಿರದ ಒಂದು ಹಳ್ಳಿಯ ರಣಭೈರೇಗೌಡ ಮತ್ತು ಅವನ ಆರು ಜನ ಸಹೋದರರು ಮೂರು ಮಕ್ಕಳು ಅಲ್ಲಿಂದ ಬೇರೆ ಸ್ಥಳಕ್ಕೆ ವಲಸೆ ಹೋಗಬೇಕಾಯಿತು. ಕಾರಣ ಕಾಂಚೀಪುರಂನ ಪಾಳೇಯಗಾರನಾದ ಸೆಲ್ವನಾಯಕನು ರಣಭೈರೇಗೌಡನ ಮಗಳನ್ನು ವರಿಸಲು ಇಚ್ಚೆಪಟ್ಟನು. ಇದಕ್ಕೆ ಒಪ್ಪದೇ ರಣಭೈರೇಗೌಡನು ಸಂಸಾರ ಸಮೇತನಾಗಿ ರಾತ್ರೋರಾತ್ರಿ ಈಗಿನ ಬೆಂಗಳೂರು ಗ್ರಾಮಾಂತರ ಜಿಲ್ಲೆ ಆವತಿ (ದೇವನಹಳ್ಳಿ ಸಮೀಪ) ಎಂಬಲ್ಲಿ ಬಂದು ನೆಲೆಸಿದರು. ಅಷ್ಟೇ ಅಲ್ಲದೇ ಕೆಂಪೇಗೌಡನ ಪೂರ್ವಜರ ಭಾಷೆಯೂ ಕನ್ನಡವೇ ಆಗಿದ್ದಿತು.[1]

13ನೇಯ ಶತಮಾನಕ್ಕೆ ಪೂರ್ವದಲ್ಲಿಯೇ ರಣಭೈರೇಗೌಡನ ಪೂರ್ವಜರು ಯಣಮಂಜಿ ಪುತ್ತೂರಿಗೆ ಬಂದು ನೆಲೆಸಿದ್ದರು.[2]

ಐತಿಹ್ಯದ ಪ್ರಕಾರ ರಣಭೈರೇಗೌಡನಿಗೆ ಕೆಂಪಮ್ಮ ಎಂಬ ಧರ್ಮಪತ್ನಿಯು ಸುಂದರಳಾದ ಮಗಳು, ದೊಡ್ಡಮ್ಮ ಅಲ್ಲದೇ, ಮಲ್ಲಭೈರೇಗೌಡ ಗಿಡ್ಡಪ್ಪಗೌಡ ಎಂಬ ಶೌರ್ಯಪರಾಕ್ರಮಗಳಿಗೆ ಹೆಸರಾದ ತಮ್ಮಂದಿರಿದ್ದರು. ಜಯಗೌಡ, ಸಣ್ಣಭೈರೇಗೌಡ, ಹಾವಳಿ ಭೈರೇಗೌಡ, ಮಲ್ಲ ಭೈರೇಗೌಡರೆಂಬ ಮಕ್ಕಳಿದ್ದರು. ಆವತಿಯನ್ನು

ಅಭಿವೃದ್ಧಿಪಡಿಸುವ ಸಮಯದಲ್ಲಿ ಆಗೆಯುತ್ತಿರುವಾಗ ಸಾಕಷ್ಟು ಧನಕನಕ ಸಿಗಲು ಅಣ್ಣತಮ್ಮಂದಿರು ಅದನ್ನು ಹಂಚಿಕೊಂಡರು ಇತ್ಯಾದಿ. ರಣಭೈರೇಗೌಡನ ಸಹೋದರರು ಮುಂದೆ ದೇವನಹಳ್ಳಿ, ಚಿಕ್ಕಬಳ್ಳಾಪುರ, ಹೊಳವನಹಳ್ಳಿ, ಕೊರಟಗೆರೆ, ಶಾಂಪುರ ಮುಂತಾದ ಗ್ರಾಮಗಳನ್ನು ವಶಪಡಿಸಿಕೊಂಡು ಅಭಿವೃದ್ಧಿಪಡಿಸಿದರು. ನಂದೀದುರ್ಗ ಮುಂತಾದ ದುರ್ಗಗಳನ್ನು ನಿರ್ಮಿಸಿದುದೇ ಅಲ್ಲದೇ ಮದ್ದಗಿರಿ (ಮಧುಗಿರಿ), ಮಿಡಗೇಶಿ,ಹೆಬ್ಬೂರು, ಕುಣಿಗಲ್ಲು, ಗುಬ್ಬಿ, ಆನೇಕಲ್ಲು, ಸುಗಟೂರು, ಹೊಸಪೇಟೆ, ಹೊಸಹಳ್ಳಿ, ಆಬ್ಲೂಡು, ಶಿಡ್ಲಘಟ್ಟ, ಸಜ್ಜಾಪುರ, ಶಿವನಸಮುದ್ರ ಇನ್ನೂ ಮುಂತಾದ ಊರುಗಳನ್ನು ಸ್ಥಾಪಿಸಿ ಆ ಪಾಳೇಯಗಳ ಗೌಡ ಪ್ರಭುಗಳಾಗಿ ಮೆರೆದರು.

ರಣಭೈರೇಗೌಡನ ತರುವಾಯ ಆತನ ಜೇಷ್ಠಪುತ್ರನಾದ ಜಯಗೌಡನು ಆವತಿಯಿಂದ ತನ್ನ ಸಹೋದರರ ಸಹಾಯದಿಂದ ಯಲಹಂಕ ಅರ್ಥಾತ್ ಇಂದಿನ ಯಲಹಂಕಕ್ಕೆ ಆಗಮಿಸಿದನು. ಹೊಯ್ಸಳರ ಕಾಲದಲ್ಲಿ ಇದನ್ನು ಕಲವಕ್ಕ ಎನ್ನುತ್ತಿದ್ದರು. ದೊಡ್ಡ ಬೆಳವಂಗಲಕ್ಕೆ ಆಗಮಿಸಿದ ಈ ಸಹೋದರರು ಆಸ್ಥಳದಿಂದ ಕಾರ್ಯಭಾರ ಆರಂಭಿಸಿದರು. ಪುಂಡು ಪೋಕರಿಗಳ ಹುಟ್ಟಡಗಿಸಿ ಯಲಹಂಕ ನಾಡನ್ನು ಕಟ್ಟಿ ವಿಜಯನಗರದ ಸಾಮ್ರಾಜ್ಯದ ಸಾಮ್ರಾಟನಾಗಿದ್ದ ಪ್ರೌಢದೇವರಾಯ (1423-1446)ನು ಜಯಗೌಡನಿಗೆ ಯಲಹಂಕ ಭೂಪಾಲನೆಂಬ ಬಿರುದನ್ನು ದಯಪಾಲಿಸಿದನು. ಜಯಗೌಡನು 14 ವರ್ಷಗಳ ಕಾಲ ಯಲಹಂಕ ನಾಡನ್ನು ಆಳ್ವಿಕೆ ಮಾಡಿದನು. ನಂತರ ಗಿಡ್ಡೇಗೌಡ ಈತನ ನಂತರ ಕೆಂಪನಂಜೇಗೌಡ. ಈತನ ಮಗನೇ ಹೆಸರಾಂತ ಕೆಂಪೇಗೌಡ.[3]

ಯಲಹಂಕ ಪ್ರಭುಗಳು ಏಳ್ಗಿಗೆ ಬಂದ ಹಿನ್ನಲೆಗಾಗಿ ಯಾವ ಸಿದ್ಧಾಂತಗಳಿದ್ದರೂ ಮೂಲ ಇತಿಹಾಸ ಕುರಿತಂತೆ ದಂತಕಥೆಗಳಿವೆ. ಯಲಹಂಕ ವಂಶಸ್ಥರಾದ ರಣಭೈರೇಗೌಡ ತನ್ನ ಸಹೋದರನಾದ ಮಲ್ಲಬೈರೇಗೌಡ, ಸಣ್ಣಭೈರೇಗೌಡ, ಗೌಡ, ಮರೀಗೌಡ, ಗಿಡ್ಡೇಗೌಡ, ತಮ್ಮೇಗೌಡ ಮತ್ತು ಗಿಡ್ಡಪ್ಪಗೌಡರೊಡನೆ ಕಂಚಿಯ ಬಳಿಯ ಪುತ್ತೂರಿನಿಂದ ವಲಸೆ ಬಂದು ನಂದಿದುರ್ಗದ ರಾಮಸ್ವಾಮಿ ಬೆಟ್ಟದ ತಪ್ಪಲಿನ ಆಹುತಿಗ್ರಾಮದಲ್ಲಿ ನೆಲೆಸಿದರು.[4]

ಈ ವಂಶದ ಇತಿಹಾಸಕ್ಕೆ ಸಂಬಂಧಿಸಿದಂತೆ ನಿಖರವಾದ ದಾಖಲೆಗಳ ಕೊರತೆಯಿದ್ದರೂ ಅನೇಕ ಐತಿಹ್ಯಗಳಿವೆ. ಬಹುತೇಕ ಐತಿಹ್ಯಗಳು ಸಮರ್ಥನೆಗೆ ನಿಲುಕದೇ ಸೊರಗುತ್ತವೆ. ಕ್ರಿ.ಶ.1367ರ ಹೊಸಪೇಟೆ ಶಾಸನದಲ್ಲಿನ 'ಎಲಹಂಕ ನಾಡಪ್ರಭು (ಭೈ) ರಿದೇವ' ಎಂಬುದನ್ನು ವಿದ್ವಾಂಸರು ರಣಭೈರೇಗೌಡನಿಗೆ ಆರೋಪಿಸಿದ್ದಾರೆ. ಆದರೆ ಈ ಪ್ರಭುಗಳ ವಂಶಾವಳಿಯೊಂದು ಸುಬ್ರಮಣ್ಯ ಶಾಸನವೊಂದರಲ್ಲಿ ಹೀಗಿದೆ.[5]

''ಜಯ್ಯಪೊ ಗಿಡಪಶ್ಚೈವ ನಾಚಪೋ ಕೆಂಪನಾಚಪಃ ।
ಹಿರಿಯ ಕೆಂಪ ಮಹಾಪಾಲ ಇಮ್ಮಡಿ ಕೆಂಪಭೂವರ ॥
ಮುಮ್ಮಡಿ ಕೆಂಪದೀರಶ್ವ ವೀರಭೂಪಾಲ ಚಂದ್ರಮಾಃ ।
ಕೆಂಪವೀರನೃಪಾಲಶ್ವ ಸುಪುತ್ರ ಕುಲದೀಪಕಾಃ ॥

ಈ ಶಾಸನೋಲ್ಲೇಖದಂತೆ ಜಯಿಯಪನೇ (ಜಯಗೌಡ) ಈ ವಂಶದ ಮೂಲ ಪುರುಷನೆಂದು ಪರಿಗಣಿಸುವುದಾದರೆ,ಸಾಹಿತ್ಯಧಾರಗಳಂತೆ ರಣಭೈರೇಗೌಡ ಈ ಸಂತತಿಯ ಮೂಲಪುರುಷನೆಂಬುದು [6]ವಿದ್ವಾಂಸರ ಅಭಿಪ್ರಾಯ.

ಹೀಗೆ ಇವರ ಘಟನೆಗಳಿಗೆ ಸಂಬಂಧಿಸಿದಂತೆ ಸ್ಪಷ್ಟ ಆಧಾರಗಳ ಕೊರತೆಯಿದೆ ಇದರಿಂದಾಗಿ ಈ ವಂಶಜರ ಚರಿತ್ರೆ ಹಿರಿಯ ಕೆಂಪೇಗೌಡನಿಂದಲೇ ಲಭ್ಯ.[7]

ಯಲಹಂಕ ಬೆಂಗಳೂರಿನ ಸಮೀಪದ ನಿರ್ದಿಷ್ಟ ಸ್ಥಳವಾದರೂ ಸುತ್ತಮುತ್ತಲಿನ ಪ್ರದೇಶಗಳನ್ನೊಳಗೊಂಡ ನಾಡಾಗಿತ್ತು. ಇದರ ಎಲ್ಲೆಯನ್ನು ಕರಾರುವಕ್ಕಾಗಿ ಗುರುತಿಸಲಾಗದಿದ್ದರೂ ಇಂದಿನ ಬೆಂಗಳೂರು, ನೆಲಮಂಗಲ, ಮಾಗಡಿ, ಕುಣಿಗಲ್ ಮತ್ತು ತುಮಕೂರಿನ ಕೆಲವು ಭಾಗಗಳು ಇದರಲ್ಲಿ ಸೇರಿದ್ದವೆಂಬುದು ಖಚಿತ. ಮಾಗಡಿ ಸೀಮೆಯ ಯಲಹಂಕ ಪ್ರಭುಗಳ ಆಡಳಿತಕ್ಕೊಳಪಟ್ಟಿತ್ತು.[8]

ವಿಜಯನಗರದ ಅರವಿಡು ಸಂತತಿಯ ಪತನಾನಂತರ ಬದಲಾದ ಪರಿಸ್ಥಿತಿಯಲ್ಲಿ ಶಕ್ತಿಸಾಮರ್ಥ್ಯಗಳಿದ್ದ ಪಾಲೇಗಾರರು ಮೆಲ್ಲಮೆಲ್ಲನೆ ಸ್ವತಂತ್ರ್ಯರಾಗತೊಡಗಿದರು. ಇಂತಹವರಲ್ಲಿ ಹಾಗಲವಾಡಿ, ಯಲಹಂಕ ಮತ್ತು ಬಳ್ಳಾಪುರದ ಪ್ರಭುಗಳು ಪ್ರಮುಖರು. ಆಡಳಿತ, ಧರ್ಮ, ಶಿಕ್ಷಣ, ಸಾಹಿತ್ಯ ಮತ್ತು ಕಲಾಕ್ಷೇತ್ರದಲ್ಲಿ ವಿಜಯನಗರದ ಆದರ್ಶವನ್ನು ಅನುಸರಿಸಿದ ಯಲಹಂಕ ಪ್ರಭುಗಳು, ಯುದ್ಧ ಆಕ್ರಮಣಗಳಿಗಿಂತ ಪ್ರಜಾಹಿತ ಕಾರ್ಯದಲ್ಲಿ ಮಹತ್ತರ ಕಾರ್ಯ ವಹಿಸಿದರು.[9]

ಸೀಮಿತ ಪ್ರದೇಶದ ಪ್ರಜೆಗಳ ಸಮಸ್ಯೆಗೆ ಆದ್ಯಗಮನ ನೀಡಿ ಅವರ ಸುಖ ನೆಮ್ಮದಿಯನ್ನು ಮುಖ್ಯ ಗುರಿಯಾಗಿಸಿಕೊಂಡಿದ್ದರು.

ಅಷ್ಟೇ ಅಲ್ಲದೇ ರಣಭೈರೇಗೌಡರು ಭೂಮಿಯನ್ನು ಅಗೆಯುವಾಗ ಧನಕರುಗಳ

ಜೊತೆಯಲ್ಲಿ ದೊರೆತ ಚನ್ನಕೇಶವ ಮೂರ್ತಿಯ ಪ್ರಾಣ ಪ್ರತಿಷ್ಠಾಪನೆಯನ್ನು ಆವತಿಯಲ್ಲಿ ಮಾಡಿಸಿದರು. ರಣಭೈರೇಗೌಡರ ತರುವಾಯ ಆತನ ಜೇಷ್ಠಪುತ್ರನಾದ ಜಯಗೌಡನು ಆವತಿಯಿಂದ ತನ್ನ ಸಹೋದರರ ಸಹಾಯದಿಂದ ಯಲಹಂಕ ಅರ್ಥಾತ್ ಇಂದಿನ ಯಲಹಂಕಕ್ಕೆ ಆಗಮಿಸಿದನು. ಹೊಯ್ಸಳರ ಕಾಲದಲ್ಲಿ ಇದನ್ನು ಯಲವಕ್ಕ ಎನ್ನುತ್ತಿದ್ದರು. ಯಲಹಂಕವು ನಾಡಾಗಬೇಕಾದದ್ದು ಪುಂಡು ಪೋಕರಿಗಳಿಂದ ತುಂಬಿ ಕಾಡಾಗಿತ್ತು. ಮೊದಲು ದೊಡ್ಡ ಬೆಳವಂಗಲಕ್ಕೆ ಆಗಮಿಸಿದ ಈ ಸಹೋದರರು ಆ ಸ್ಥಳದಿಂದ ಕಾರ್ಯಭಾರ ಆರಂಭಿಸಿದರು. ಪುಂಡು ಪೋಕರಿಗಳು ಹುಟ್ಟಡಗಿಸಿ ಯಲಹಂಕ ನಾಡನ್ನು ಕಟ್ಟಿ ವಿಜಯನಗರದ ಸಾಮ್ರಾಜ್ಯದ ಸಾಮ್ರಾಟನಾಗಿದ್ದ ಪ್ರೌಢದೇವರಾಯನ ಬಳಿಗೆ ಬಂದು ಈ ವಿಷಯವನ್ನು ತಿಳಿಸಲು ಪ್ರೌಢದೇವರಾಯ (ಆಳ್ವಿಕೆ ಕಾಲ - 1423-1446)ನು ಜಯಗೌಡನಿಗೆ ಯಲಹಂಕ ಭೂಪಾಲನೆಂಬ ಬಿರುದನ್ನು ದಯಪಾಲಿಸಿದನು. ಜಯಗೌಡನು 14 ವರ್ಷಗಳ ಕಾಲ ಯಲಹಂಕ ನಾಡನ್ನು ಆಳ್ವಿಕೆ ಮಾಡಿದನು. ನಂತರ ಗಿಡ್ಡೇಗೌಡ ಈತನ ನಂತರ ಕೆಂಪನಂಜೇಗೌಡ. ಈತನ ಮಗನೇ ಹೆಸರಾಂತ ಕೆಂಪೇಗೌಡ. ಬೆಂಗಳೂರು ನಿರ್ಮಾಪಕ ಒಂದನೇ ಕೆಂಪೇಗೌಡ. ಹಾಗೂ ಮಾಗಡಿ ಕೆಂಪೇಗೌಡನ ತಂದೆ ಕೂಡ ಹೌದು.[10]

2.2 ಹೊರಗಿನಿಂದ ಬಂದವರು ಅಥವಾ ಇಲ್ಲಿಯವರೇ? ಎಂಬ ವಾದಗಳು

ಕನ್ನಡ ನಾಡಿನ ರಾಜಧಾನಿ ಬೆಂಗಳೂರಿನ ನಿರ್ಮಾಪಕನಾದ 1ನೆಯ ಕೆಂಪೇಗೌಡ ಮತ್ತು ಆತನ ಮೂಲಪುರುಷರು ಹೊರಗಿನಿಂದ ಬಂದವರೆಂದೂ ಮೂಲತಃ ತೆಲುಗಿನವರೆಂದೂ ಈವರೆಗೆ ಅವರನ್ನು ಕುರಿತು ಬರೆದ ಚರಿತ್ರೆಕಾರರೆಲ್ಲರೂ

ಅಭಿಪ್ರಾಯಪಟ್ಟಿದ್ದಾರೆ. ಆ ವಂಶದವರು ಮೂಲತಃ ಕನ್ನಡಿಗರಲ್ಲವೆಂಬುದನ್ನು ಪ್ರತಿಪಾದಿಸಲು ಸರಿಯಾದ ಆಧಾರಗಳನ್ನು ಒದಗಿಸಿಲ್ಲ. ಯಲಹಂಕ ನಾಡಿನ ದೊರೆಗಳು ವಂಶದ ಮೂಲಪುರುಷರು ಹೊರಗಿನಿಂದ ಬಂದವರೆಂದು ಹೇಳುವ ಕಥೆ ಹೀಗಿದೆ - ಸುಮಾರು ಹದಿನಾಲ್ಕನೆಯ ಶತಮಾನದಲ್ಲಿ ಮದ್ರಾಸ್ ಪ್ರಾಂತ್ಯದ ಕಂಚಿಯ ಸಮೀಪದ ಯಣಮಂಜಿ ಪುತ್ತೂರು ಎಂಬ ಊರಿನಿಂದ 7 ಜನ ರೈತರ ಕುಟುಂಬ ಸಮೇತರಾಗಿ ನಂದಿದುರ್ಗದ ಬಳಿಯ ರಾಮಸ್ವಾಮಿ ಬೆಟ್ಟದ ಬಳಿ ಬಂದು ತಂಗಿದರು. ಅವರು ಮೂಲತಃ ತೆಲುಗರು. ಅವರಿದ್ದ ಯಣಮಂಜಿಗೆ ಮೊರಸು ನಾಡೆಂದು ಹೆಸರು. ಮೊರಸು ನಾಡಿನಿಂದ ಬಂದವರಾದ ಕಾರಣ ಮೈಸೂರು ಪ್ರಾಂತ್ಯದ ಪೂರ್ವಭಾಗಕ್ಕೆ ಬಂದ ಈ ನೆಲಸಿಗರಿಗೆ ಮೊರಸು ಒಕ್ಕಲಿಗರೆಂದು ಹೆಸರು. ಇವರು ಭೈರವದೇವರ ಆರಾಧಕರು. ಇವರು ತಮ್ಮ ಮಗಳಂದಿರ ವಿವಾಹಕ್ಕೆ ಪೂರ್ವದಲ್ಲಿ ಅವರ ಕಿರುಬೆರಳನ್ನು ಉಂಗುರದ ಬೆರಳನ್ನು ಕತ್ತರಿಸುತ್ತಿದ್ದರಂತೆ.[11]

ಈ ಕಥೆಯಿಂದ ಯಾವ ಚಾರಿತ್ರಿಕ ಆಧಾರಗಳೂ ದೊರೆಯುವುದಿಲ್ಲ. ಬಹುಶಃ ಇದೊಂದು ವಂಶದ ಮೂಲದ ಬಗೆಗೆ ತಲಾತಲಾಂತರಗಳಿಂದ ಹರಿದು ಬಂದ ಕಟ್ಟುಕಥೆಯಾಗಿರಬೇಕು ಏಕೆಂದರೆ ಕನ್ನಡನಾಡಿನ ಒಕ್ಕಲಿಗ ಜನಾಂಗ ಮತ್ತು ಇತರ ಬ್ರಾಹ್ಮಣೇತರ ಜನಾಂಗಗಳ ಮೂಲದ ಬಗೆಗೂ ಇಂಥದೇ ಕಥೆಗಳು ಕಂಡುಬರುತ್ತವೆ.

ಆವತಿ, ಯಲಹಂಕ, ಬೆಂಗಳೂರು ಮತ್ತು ಮಾಗಡಿಗಳನ್ನು ಅನುಕ್ರಮವಾಗಿ ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದ ಈ ರಾಜರುಗಳು ಮೂಲತಃ

ಕನ್ನಡಮಾಡಿನವರೇ, ಕನ್ನಡಿಗರೇ ಎಂಬುದಕ್ಕೆ ವಿಪುಲವಾದ ಆಧಾರಗಳು ದೊರೆಯುತ್ತವೆ. ಆದರೂ ಆ ವಂಶದವರು ಹೊರಗಿನಿಂದ ಬಂದವರೆಂದು ಯಾವ ಕಾರಣದಿಂದ ಈ ವಿದ್ವಾಂಸರು ಯಲಹಂಕ ನಾಡ ಪ್ರಭುಗಳು ಹಾಕಿಸಿದ ಶಾಸನಗಳು ದೊರೆಯುತ್ತವೆ. ಈ ವಂಶದವರು ಮೂಲತಃ ಕನ್ನಡ ನಾಡಿನವರೇ ಎಂಬುದಕ್ಕೆ ಇವರ ಮನೆ ದೇವತೆಯಾದ ಕೆಂಪಮ್ಮನೂ ಒಂದು ಪ್ರಬಲವಾದ ಕಾರಣ. ಈ ಕೆಂಪಮ್ಮನೇ ಯಲಹಂಕ ನಾಡ ಪ್ರಭುಗಳಿಗೂ ಮನೆದೇವತೆಯಾಗಿರುವುದು ಇವರು ಕನ್ನಡಿಗರೆಂಬುದನ್ನು ಧೃಡಪಡಿಸುತ್ತದೆ. ಅಲ್ಲದೇ ರಣಭೈರೇಗೌಡ ಈ ವಂಶದ ಮೂಲ ಪುರುಷ ಎಂಬುದಕ್ಕೆ ಯಾವ ಆಧಾರವೂ ಇಲ್ಲ. ಆ ವಂಶದ ಯಾವ ಶಾಸನದಲ್ಲಿಯೂ ರಣಭೈರೇಗೌಡ ಎಂಬ ಹೆಸರು ಕಂಡುಬರುವುದಿಲ್ಲ. ಆ ಕಾರಣದಿಂದ ಯಲಹಂಕ ನಾಡಪ್ರಭುಗಳ ವಂಶದ ಮೂಲಪುರುಷ ರಣಭೈರೇಗೌಡ ಎಂಬುದನ್ನು ಒಪ್ಪಲು ಆಗುವುದಿಲ್ಲ.[12]

ನಮ್ಮ ನಾಡಿನ ಪಾಳೇಯಗಾರರ ಚರಿತ್ರೆಗಳನ್ನು ಗಮನಿಸಿದಾಗ ಒಂದು ಅಂಶ ಗೋಚರಿಸುತ್ತದೆ. ಅದೆಂದರೆ ಇವರೆಲ್ಲರೂ ವೊದವೊದಲಿಗೆ ಸೇನೆಯಲ್ಲಿ ಸೈನಿಕರಾಗಿದ್ದವರು. ಕ್ರಮೇಣ ಇಂಥವರು ತಮ್ಮ ದಣಿಗಳ ಪ್ರೀತಿಗೆ ಪಾತ್ರರಾಗಿ ದಾನದತ್ತಿಗಳನ್ನು ತಡೆದು ಪಾಳೇಯಗಾರರಾಗಿರುವುದು ಕಂಡುಬರುತ್ತದೆ. ಇಂತಹವರಲ್ಲಿ ಶಕ್ತರಾದವರು ಅಕ್ಕಪಕ್ಕದವರನ್ನು ಹತ್ತಿಕ್ಕಿ ಸಾಮಂತ ರಾಜರಾಗಿರುವುದೂ ಅಪರೂಪವೇನಿಲ್ಲ. ಯಲಹಂಕ ರಾಜರ ವಂಶದವರೂ ಆವತಿಯ ಪಾಳೇಯಗಾರರಾಗಿದ್ದು ಕ್ರಮೇಣ ಮೇಲೆ ಬಂದು ರಾಜರಾದರೆಂಬುದರಲ್ಲಿ ಅನುಮಾನವಿಲ್ಲ. ಅಲ್ಲದೇ ಆವತಿ, ಯಲಹಂಕ, ಹೊಸಪೇಟೆ ಮುಂತಾದವುಗಳೆಲ್ಲ ಗಂಗರ ಕಾಲದಿಂದಲೇ ಊರಾಗದ್ದ ಬಗೆಗೆ

ಆಧಾರಗಳಿವೆ. ಈ ಎಲ್ಲಾ ಕಾರಣಗಳಿಂದಾಗಿ ಯಲಹಂಕ ನಾಡಿನ ರಾಜರು ಮತ್ತು ಅವರ ಮೂಲಪುರುಷರು ಕನ್ನಡನಾಡಿನವರೇ, ಕನ್ನಡಿಗರೇ ಎಂದು ಖಚಿತವಾಗಿ ಹೇಳಬಹುದು.

ಸುಮಾರು 12ನೇಯ ಶತಮಾನದಿಂದಲೂ ಆವತಿ ನಾಡು ಅಸ್ತಿತ್ವದಲ್ಲಿದ್ದುದ್ದು ಕಂಡುಬರುತ್ತದೆ. ಅದಕ್ಕಿಂತ ಹಿಂದೆ ಆವತಿ ಇರಲಿಲ್ಲವೆಂದಲ್ಲ. ಏಕೆಂದರೆ, ಗಂಗರ ಕಾಲದಲ್ಲಿಯೇ ಈ ಊರುಗಳೆಲ್ಲ ನಿರ್ಮಾಣಗೊಂಡಿದ್ದವು. ಮುಂದೆ ಹದಿಮೂರನೆಯ ಶತಮಾನದ ಆದಿಯಿಂದ ಇದು ಯಲಹಂಕ ನಾಡಾಗಿ ಪರಿವರ್ತಿತವಾಗಿರುವ ಸೂಚನೆಗಳಿವೆ.

ಶಕ 1267ರ ಶಾಸನವೊಂದರಲ್ಲಿ ಶ್ರೀಮನ್ಮಹಾಮಂಡಳೇಶ್ವರಂ ತ್ರಿಭುವನಮಲ್ಲ ಗಿರಿನಾಥ ಬಂಡಿಕುಲ ಕಮಲ ವಿಕಸಿತ ದಿವಾಕರ ಅಣ್ಣ ನಂಕಕಾರ ದೇವರಸರ ಯಲಹಂಕ ನೆಲೆವೀಡಿನೊಳು ಸುಬಸಂಕಥಾವಿನೋದದಿಂ ರಾಜ್ಯಂಗಯ್ಯುತ್ತಲ್ಲಿದ್ದ ವಿಷಯದ ಉಲ್ಲೇಖವಿದೆ.[13]

ಈ ವಂಶದವರು ಯಣಮಂಜಿ ಪುತ್ತೂರಿನಿಂದ ವಲಸೆ ಬಂದು, ದೇವನಹಳ್ಳಿ ತಾಲ್ಲೂಕಿನ ಈಗಿನ ಆವತಿ ಗ್ರಾಮದ ಪ್ರದೇಶವನು ಸೇರಿ ಉಚಿತವಾದ ಕುಟೀರಗಳನ್ನು ನಿರ್ಮಿಸಿಕೊಂಡು ವ್ಯವಸಾಯವನ್ನು ಕೈಗೊಂಡು ಸುತ್ತಲೆಲ್ಲಾ ಕಾಡಾಗಿದ್ದ ಪ್ರದೇಶವನ್ನು ಹಂತಹಂತವಾಗಿ ನಾಡನ್ನಾಗಿ ಮಾಡುತ್ತಾ ಜೀವನ ಸಾಗಿಸತೊಡಗಿದರು[14] ಎಂಬುದಾಗಲಿ, ಆ ವಂಶದ ಮೂಲಪುರುಷನೆಂದು ಕರೆಯಲಾಗಿರುವ ರಣಭೈರೇಗೌಡ ಎಂಬುವವನಿಗೆ ಮಲ್ಲಭೈರೇಗೌಡ, ಸಣ್ಣ ಭೈರೇಗೌಡ, ವೀರೇಗೌಡ, ಮರೀಗೌಡ, ಗಿಡ್ಡೇಗೌಡ, ತಮ್ಮೇಗೌಡ, ಗಿಡ್ಡಪ್ಪಗೌಡ[15] ಎಂಬ ಹೆಸರಿನ 7 ಮಂದಿ ಸಹೋದರಿದ್ದರೆಂಬುದಾಗಲೀ

ಸರಿಯಿಲ್ಲ. ಇಲ್ಲಿ ಸೇರಿ ಸಿಗುವ ಅನೇಕ ಹೆಸರುಗಳು ಯಲಹಂಕ ನಾಡಿನ ಅಧೀನ ಪಾಳೇಯಗಾರರ ಹೆಸರುಗಳಾಗಿವೆ.

ಮರಸುನಾಡು ಮತ್ತು ಅದರ ಪಡೆಯ ಬಗ್ಗೆ ಮೈಸೂರಿನ ಅರಸ ಚಿಕ್ಕದೇವರಾಜ ವಿಜಯೋತ್ಸವ ಕುರಿತು ತಿರುಮಚಾರ್ಯ ಬರೆದಿರುವ ಚಿಕ್ಕದೇವರಾಜ ವಿಜಯ ಕಾವ್ಯದಲ್ಲಿ ಪ್ರಸ್ತಾತ ಬರುತ್ತದೆ.

ಪಲರುಮೊಳನಾಡ ದೊರೆಗಳ್
ಮಲೆನಾಡುಗರೊಡನೆ ಬೇಡ ಮೊರಸರು ಮೆನ್ನೀ
ಬಲದೊಡಘುರದಿದೆ ಧರೆಯೊಳ್
ಮಲೆಪರದಾರೆಂದು ನಿಂದನ ದಲಿಂದ[16]
ಮೊರನು ರಾಜ್ಯವ ಹೊಕ್ಕು ತುರುವನು ಸೆರೆವಿಡಿ
ದಿರದೆ ಜನರ ಕೆಂಗೆಡಿಸಿ
ಶರಣು ಹೊಕ್ಕವರಿಗೆ ನಂಬುಗೆಯ ಕೊಟ್ಟು
ಮುಂದಕ್ಕೆ ತೆರಳಿದನಾ ಖಾನನಾಗ[17]

ಇವುಗಳು ಮಾತ್ರವಲ್ಲದೇ ಚಿಕ್ಕದೇವರಾಜಒಡೆಯರ್ ಮರಸು ನಾಡಿನ ಮೇಲೆ ಯುದ್ಧ ಮಾಡಿದ ಬಗ್ಗೆ ಮಾಹಿತಿ ದೊರೆಯುತ್ತದೆ.

ಒಂದು ದೆಸೆಯೊಳ್ ತುರುಕರೊನ್ದು ಕಡೆಯೊಳ್ ಮಾರಸ
ರೊಂದೆ ಸೆಯೊಳಾರೆಯದ ಬಂದುಮಳವಿಂ ಬೇ
ರೊಂದು ಬರೆಯೊಳ್ ತಿಗುಳರೊಂದಿರವಿನೊಳ್ ಕೊಡಗ

ರೊಂದು ಕೆಲದೊಳ್ ಮಲೆವರೊಂದು ವೆರೆದೆಲ್ಲರ್
ಸಂದಣಿಸಿ ಕಾಳಗಕೆ ಮುಂದುವರಿವನ್ನಮದ
ತಿಂದವರ ತಟ್ಟುಗಳ ತಂದೆಲೆಗಳಂ ದಿಗ್
ಬೃಂದ ಬಿಲಿಯಿತ್ತು ನಲವಿಂದೆ ಚಿಕ್ಕದೇವನೃತ
ನಂದ ಮಿಗೆ ಪೆರ್ಜಸಮನೊಂದಿ ಸೊಗವಾತುಂ[18]

ಮೇಲಿನ ಪದ್ಯ ಚಿಕ್ಕದೇವರಾಜ ಮರಸು ನಾಡು ಅರ್ಥಾತ್ ಯಲಹಂಕ ನಾಡಿನೊಂದಿಗೆ ಯುದ್ಧ ಮಾಡಿದ ಪ್ರಸಂಗವನ್ನು ಹೇಳುತ್ತದೆ.

ಕರ್ನಾಟಕದ ಅರಸುಮನೆತನಗಳು ಯಲಹಂಕ ಪ್ರಭುಗಳ ಆಳ್ವಿಕೆಯ ಕಾಲದಲ್ಲಿ ದಾನದತ್ತಿಗಳನ್ನು, ಬಸದಿಗಳನ್ನು, ಇನ್ನಿತರ ಕಾರ್ಯಗಳನ್ನು ಮಾಡಿರುವುದನ್ನು ಶಾಸನಗಳ ಮುಖಾಂತರ ನಾವು ಕಾಣಬಹುದಾಗಿದೆ. ಉದಾಹರಣೆಗೆ -

ವಿಜಯನಗರದ ಪ್ರಸಿದ್ಧ ಅರಸ ಕೃಷ್ಣದೇವರಾಯನ ಮಗ ತಿರುಮಲ ಮತ್ತು ಸಾಳ್ವತಿಮ್ಮನ ಹೆಸರಿನಲ್ಲಿ ಕಲ್ಲೂರಿನ ವರದರಾಜ ದೇವಾಲಯಕ್ಕೆ ದಾನ ಮಾಡಿದ್ದಾನೆ.[19]

ರಾಷ್ಟ್ರಕೂಟದ ದೊರೆ ಅಮೋಘವರ್ಷನ ಮಗಳು ಕ್ರಿ.ಶ.886ರಲ್ಲಿ ಚಂದ್ರಲಬ್ಬೆ ಕುಣಿಗಲ್ ನಾಡಿನ ಆಡಳಿತ ನೋಡಿಕೊಳ್ಳುತ್ತಿದ್ದಳು.[20]

ಗಂಗರ ಅರಸ ಶ್ರೀಪುರುಷನ ಕಾಲದಲ್ಲಿ ಸೈಗೊಟ್ಟ ಶಿವಮಾದ ಕುಣಿಗಲ್ ನಾಡಿನ ರಾಜ್ಯಪಾಲನಾಗಿದ್ದನು.[21] ಮಾಗಡಿ ತಾಲ್ಲೂಕು ಕುಪ್ಪಪಾಳ್ಯ ಶಾಸನದಲ್ಲಿ ಇವನನ್ನು

ಶಿವಮಾದ ಎರೆಯಪ್ಪನೆಂದು ಕರೆಯಲಾಗಿದೆ.

ಹೀಗೆ ಈ ಅಂಶಗಳು ಇಲ್ಲಿ ರಾಷ್ಟ್ರಕೂಟರು, ಗಂಗರು, ವಿಜಯನಗರದರಸರು ಆಳ್ವಿಕೆ ಮಾಡಿದ್ದರು ಎನ್ನಲಾಗಿದೆ.

ಬೆಂಗಳೂರು ಎಂಬ ಹೆಸರು ಗಂಗರ ಕಾಲದ ಶಾಸನಗಳಲ್ಲಿಯೇ ದೊರೆಯುವುದರಿಂದ ಈ ಹೆಸರಿನ ಒಂದು ಊರು ಈ ಭಾಗದಲ್ಲಿತ್ತೆಂಬುದರಲ್ಲಿ ಯಾವ ಅನುಮಾನವೂ ಕಂಡುಬರುವುದಿಲ್ಲ.ಇದಕ್ಕೆ ಪೋಷಕವಾಗಿ ಮತ್ತೊಂದು ಕಥೆ ಹೀಗೆ ಪ್ರಚಲಿತವಿದೆ.

ಯಲಹಂಕದ ಅರಸು ಮನೆತನಕ್ಕೂ ನೆಂಟಸ್ತಿಕೆಯಿದ್ದಿತು. ಅವರಲ್ಲಿ ಪರಸ್ಪರ ಕೊಳ್ಳು ಕೊಡುಗೆಗಳು ನಡೆಯುತ್ತಿದ್ದವು. ಒಂದನೆಯ ಕೆಂಪೇಗೌಡನ ತಾಯಿ ಮತ್ತು ಪತ್ನಿ ಬೆಂಗಳೂರಿನವರು. ಈ ಕಾರಣದಿಂದಾಗಿ ಅವನು ಆಗಾಗ ಬೆಂಗಳೂರಿಗೆ ಭೇಟಿ ಕೊಡುತ್ತಿದ್ದುದುಂಟು. ಒಂದನೆಯ ಕೆಂಪೇಗೌಡ ಪ್ರತಿಸಲ ವಿಜಯನಗರಕ್ಕೆ ಹೋಗಿಬಂದಾಗಲೂ ಅಂತಹ ಒಂದು ನಗರನಿರ್ಮಿಸುವ ಆಸೆ ಹೆಚ್ಚುತ್ತಲೇ ಇತ್ತು. ವಿಜಯನಗರದ ಅರಸರ ಅನುಮತಿಯೂ ಊರೆಂಬ ಅಕ್ಕರೆ, ಇಲ್ಲಿನ ಪ್ರಕೃತಿ ಮತ್ತು ವಾಯುಗುಣದ ಆಕರ್ಷಣೆ ಇವುಗಳಲ್ಲಿ ಯಾವುದೇ ಅಥವಾ ಎಲ್ಲವುಗಳೋ ಕೆಂಪೇಗೌಡನಿಗೆ ಇಲ್ಲಿ ಒಂದು ಬೃಹತ್ ನಗರ ನಿರ್ಮಾಣ ಮಾಡುವ ಸ್ಫೂರ್ತಿಯನ್ನು ನೀಡಿರಬೇಕು.

ಅಡಿಟಿಪ್ಪಣಿ

1. 1600 ವರ್ಷಗಳ ಒಕ್ಕಲಿಗರ ಇತಿಹಾಸ - ಡಾ॥ಬಿ.ಪಾಂಡುಕುಮಾರ್
(ಬೆಂಗಳೂರು 2007) ಪುಟ - 31

2. ಕೆಂಪೇಗೌಡ - ಅನಕೃ

3. 1600 ವರ್ಷಗಳ ಒಕ್ಕಲಿಗರ ಇತಿಹಾಸ - ಡಾ॥ಬಿ.ಪಾಂಡುಕುಮಾರ್ ಪುಟ - 32

4. ಪ್ರೊ.ಕೃಷ್ಣಯ್ಯ, ಎಂ.ಹೆಚ್ ಮತ್ತು ಡಾ॥ ದೇವರ ಕೊಂಡಾರೆಡ್ಡಿ
(ಸಂ) - ಬೆಂಗಳೂರು ಕೆಂಪೇಗೌಡ ವಂಶಸ್ಥರು
(ಬೆಂಗಳೂರು - ಜನತಾಶಿಕ್ಷಣ ಸಂಸ್ಥೆ) 1996 ಪುಟ - 136

5. ಎಂ,ಎ.ಆರ್ - 1943-51 ಪುಟ - 160

6. ನಾಗರಾಜ್.ಎಂ.ಜಿ. ಇದರಲ್ಲಿ ಬೆಳ್ಳಿಬಾಗಿನ ಒಕ್ಕಲಿಗರ ಸಂಘದ
ರಜತಮಹೋತ್ಸವ

7. ಡಾ॥ ಮುನಿಯಪ್ಪ - ಮಾಗಡಿ ಸೀಮೆ - ಇತಿಹಾಸ - ಸಂಸ್ಕೃತಿ ಪುಟ - 34

8. ಅದೇ

9. QJMS XIII ಪುಟ - 740

10. 1600 ವರ್ಷಗಳ ಒಕ್ಕಲಿಗರ ಇತಿಹಾಸ. ಡಾ॥ ಬಿ.ಪಾಂಡುಕುಮಾರ್
(ಬೆಂಗಳೂರು - 2007) ಪುಟ - 32

11. ಎಂ.ವಿ.ಕೃಷ್ಣರಾವ್ ಮತ್ತು ಟಿ.ಕೇಶವಭಟ್ಟ (ಸಂ)
ಕರ್ನಾಟಕ ಇತಿಹಾಸ ದರ್ಶನ ಪುಟ - 36

12. ಹ.ಕ.ರಾಜೇಗೌಡ - ಯಲಹಂಕ ಪ್ರಭು (2001) ಪುಟ - 16,17

13. E.C vol - 9

14. ಎಂ.ವಿ.ಕೃಷ್ಣರಾವ್ - ಬೆಂಗಳೂರು ಕೆಂಪೇಗೌಡ ಪುಟ - 13

15. ಅದೇ ಪುಟ - 6

16. ತಿರುಮಲಾಚಾರ್ಯ - ಚಿಕ್ಕದೇವರಾಜ ವಿಜಯ ಪುಟ - 2 - 40

17. ಭಾರತಿ ನಂಜ, ಕಂಠೀರವ ನರಸರಾಡ ವಿಜಯ ಪುಟ - 11 - 56

18. ರಾಜರತ್ನಂ (ಸಂ) ಚಿಕ್ಕದೇವರಾಜ ಭಿನ್ನಪ ಪುಟ - 6

19. ಎ.ಕ-9. ಮಾಗಡಿ - 82


20. ಹಾ.ಮಾ.ನಾಯಕ - (ಪ್ರ.ಸಂ) ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ

21. ಎಂ.ಕ-9 ಬೆಂಗಳೂರು ಅನುಬಂಧ, ಮಾಗಡಿ - 129, M.A.R.
1914 - 15 ಪುಟ - 64

ಅಧ್ಯಾಯ 3 : ಹಿರಿಯ ಕೆಂಪೇಗೌಡ (1513-69)

ರಾಜಕೀಯ ಇತಿಹಾಸ

3.1 ಯಲಹಂಕ ಪ್ರಭುಗಳ ವಂಶವೃಕ್ಷ



(ಪ್ರೊ.ಕೃಷ್ಣಯ್ಯ. ಎಂ.ಹೆಚ್. ಮತ್ತು ಡಾ॥ ಜೀವದ ಕೊಂಡಾರೆಡ್ಡಿ (ಸಂ) ಬೆಂಗಳೂರು ಕೆಂಪೇಗೌಡ ವಂಶಸ್ಥರು. (ಬೆಂಗಳೂರು, ಜನತಾ ಶಿಕ್ಷಣಸಂಸ್ಥೆ - 1996)

ಜಯಗೌಡ - 1418 - 1433[2]

↓

ಗಿಡ್ಡೇಗೌಡ 1433-1443

↓

ಕೆಂಪನಂಜೇಗೌಡ 1443-1513

↓

ಮೊದಲನೆಯ ಕಂಪೇಗೌಡ 1513-1619

↓

ಇಮ್ಮಡಿ ಕೆಂಪೇಗೌಡ 1569-1658

↓

ಮುಮ್ಮಡಿ ಕೆಂಪೇಗೌಡ 1658 - 1678 | ಹಲಸ | ಇಮ್ಮಡಿ ಹಿರಿಯ ಕೆಂಪೇಗೌಡ (ಎ.ಕ.12, ಕುಣಿಗಲ್ 12)

ಮುಮ್ಮಡಿ ಕೆಂಪೇಗೌಡ ↓

ಇಮ್ಮಡಿ ಕೆಂಪೇಗೌಡ | ದೊಡ್ಡವೀರಪ್ಪಗೌಡ | 2ನೇ ಹಲಸ | ಚನ್ನವೀರ (ಎ.ಕ.12, ಬೆಂ.126)

ದೊಡ್ಡವೀರಪ್ಪಗೌಡ ↓

ಮುಮ್ಮಡಿ ಕೆಂಪೇಗೌಡ

or

ಮುಮ್ಮಡಿ ಕೆಂಪವೀರಪ್ಪಗೌಡ

1705 - 1728

ಡಿ.ಪುಟ್ಟಯ್ಯ. Q.J.M.S, XIII

ಜವರೇಗೌಡ (ರಣ ಭೈರೇಗೌಡ - ಕ್ರಿ.ಶ.1367)

ಗಿಡ್ಡೇಗೌಡ (1450-80)

ಮಾಚಯ್ಯಗೌಡ (ನಾಚಯ್ಯಗೌಡ

ಕೆಂಪನಂಜೇಗೌಡ (ಶಾಸನೋಕ್ತ ಕೆಂಪನಾಚೇಗೌಡ : 1480-1506) + ಚೆನ್ನಾಂಬೆ

ವೀರೇಗೌಡ


1ನೇ ಕೆಂಪೇಗೌಡ (ಹಿರಿಯ ಕೆಂಪೇಗೌಡ-ಕೆಂಪಯ್ಯ ದೇವರಸ) + ಮಾಗಡಿ ಚೆನ್ನಮ್ಮ

ಬಸವಯ್ಯ

ಕೆಂಪಸೋಮಯ್ಯ

ಗಿಡ್ಡೇಗೌಡ (1570-1585)

ಇಮ್ಮಡಿಕೆಂಪೇಗೌಡ + ಕೆಂಪಮ್ಮ + ಲಿಂಗಮ್ಮ (ಲಿಂಗಾಬೆ, ಲಿಂಗಮಾಂಬೆ, ಲಿಂಗರಾಜಮ್ಮ) + ಲಕ್ಷ್ಮಮ್ಮ


ಇಮ್ಮಡಿಕೆಂಪೇಗೌಡ + ಕೆಂಪಮ್ಮ + ಲಿಂಗಮ್ಮ (ಲಿಂಗಾಬೆ, ಲಿಂಗಮಾಂಬೆ, ಲಿಂಗರಾಜಮ್ಮ) + ಲಕ್ಷ್ಮಮ್ಮ
ಇಮ್ಮಡಿಹಿರಿಯ ಕೆಂಪೇಗೌಡ +
ಮುಮ್ಮಡಿ ಕೆಂಪೇಗೌಡ + ಬಸವಾಂಬೆ + ತೋಟದಮ್ಮ + ಬೈಯ್ಯಮಾಂಬೆ
ಹಲಸ ಕ್ಷೀರೇಂದ್ರ
ಹೊನ್ನಪ್ಪಗೌಡ
ದೊಡ್ಡವೀರಪ್ಪಗೌಡ + ಮುದ್ದುವೀರಮಾಂಬೆ
ಇಮ್ಮಡಿ ಕೆಂಪವೀರಪ್ಪಗೌಡ
ಹಲಸ
ಮುಮ್ಮಡಿ ಕೆಂಪೇಗೌಡ
ಮುಮ್ಮಡಿ ಕೆಂಪೇಗೌಡ + (1710-28)

ನಾಗರಾಜ್.ಎಂ.ಜಿ. ''ಬೆಂಗಳೂರು ಜಿಲ್ಲೆಯಲ್ಲಿ ಗೌಡ ಇತಿಹಾಸ, ಯಲಹಂಕ ವಂಶದ ಕೆಂಪೇಗೌಡ ದೊರೆಗಳು ಜೀವನ ಸಂಗತಿಗಳು ಇದರಲ್ಲಿ ಬೆಳ್ಳಿ ಬಾಗಿನ ಒಕ್ಕಲಿಗರ ಸಂಘದ ರಜತ ಮಹೋತ್ಸವ ಸಂಚಿಕೆ '' (ಬೆಂಗಳೂರು)

ಹಿರಿಯ ಕೆಂಪೇಗೌಡ

3.2 ಬಾಲ್ಯ :

ಹಿರಿಯ ಕೆಂಪೇಗೌಡನನ್ನು ಕೆಂಪೇಗೌಡ. 1ನೇ ಕೆಂಪೇಗೌಡ ಎಂದು ಬೆಂಗಳೂರು ಕೆಂಪೇಗೌಡ ಎಂದು ಕರೆಯುತ್ತಾರೆ. ಇವನು ಚಿಕ್ಕ ವಯಸ್ಸಿನಲ್ಲಿರುವಾಗಲೇ ನಾಯಕನ ಲಕ್ಷಣಗಳು ಇವನಲ್ಲಿ ಗೋಚರವಾಗಿದ್ದವು. ಹಿಂದೂ ಧರ್ಮದ ಮೂಲಕವೇ ಅವನು ರಾಜ್ಯವನ್ನು ಮುನ್ನಡೆಸುತ್ತಿದ್ದನು. ಇವನು ಶಿಕ್ಷಣವನ್ನು ಪಡೆದಿದ್ದು ಗುರುಕುಲ ಮಾದರಿಯಲ್ಲಿ, ಈ ಗುರುಕುಲವಿದ್ದದ್ದು ಹೈಗೊಂಡಪುರ (ಐವರು ಕಂದಪುರ) ಈ ಹಳ್ಳಿ ಹೆಸರುಘಟ್ಟಕ್ಕೆ ಹತ್ತಿರವಿದ್ದು ಅವನು ಅಲ್ಲಿಗೆ ಸೇರಿ ಅವನು 9 ವರ್ಷಗಳ ಕಾಲ ಅಲ್ಲಿ ತಂಗಿದ್ದು ಜ್ಞಾನಾರ್ಜನೆಯನ್ನು ಪಡೆದಿದ್ದ.[4]

ಯಲಹಂಕ ಮತ್ತು ಬೆಂಗಳೂರಿನಿಂದ ಆಳಿದ ಹಿರಿಯ ಕೆಂಪೇಗೌಡ ಕೆಂಪನಂಜೇಗೌಡನ ಪುತ್ರ.[5]

ಕೆಲವು ಶಾಸನಗಳು[6] ಕೆಂಪನಾಚೇಗೌಡನೆಂದೂ ಕರೆದಿವೆ. ಚೆನ್ನಾಂಬೆ ಹಿರಿಯ ಕೆಂಪೇಗೌಡನ ತಾಯಿ. ಮಾಗಡಿಯ ಚನ್ನಮ್ಮ ಇವನ ಪತ್ನಿಯಾಗಿದ್ದಳು.[7] ಇವನ ತಮ್ಮನಾದ

ಬಸವಯ್ಯ ರಾಮಗಿರಿ ರಕ್ಷಣೆಗೂ, ಮತ್ತೊಬ್ಬ ತಮ್ಮನಾದ ಕೆಂಪಸೋಮಯ್ಯ ಶಿವಗಂಗೆಗೂ ನೇಮಕಗೊಂಡಿದ್ದರು.[8] ಆ ವೇಳೆಗೆ ಶಿವಗಂಗೆ ರಕ್ಷಣಾತ್ಮಕ ನೆಲೆಯಾಗಿತ್ತು ಕೆಂಪೇಗೌಡನ ವಶದಲ್ಲಿದ್ದ ರಾಮಗಿರಿಯನ್ನು ಚನ್ನಪಟ್ಟಣದ ಜಗದೇವರಾಯನ ಸೈನಿಕರು ಮುತ್ತಿ ರಾಗ ಬಸವಯ್ಯನ ನಾಯಕತ್ವದಲ್ಲಿ ವೈರಿಗಳನ್ನು ಸೋಲಿಸಲಾಯಿತು. ಇದೇ ರೀತಿ ಶಿವಗಂಗೆ ಮುತ್ತಿದ್ದ, ದೇವನಹಳ್ಳಿ ಮತ್ತು ಸೀರ್ಯದ ಸೈನ್ಯವನ್ನು ಕೆಂಪಸೋಮಯ್ಯ ಸೋಲಿಸಿದನು. ಬೆಂಗಳೂರು ಸ್ಥಾಪನೋತ್ಸವದಲ್ಲಿ ಇವರಿಬ್ಬರೂ ಭಾಗವಹಿಸಿದ್ದರು. ಇವರಿಬ್ಬರೂ ಕ್ರಿ.ಶ. 1565ರ ತಾಳಿಕೋಟೆ ಕದನದಲ್ಲಿ ಹೋರಾಡಿ ಮಡಿದು ವೀರರಾದರು.[9] ಸಹೋದರರ ವೀರಸ್ವರ್ಗದ ಸ್ಮರಣೆಯಲ್ಲಿ ಇವರ ಮೂರ್ತಿಗಳನ್ನು ಶಿವಗಂಗೆಯಲ್ಲಿ ಮಾಡಿಸಿರುವ ಸಾಧ್ಯತೆಗಳಿವೆ. ಶಿವಗಂಗೆಯ ಗಂಗಾಧರೇಶ್ವರ ಮತ್ತು ಸ್ವರ್ಣಾಂಬ ದೇವಾಲಯಗಳು ಹಿರಿಯ ಕೆಂಪೇಗೌಡನಿಂದ ಅಭಿವೃದ್ಧಿಗೊಂಡವು. ರಾಜಕಾರ್ಯ ನಿರ್ವಹಣೆಗಾಗಿ ಶಿವಗಂಗೆಯಲ್ಲಿ ನಿರ್ಮಾಣಗೊಂಡ ಕೆಂಪೇಗೌಡ ಹಜಾರ[10] ಬೆಂಗಳೂರಿನಲ್ಲಿ ಕೋಟೆ, ದೇವಾಲಯ, ಕೆರೆಗಳು ಈ ಅವಧಿಯ ರಚನೆಗಳು.

3.3 ಇತರ ಅಂಶಗಳು

ಈ ಮನೆತನದ ಹೆಣ್ಣುಮಗಳು ವಿವಾಹಪೂರ್ವದಲ್ಲಿ ಬಂಡಿದೇವರಿಗೆ ಬಲಗೈ ಕಿರುಬೆರಳನ್ನು ಕತ್ತರಿಸುವ ಕ್ರೂರ ಸಂಪ್ರದಾಯವನ್ನು ತಪ್ಪಿಸಿದ ಕೀರ್ತಿ ಹಿರಿಯ ಕೆಂಪೇಗೌಡನಿಗೆ ಸಲ್ಲುತ್ತದೆ. ಇದು ಸಾಮಾಜಿಕ ಕ್ಷೇತ್ರದಲ್ಲೊಂದು ಕ್ರಾಂತಿಕಾರಿ ಹೆಜ್ಜೆ.

ಹಿರಿಯ ಕೆಂಪೇಗೌಡನನ್ನು ಸದಾಶಿವರಾಯನ ಕಾಲದಲ್ಲಿ ಬಂಧಿಸಿ, ಆನೆಗೊಂದಿಯ ಸೆರೆಯಲ್ಲಿಟ್ಟಿದ್ದರೆಂದೂ ಆಗ ಬೆಂಗಳೂರು, ಚನ್ನಪಟ್ಟಣದ ಜಗದೇವರಾಯನ

ನಿಯಂತ್ರಣಕ್ಕೊಳಪಟ್ಟಿತ್ತೆಂದೂ, ಎಂ.ಫಜಲ್ ಹಸನ್ ತಮ್ಮ ಬೆಂಗಳೂರ್ ಥ್ರೂ ದಿ ಸೆಂಚುರೀಸ್ ಗ್ರಂಥದಲ್ಲಿ ಅಭಿಪ್ರಾಯಪಟ್ಟಿದ್ದಾರೆ. ಹಿರಿಯ ಕೆಂಪೇಗೌಡ ಸ್ವತಂತ್ರ ಭೈರವ ನಾಣ್ಯವನ್ನು ಟಂಕಿಸಿದ ಹಿನ್ನಲೆಯಲ್ಲಿ ಬಂಧಿಸಲ್ಪಟ್ಟನೆಂಬುದು ಬಹುಮಂದಿ ಲೇಖಕರ ಅಭಿಪ್ರಾಯ. ಈ ಕಾರಣವನ್ನು ಐತಿಹಾಸಿಕವಾಗಿ ಸಮರ್ಥಿಸಲಾಗದಿದ್ದರೂ ಕ್ಷೇತ್ರಾಧ್ಯಯನ ಸಂದರ್ಭದ ವಿಚಾರಗಳು ನಂಬಿಕೆ ಹುಟ್ಟಿಸುತ್ತವೆ. ತನ್ನ ಮನೆ ದೇವರಾದ ಭೈರವನ ಹೆಸರಿನಲ್ಲಿ ಟಂಕಿಸಿದ್ದ ಅವರೇಕಾಳು ಗಾತ್ರದ ಚಿನ್ನದನಾಣ್ಯವು ಲಕ್ಷ್ಮೀಪುರ (ವಡ್ಡವಟ್ಟ)ದ ಬೇಡತಿ ಕಲ್ಲಿನ ಬಳಿ ದೊರೆತಿದ್ದು ಇದನ್ನು ಹಳ್ಳಿಗರು ವಿಜಯ ಎಂದು ಕರೆಯುತ್ತಿದ್ದರಂತೆ[11] ಇನ್ನು ಬೆಂಗಳೂರಿನಲ್ಲಿ ನಿರ್ಮಾಣಗೊಂಡ ಕೋಟೆ ವಿಚಾರದಲ್ಲಿ ಮನಸ್ತಾಪವಿದ್ದಿದ್ದರೆ, ಸದಾಶಿವರಾಯನೇ 30 ಸಾವಿರ ವರಹ ಆದಾಯವುಳ್ಳ 12 ಹೋಬಳಿಗಳನ್ನು ಹಿರಿಯ ಕೆಂಪೇಗೌಡನಿಗೆ ಬಿಟ್ಟುಕೊಡುತ್ತಿರಲಿಲ್ಲವಷ್ಟೆ. ಆದರೆ ಕೃಷ್ಣದೇವರಾಯನ ಉತ್ತರಾಧಿಕಾರಕ್ಕೆ ಸಂಬಂಧಿಸಿದ ಅಂತಃಕಲಹದಲ್ಲಿ ಹಿರಿಯ ಕೆಂಪೇಗೌಡ ವಹಿಸಿದ ಪಾತ್ರದಿಂದಾಗಿ ಬಂಧನವಾಗಿರಬಹುದೆಂದು ಹ.ಕ.ರಾಜೇಗೌಡರು ಸಂಶಯಪಡುತ್ತಾರೆ. ಚನ್ನಪಟ್ಟಣದ ಜಗದೇವರಾಯನೂ ಸೇರಿದಂತೆ ಹಲವು ಪಾಳೇಗಾರರು ಕೆಂಪೇಗೌಡನ ಏಳಿಗೆ ವಿರುದ್ಧ ಹುನ್ನಾರ ನಡೆಸಿರಬಹುದು. ಹಿರಿಯ ಕೆಂಪೇಗೌಡ ವಿಜಯನಗರದ ಅನುಮತಿ ಇಲ್ಲದೇ ನಾಣ್ಯವನ್ನು ಟಂಕಿಸಿದನೆಂಬುದು ನಂಬಲಾಗದು. ಏಕೆಂದರೆ ಕೆಳದಿ ಮುಂತಾದ ನಾಯಕರಿಗೆ ಸ್ವತಂತ್ರ ನಾಣ್ಯ ಟಂಕಿಸುವ ಅಧಿಕಾರ ನೀಡಲಾಗಿತ್ತು. ಆದರೆ ನಾಣ್ಯಕ್ಕಿಟ್ಟ ಹೆಸರಿನಿಂದಾದ ಮನಸ್ತಾಪ ಬಂದು ಅನುಮತಿ ನಂತರ ಭೈರವ ನಾಣ್ಯಕ್ಕೆ 'ವಿಜಯ' ಎಂಬ ಹೆಸರು ಬಂದಿರುವ ಸಾಧ್ಯತೆಗಳನ್ನು ಕಡೆಗಣಿಸಲಾಗದು.

ಬೆಂಗಳೂರು[12] ಮತ್ತು ಕುಣಿಗಲ್[13] ದಾನಶಾಸನ ಹಿರಿಯ ಕೆಂಪೇಗೌಡನನ್ನು ಉಲ್ಲೇಖಿಸುತ್ತದೆ. ಅದೇ ತಾಲ್ಲೂಕಿನ ಹೊಸೂರಿನಲ್ಲಿ[14] ಪುರವುತ ಕೊಡಲಾಗಿದೆ. ಸಂಕ್ರಾಂತಿಯ ಶಿಭದಿನದಂದು ಗಂಗಾಧರೇಶ್ವರನಿಗೆ ಘಂಟೆಯೊಂದನ್ನು ಸಮರ್ಪಿಸಿ ತಮಗೆ ಪುತ್ರಪೌತ್ರ ಪರಂಪರೆ ಅಭಿವೃದ್ಧಿಯಾಗುವುದರ ಜತೆಯಲ್ಲಿ ಮಾತಾಪಿತೃಗಳಿಗೆ[15] ಮೋಕ್ಷವನ್ನು ಬಯಸಿದ್ದಾನೆ. ಹೀಗೆ ಬೆಂಗಳೂರು, ರಾಮಗಿರಿ, ಶಿವಗಂಗೆ, ಕುಣಿಗಲ್ ಸ್ಥಳಗಳಲ್ಲಿ ಹಿರಿಯ ಕೆಂಪೇಗೌಡರ ಸೇವೆ ಇಲ್ಲವೇ ದಾನಾದಿ ಚಟುವಟಿಕೆಗಳನ್ನು ಕುರಿತಾದ ಶಾಸನೋಲ್ಲೇಖಗಳಿವೆ. ಆದರೆ ಮಾಗಡಿ ಸ್ಥಳ ಸುತ್ತಮುತ್ತ ದೊರೆತಿರುವ ಯಾವ ಶಾಸನದಲ್ಲೂ ಹಿರಿಯ ಕೆಂಪೇಗೌಡರ ಹೆಸರು ಉಕ್ತವಾಗಿಲ್ಲ. ಕೃಷ್ಣದೇವರಾಯ, ಅಚ್ಯುತರಾಯ ಮತ್ತು ಸದಾಶಿವರಾಯನ ಕಾಲದ ಸುಮಾರು 15ಕ್ಕೂ ಹೆಚ್ಚು ಶಾಸನಗಳು ಇಲ್ಲಿ ದೊರೆತಿವೆ. ಇವುಗಳ ಆಧಾರದಂತೆ ಈ ಪ್ರದೇಶದಲ್ಲಿ ವಿಜಯನಗರದ ಸಾರ್ವಭೌಮದ ಕಾರ್ಯಕರ್ತರು, ಸಲಹಾರಾಜರು ಇಲ್ಲವೇ ಮಹಾಮಂಡಲಾಧೀಶ್ವರರು ಆಡಳಿತಾಧಿಕಾರಿಗಳಾಗಿ ಉಲ್ಲೇಖಿತರಾಗಿದ್ದಾರೆ. ಶಿವಗಂಗೆಯ ಗಂಗಾಧರೇಶ್ವರನ ಗುಡಿಯಲ್ಲಿ ಕೈ ಮುಗಿದು ನಿಂತಿರುವ ಹಿರಿಯ ಕೆಂಪೇಗೌಡನ ಕಂಚಿನ ಪ್ರತಿಮೆ ಇದೆ. ಈ ವಿಗ್ರಹದ ಬುಡದಲ್ಲಿ[16] ''ಬೆಂಗಳೂರು ಕೆಂಪನಾಚಯ್ಯಗೌಡರ ಕೊಮಾರ ಕೆಂಪಯ್ಯಗೌಡನು ಗಂಗಾಧರ ಸ್ವಾಮಿಯ ಪಾದಕ್ಕೆ ಸದಾ ನಮಸ್ಕಾರ'' ಎಂದಿದೆ. ಈ ಶಾಸನದ ಕಾಲ ಕ್ರಿ.ಶ.1609ಕ್ಕೆ ಸರಿ ಹೊಂದುತ್ತದೆ. ಇದರಿಂದಾಗಿ ಕೆಂಪೇಗೌಡನ ಮಗ ಇಮ್ಮಡಿಕೆಂಪೇಗೌಡ ತನ್ನ ಆಳ್ವಿಕೆಯ ಕಾಲದಲ್ಲಿ ತಂದೆಯ ಪ್ರತಿಮೆಯನ್ನು ಮಾಡಿಸಿ ಶಿವಗಂಗೆಯ ಗಂಗಾಧರೇಶ್ವರನ ಗುಡಿಯಲ್ಲಿ ಪ್ರತಿಷ್ಠಾಪಿಸಿದ್ದಾನೆ ಎಂಬುದಕ್ಕೆ ಅಡ್ಡಿಯಿಲ್ಲ.

ಕೆಂಪೇಗೌಡನ ಕಾಲದ ಯಲಹಂಕ ನಾಡಿನ ವಿಸ್ತೀರ್ಣವನ್ನು ತಿಳಿಯಲು ಲೆವಿಸ್ ಬಿ.ರೈಸ್(ಬಿ.ಎಲ್.ರೈಸ್) ರವರು ತಯಾರಿಸಿದ ವಿವಿಧ ಪಾಳೇಗಾರರ ಕಾಲದ ಈ ನಕ್ಷೆಯೂ ಸಹಕಾರಿಯಾಗಿದೆ.

ಕೆಂಪೇಗೌಡನು ವಿಜಯನಗರದವರ ರಾಜಕೀಯ ಸಂಚಿನಿಂದ ಕೆಲವು ವರ್ಷಗಳ ಕಾಲ ಅವರ ಸೆರೆಯಲ್ಲಿ ಇರಬೇಕಾಗಿ ಬಂದರೂ ಕೊನೆಗೆ ದೋಷ ಮುಕ್ತನಾಗಿ ಬಿಡುಗಡೆ ಹೊಂದಿದನು. ಇದು ಆತನ ನೈತಿಕ ಶಕ್ತಿಯನ್ನು ಹೆಚ್ಚಿಸಿತು. ಅವನು ಮುಂದೆ ಧೃತಿಗೆಡದೆ ಬೆಂಗಳೂರು ನಗರವನ್ನು ಅಭಿವೃದ್ಧಿಪಡಿಸಿ ಬೆಂಗಳೂರು ಕೆಂಪೇಗೌಡನೆನಿಸಿದನು. ತಾಳಿಕೋಟೆಯ ಯುದ್ಧಾನಂತರ ವಿಜಯನಗರ ದುರ್ಬಲಗೊಂಡಿದ್ದರಿಂದ ಬೆಂಗಳೂರು ಅಥವಾ ಯಲಹಂಕ ರಾಜ್ಯ ನಾಮಮಾತ್ರದ ಅಧೀನತ್ವವನ್ನು ಬಿಟ್ಟರೆ ತನ್ನ ಆಂತರೀಕ ವ್ಯವಹಾರಗಳಲ್ಲಿ ಸ್ವತಂತ್ರ್ಯವಾಯಿತು.

ಇಲ್ಲಿ ಗಮನಿಸಬೇಕಾದ ಒಂದು ಮುಖ್ಯ ಅಂಶವೆಂದರೆ ಈ ರಾಜಕೀಯ ಗೊಂದಲದ ಕಾಲದ ಆಡಳಿತವು ಕಟ್ಟಳೆ, ಕಾನೂನುಗಳ ಪ್ರಭಾವಕ್ಕಿಂತಲೂ ಹೆಚ್ಚಾಗಿ ರಾಜನ ವೈಯಕ್ತಿಕ ವರ್ಚಸ್ಸನ್ನು ಅವಲಂಬಿಸಿದ್ದಿತು. ಅವನು ತನ್ನ ಸ್ವಸಾಮರ್ಥ್ಯದಿಂದ ಚಕ್ರವರ್ತಿಯ ಮನ್ನಣೆ ಗಳಿಸಿ ಶ್ರೀಮತು ರಾಜಮಾನ್ಯ ಕೆಂಪಗೌಡ ಎನಿಸಿದನು ಎಂದು ಶಾಸನಗಳು ದಾಖಲಿಸಿವೆ. ಕೆಂಪೇಗೌಡನ ಸೊಸೆ ಲಕ್ಷ್ಮಮ್ಮ ಕೋಟೆಯ ದ್ವಾರ ಸ್ಥಿರವಾಗಿ ನಿಲ್ಲಲು ತನ್ನನ್ನೇ ಬಲಿಕೊಟ್ಟುಕೊಂಡ ಐತಿಹ್ಯವಿದೆ. ಆಕೆಯ ಮಹಾತ್ಯಾಗಕ್ಕಾಗಿ ಕೆಂಪೇಗೌಡ ಕೋರಮಂಗಲದಲ್ಲಿ ಲಕ್ಷ್ಮಮ್ಮನ ಹೆಸರಿನಲ್ಲಿ ಒಂದು ಸ್ಮಾರಕವನ್ನು ಕಟ್ಟಿಸಿದನು. ಈ

ಘಟನೆಗಳು ಏನನ್ನು ಸೂಚಿಸುತ್ತವೆಯೆಂದರೆ ಯಾವುದೇ ರಾಜಮಹಾರಾಜರ ಅನುಗ್ರಹದಿಂದ ಕೆಂಪೇಗೌಡ ರಾಜ್ಯ ಪಡೆಯದೆ ತನ್ನ ಧೈರ್ಯ ಸಾಹಸ ಮತ್ತು ತನ್ನ ಕುಟುಂಬದವರ ತ್ಯಾಗಬಲಿದಾನಗಳಿಂದ ರಾಜ್ಯಕಟ್ಟಿದನು.

ಬೆಂಗಳೂರಿನ ಯಲಹಂಕ ಪ್ರಭುಗಳೂ ನಾಡಪ್ರಭುಗಳಾಗಿ ಬಹುಕಾಲ ಆಡಳಿತ ನಡೆಸಿದರು. ಅಧಿಕಾರ ವ್ಯಾಪ್ತಿಯನ್ನು ಬಲಪಡಿಸಿಕೊಳ್ಳಲು ಮತ್ತು ರಾಜ್ಯವಿಸ್ತರಿಸಲು ಹವಣಿಸಿದರು. ಇದರಿಂದಾಗಿ ಯಲಹಂಕ ಪ್ರಭುಗಳು ಹಿರಿಯ ಕೆಂಪೇಗೌಡ ಅಥವಾ ಒಂದನೇ ಕೆಂಪೇಗೌಡನ ಕಾಲದಲ್ಲಿ (1515-1569) ಅಚ್ಯುತರಾಯನಿಂದ ಬೆಂಗಳೂರು, ವರ್ತೂರು, ಬೇವೂರು, ಹಲಸೂರು, ಕೆಂಗೇರಿ, ತಲಘಟ್ಟಪುರ, ಹೆಸರುಘಟ್ಟ ಮೊದಲಾದ ಹನ್ನೆರಡು ಸ್ಥಳಗಳ ಮೇಲೆ ಅಧಿಕಾರ ವಿಸ್ತರಣೆಗೆ ಮನ್ನಣೆ ಪಡೆದರು ಬೆಂಗಳೂರು ನಗರದಲ್ಲಿ ಕೋಟೆ ಕೊತ್ತಲಗಳನ್ನು ನಿರ್ಮಿಸಿದರು. ಇದರಿಂದಾಗಿ ಯಲಹಂಕದ ನಾಡಪ್ರಭುಗಳಾಗಿದ್ದ ಕೆಂಪೇಗೌಡರ ಮನೆತನ ಒಂದು ತಾಳೆಯಪಟ್ಟಿನ ಅಥವಾ ಸಾಮಂತ ರಾಜರ ಸ್ಥಾನಮಾನಕ್ಕೇರಿತು.[17]

ಒಂದನೆಯ ಕೆಂಪೇಗೌಡನನ್ನು ಆನೆಗೊಂದಿಯಲ್ಲಿ ಸೆರೆಯಿಟ್ಟ ಪ್ರಸಂಗವೊಂದನ್ನು ಚರಿತ್ರೆಕಾರರು ಉಲ್ಲೇಖಿಸುತ್ತಾರೆ, "One day, on the advice of the all powerfull Ramaraya. Emperor Sadasiva Raya summonded kempegowda to the imperial court. And, on his arrival at vijayanagar RamaRaya had him seized and threw him into a

prison at Ane gundi"[18]

ಈ ಬಂಧನಕ್ಕೆ ಕಾರಣ ಅವನು ಚಲಾವಣೆ ತಂದ ಭೈರವ ನಾಣ್ಯಗಳು. ಬೆಂಗಳೂರು ನಗರ ನಿರ್ಮಾಣದ ತರುಣದಲ್ಲಿಯೇ ಯಲಹಂಕನಾಡು ಭೀಕರ ಕ್ಷಾಮವನ್ನೆದುರಿಸಬೇಕಾಯಿತೆಂದೂ, ಆ ಕ್ಲಿಷ್ಟ ಪರಿಸ್ಥಿತಿಯನ್ನೆದುರಿಸಲು ಸ್ವತಂತ್ರ್ಯವಾಗಿ ನಾಣ್ಯ ಚಲಾವಣೆಗೆ ತರಬೇಕಾಯಿತೆಂದೂ ಇದರಿಂದ ಕುಪಿತಗೊಂಡ ರಾಮರಾಯ ಕೆಂಪೇಗೌಡನನ್ನು ಬಂಧನದಲ್ಲಿರಿಸುವಂತೆ ಪ್ರೇರೇಪಿಸಿದನೆಂದೂ ತಿಳಿದು ಬರುತ್ತದೆ. ಹೀಗೆ ಒಂದನೆಯ ಕೆಂಪೇಗೌಡ ಬಂಧನದಲ್ಲಿದ್ದಾಗ, There fore, Yelahankandu, along with the newly built fort Bangalore become part of channapattana principality by an imperial decree.[19]

ಆದರೆ ಈ ಘಟನೆಗೆ ಸಂಬಂಧಿಸಿದಂತೆ ಯಾವ ಆಧಾರಗಳು ದೊರೆಯುವುದಿಲ್ಲ. ಮತ್ತೊಂದು ಗಮನಿಸಬೇಕಾದ ವಿಷಯವೆಂದರೆ, ಕೆಂಪೇಗೌಡ ಚಲಾವಣೆಗೆ ತಂದನೆಂದು ಹೇಳಲಾದ ಭೈರವ ನಾಣ್ಯ ಈವರೆಗೆ ದೊರೆಯದೇ ಇರುವುದು.

ಭೈರವನಾಣ್ಯವನ್ನು ಟಂಕಿಸಿದ್ದಕ್ಕಿಂತ ಬೆಂಗಳೂರು ನಿರ್ಮಾಣ ಮತ್ತು ಕೃಷ್ಣದೇವರಾಯನ ನಂತರ ಉತ್ತರಾಧಿಕಾರದ ಘರ್ಷಣೆಯಲ್ಲಿ ಯಲಹಂಕದವರು ಜಕ್ಕರಾಯನ ಪರ ವಹಿಸಿದುದು ಒಂದನೆಯ ಕೆಂಪೇಗೌಡ ಮತ್ತು ವಿಜಯನಗರದ ಮಧ್ಯೆ ವಿರಸವನ್ನುಂಟುಮಾಡಿರುವ ಸಾಧ್ಯತೆ ಕಂಡುಬರುತ್ತದೆ. ಅಲ್ಲದೇ ಇದರೊಂದಿಗೆ ಚನ್ನಪಟ್ಟಣದ ಜಗದೇವರಾಯನ ಮುಂದಾಳುತನದಲ್ಲಿ ಅನೇಕ ಪಾಳೆಯಗಾರರು

ಕೆಂಪೇಗೌಡನ ವಿರುದ್ಧ ರಾಮರಾಯನಲ್ಲಿ ದೂರು ಹೇಳಿ ಅವನು ಈ ಕೋಟೆಯ ನಿರ್ಮಾಣ ಸ್ವತಂತ್ರವಾಗುವ ಹುನ್ನಾರವೆಂದರು.[20]

1513ರಲ್ಲಿ ಕೆಂಪೇಗೌಡ ಅಧಿಕಾರಕ್ಕೆ ಬಂದಾಗ ಶ್ರೀಕೃಷ್ಣದೇವರಾಯ ಹಂಪೆಯಲ್ಲಿ ಮೊದಲ ಬಾರಿಗೆ ಏರ್ಪಡಿಸಿದ ವಿಜಯದಶಮಿ ದರ್ಬಾರಿಗೆ ಕೆಂಪೇಗೌಡರನ್ನು ಕರೆಸಿಕೊಂಡು ಗೌರವಿಸಿ 'ರಾಯ' ಎಂಬ ಬಿರುದು ನೀಡಿದ. ಈ ಮೊದಲೇ ಅವನು ತೋರಿದ ಸಾಹಸಕ್ಕಾಗಿ ಶಿವನಸಮುದ್ರ ಸೀಮೆಯನ್ನು ಯಲಹಂಕ ನಾಡಿಗೆ ವಹಿಸಲಾಗಿತ್ತು.[21]

ಹೀಗೆ ಸುಮಾರು 56 ವರ್ಷಗಳ ಕಾಲ ರಾಜ್ಯವಾಳಿದ ಕೆಂಪೇಗೌಡರು (1513-69) ಬೆಂಗಳೂರು ಹಳ್ಳಿಯನ್ನು ಮಹಾನಗರವಾಗಿ ಮಾರ್ಪಡಿಸಿ ಭವ್ಯ ದೇವಾಲಯಗಳನ್ನು ನಿರ್ಮಾಣ ಮಾಡಿ ''ಧರ್ಮ ಪ್ರಭು'' ವೆನಿಸಿಕೊಂಡು ಯಲಹಂಕ ಪ್ರಭುಗಳು ತಮ್ಮ ಇಳಿವಯಸ್ಸಿನಲ್ಲಿ ಭಗವಂತನ ಪಾದಾರವಿಂದಗಳಲ್ಲಿ ಆಶ್ರಯ ಪಡೆದರು. ಅವರ ತರುವಾಯ ಪಟ್ಟಕ್ಕೆ ಬಂದ ಇಮ್ಮಡಿ ಕೆಂಪೇಗೌಡರು ತಂದೆಯ ಮೇಲ್ಪಂಕ್ತಿಯನ್ನು ಅನುಸರಿಸಿ ರಾಜ್ಯವಾಳಿ ಬೆಂಗಳೂರಿನ ಕೀರ್ತಿಯನ್ನು ಮತ್ತುಷ್ಟು ವಿಸ್ತರಿಸಿದರು.[22]

ಕೆಂಪೇಗೌಡ ವಿಜಯನಗರಕ್ಕೆ ಹತ್ತಿರವಾಗಿರುತ್ತಿರುವುದು ಅನೇಕರಿಗೆ ಕಣ್ಣುರಿಯಾಯಿತು. ಇವರಲ್ಲಿ ಪ್ರಧಾನರಾದವರೆಂದರೆ ಚನ್ನಪಟ್ಟಣದ ಜಗದೇವರಾಯ ಮತ್ತು ಹೊಳವನ ಹಳ್ಳಿಯ ರಣಭೈರೇಗೌಡ. ಶಿವಗಂಗೆಯ ಪ್ರಾಂತ್ಯಾಧಿಕಾರಿಯಾಗಿದ್ದ ಕೆಂಪೇಗೌಡನ ತಮ್ಮ ಬಸವೇಗೌಡನನ್ನು ತಮ್ಮ ಬಲೆಗೆ ಹಾಕಿಸಿಕೊಂಡು ಕೆಂಪೇಗೌಡರಿಗೆ ಕಿರುಕುಳ ಕೊಡಲಾರಂಭಿಸಿದರು. ಕೆಂಪೇಗೌಡ ಬೆಂಗಳೂರು ಕೋಟೆಯ ನಿರ್ಮಾಣಕ್ಕೆ

ಕೈಹಾಕಿದ ಮೇಲೆಯಂತೂ ಇವರ ಉಪಟಳ ಅತಿಯಾಯಿತು. ಆದರೆ ಶ್ರೀಕೃಷ್ಣದೇವರಾಯ ಬದುಕಿರುವವರೆಗೆ ಇವರ ಆಟ ನಡೆಯಲಿಲ್ಲ. ದಿನ ದಿನಕ್ಕೆ ಕೆಂಪೇಗೌಡ ಪ್ರವರ್ಧಮಾನವಾಗುತ್ತಲೇ ನಡೆದ.

ಕೃಷ್ಣದೇವರಾಯ ತೀರಿಕೊಂಡಾಗ ವಿಜಯನಗರದ ಸಿಂಹಾಸನಕ್ಕೆ ದೊಡ್ಡ ಪೈಪೋಟಿಯೇ ನಡೆಯಿತು. ಜಕ್ಕರಾಯನಿಗೆ ಪಟ್ಟವಾಗಬೇಕೆಂದು ಕೆಲವರು, ಅಚ್ಚುತರಾಯನಿಗೆ ಪಟ್ಟವಾಗಬೇಕೆಂದು ಕೆಲವರು ಅಖಾಡಕ್ಕಿಳಿದರು. ಒಂದು ಕಡೆ ಎಚ್ಚಮ್ಮ ನಾಯಕ, ಮತ್ತೊಂದು ಕಡೆ ಅಳಿಯ ರಾಮರಾಯ, ಹಿರಿಯನಾದ ಜಕ್ಕರಾಯನಿಗೆ ಪಟ್ಟವಾಗಬೇಕೆಂದು ಎಚ್ಚಮ್ಮನಾಯಕನ ಗುಂಪಿನ ವಾದ. ಬಾಲಕ ಅಚ್ಚುತರಾಯ ಅಧಿಕಾರಕ್ಕೆ ಬರುವುದರಲ್ಲಿ ರಾಮರಾಯನಿಗೆ ಲಾಭವಿತ್ತು. ಈ ಅಧಿಕಾರದ ಕಿತ್ತಾಟದಲ್ಲಿ ಕೆಂಪೇಗೌಡ ಜಕ್ಕದೇವರಾಯನಿಗೆ ಬೆಂಬಲ ಸೂಚಿಸಿದರು. ಅಲ್ಲದೇ ಅವನನ್ನು ಬೆಂಬಲಿಸಿದ ಕುರುಹಿಗೆ ಕೆಂಪೇಗೌಡ ಜಕ್ಕರಾಯನ ಕೆರೆಯನ್ನು ನಿರ್ಮಿಸಿ ಗೌರವವನ್ನು ಸೂಚಿಸಿದನು. ಇದರಿಂದ ಕುಪಿತನಾದ ರಾಮರಾಯ ಕೆಂಪೇಗೌಡನನ್ನು ಉಪಾಯವಾಗಿ ಹಂಪೆಗೆ ಕರೆಸಿಕೊಂಡು ಆನೆಗುಂದಿಯಲ್ಲಿ ಸೆರೆಯಲ್ಲಿಟ್ಟನೆಂದು ಕೆಲವು ವಿದ್ವಾಂಸರು ಹೇಳಿದ್ದಾರೆ. ಇದಕ್ಕೆ ಯಾವುದೇ ಆಧಾರಗಳಿಲ್ಲ. ಆದರೆ ಈ ಘಟನೆಯಿಂದ ಬೇಸತ್ತ ಕೆಂಪೇಗೌಡ ತನ್ನ ಮಗ ಇಮ್ಮಡಿ ಕೆಂಪೇಗೌಡನಿಗೆ ಅಧಿಕಾರ ವಹಿಸಿಕೊಟ್ಟು ತನ್ನ ಪತ್ನಿಯೊಂದಿಗೆ ತನ್ನ ಕಡೆಯ ದಿನಗಳನ್ನು ಶಿವಗಂಗೆಯಲ್ಲಿ ಕಳೆದನೆಂಬುದಕ್ಕೆ ಸಾಕಷ್ಟು ಆಧಾರಗಳು ದೊರೆಯುತ್ತವೆ.[23]

ಅನೇಕ ಶಾಸನಗಳು ಕೆಂಪೇಗೌಡನನ್ನು ಧೀರಧರ್ಮಪ್ರಭು ಎಂದು ಹೊಗಳುತ್ತಾರೆ. ಕೃಷ್ಣಗಿರಿಯಿಂದ ದಡಿಗದವರೆಗೆ, ಕಾವೇರಿಯಿಂದ ಹಿಂದೂಪುರದವರೆಗೆ ಈತ ಆಳಿದ ಬಗೆಗೆ

ಇಂದಿಗೂ ಕೆಂಪೇಗೌಡ ಮಂಟಪಗಳು ದೊರೆಯುತ್ತವೆ. ಈ ವಂಶದವರು ನಿರ್ಮಿಸಿದ ಕೆರೆಗಳು, ದೇವಾಲಯಗಳು ಅವರ ಕೀರ್ತಿಯ ಜೀವಂತ ಸಾಕ್ಷಿಯಾಗಿ ಇಂದಿಗೂ ಇವೆ. ಯಲಹಂಕ ಪ್ರಭು ಕೆಂಪೇಗೌಡ ಒಬ್ಬ ಮಹಾನ್ ವ್ಯಕ್ತಿ. ಆತನ ಜೀವನ ಅನುಕರಣೀಯ.[24]

ಗಂಗಾನದಿ ಸಂವಾದಮು ಎಂಬ ತೆಲುಗು ಯಕ್ಷಗಾನ ಕೃತಿಯನ್ನು ಹಿರಿಯ ಕೆಂಪೇಗೌಡ ಬರೆದನೆಂದು ತಪ್ಪಾಗಿ ಅರ್ಥಮಾಡಿಕೊಳ್ಳಲಾಗಿದೆ. ಯಕ್ಷಗಾನ ಕೃತಿಯ ಪ್ರಾರ್ಥನಾ ಪದ್ಯವೊಂದರಲ್ಲಿ ಬರುವ ಹಿರಿಯ ಕೆಂಪನೃಪ ರಕ್ಷಿಂಚು ಸೋಮೇಶ್ವರಾ ಎಂಬ ಮಾತು ಈ ವಿವಾದಕ್ಕೆ ಎಡೆಮಾಡಿಕೊಟ್ಟಂತೆ ಕಾಣುತ್ತದೆ. ಆದರೆ ಇದು ತಪ್ಪು ಗ್ರಹಿಕೆಯಿಂದಾಗಿರುವ ಅಭಿಪ್ರಾಯವೆಂಬುದು ಈ ಮಾತಿನಿಂದಲೂ ಗೊತ್ತಾಗುತ್ತದೆ. ಆದರೆ, ಈ ತೆಲುಗು ಕಾವ್ಯವನ್ನು ನೋಡಿ, ಸುಬ್ಬರಾಮಪ್ಪನವರು ಮಾಗಡಿ ಕೆಂಪೇಗೌಡನೇ ಇವನ ವಂಶದವರೂ ತೆಲುಗರೆಂದು ನಿರ್ಣಯಿಸಿಬಿಟ್ಟರು. ಇವರಿಬ್ಬರಿಗಿನ್ನೇನೂ ಗೊತ್ತಿಲ್ಲದಿದ್ದರಿರಲಿ, ಇವರೇ ಉದಾಹರಿಸಿರುವ ಮಂಗಳಾಚರಣೆಯ ವೃತ್ತದಲ್ಲಿರುವ ಹಿರಿಯ ಕೆಂಪನೃಪತಿ ಎಂಬುದನ್ನಾದರೂ ನೋಡಲಿಲ್ಲ. ಅಷ್ಟೇ ಅಲ್ಲ, ಹಿರಿಯ ಕೆಂಪನೃಪತಿನ ರಕ್ಷಿಂಚು ಸೋಮೇಶ್ವರ ಎಂಬ ಮಾತಿನ ಅರ್ಥ ಹಿರಿಯ ಕೆಂಪನೃಪತಿಯನ್ನು ರಕ್ಷಿಸು ಸೋಮೇಶ್ವರ ಎಂದಾಗುತ್ತದೆ. ಪ್ರಾಯಃ ತೆಲುಗು ಯಕ್ಷಗಾನ ಕವಿಯೊಬ್ಬ ಕೆಂಪೇಗೌಡನ ಸಹಾಯವನ್ನು ಪಡೆದವನು ಈ ಮಾತನ್ನು ಹೇಳಿರಬೇಕು. ಈ ಒಂದು ವಾಕ್ಯದ ಆಧಾರದಿಂದ ಇವನ ವಂಶಸ್ಥರು ತೆಲುಗರು ಎಂದು ಹೇಳುವುದು ತಪ್ಪಾಗುತ್ತದೆ.[25]

ಕೆಂಪೇಗೌಡನ ಅಧಿಕಾರಾವಧಿಯಲ್ಲಿ ಇವನ ಏಳಿಗೆಯನ್ನು ಸಹಿಸದ ಹಲವರಲ್ಲಿ

ಒಬ್ಬನಾದ ಚನ್ನಪಟ್ಟಣದ ಜಗದೇವರಾಯನ ಮುಂದಾಳುತನದಲ್ಲಿ ಅನೇಕ ಪಾಳೇಯಗಾರರು ಕೆಂಪೇಗೌಡನ ವಿರುದ್ಧ ರಾಮರಾಯನಲ್ಲಿ ದೂರುಹೇಳಿ ಅವನು ಈ ಕೋಟೆಯ ನಿರ್ಮಾಣ ಸ್ವತಂತ್ರವಾಗುವ ಹುನ್ನಾರೆಂದರು. ಇದು ಪ್ರಾಯಶಃ ವಿಜಯನಗರದ ಅರಸರಲ್ಲಿ ಅಸಮಾಧಾನವನ್ನುಂಟು ಮಾಡಿರಬೇಕು. ಆಗಿನ ಕಾಲದಲ್ಲಿ ಭೀಕರವಾದ ಕ್ಷಾಮವುಂಟಾಯಿತೆಂಬ ಬಗ್ಗೆಯೂ ಅನುಮಾನವಿದೆ.

There was a teriible famine in the Deccan in 1457 A.D. It is said to have lasted for two years. Parts of the vijayanagar kingdom should have suffered from it as the telugu country, now ravaged by it. How for it extended in to the interior and whether if affected any part of South India proper is not known.

ಮೇಲಿನ ಹೇಳಿಕೆಯು ಯಲಹಂಕ ನಾಡು ಭೀಕರ ಕ್ಷಾಮಕ್ಕೆ ತುತ್ತಾಗದಿರುವುದನ್ನು ಪ್ರತಿಪಾದಿಸುತ್ತದೆ. ಆದರೆ ಆ ಬಂಧನದ ಘಟನೆಯ ಹಿನ್ನಲೆ, ಮುನ್ನೆಲೆಗಳೇನು ಎಂಬ ವಿಚಾರ ಸಮಸ್ಯೆಯಾಗಿಯೇ ಉಳಿಯುತ್ತದೆಯಾದರೂ ವಿಜಯನಗರದ ಆಡಳಿತದ ಮೇಲೆ ಉಂಟಾದ ವೈಪರಿತ್ಯಗಳಲ್ಲಿ ಅದರ ಸಾಮಂತ ರಾಜ್ಯವಾದ ಯಲಹಂಕ ನಾಡಿಗೂ ಅನ್ವಯವಾಗಿ ಈ ರೀತಿಯ ಅಭಿಪ್ರಾಯಗಳು ಹುಟ್ಟಿಕೊಂಡಿರಬೇಕು.[26]

ಅಡಿಟಿಪ್ಪಣಿ

1. ಪ್ರೊ.ಕೃಷ್ಣಯ್ಯ .ಎಂ.ಹೆಚ್ ಮತ್ತು ಡಾ॥ದೇವರ ಕೊಂಡಾರೆಡ್ಡಿ (ಸಂ)

ಬೆಂಗಳೂರು - ಕೆಂಪೇಗೌಡ ವಂಶಸ್ಥರು.

(ಬೆಂಗಳೂರು : ಜನತಾಶಿಕ್ಷಣ ಸಂಸ್ಥೆ - 1996) ಪುಟ - 46

2. ಬಿ. ಪುಟ್ಟಯ್ಯ, Q.J.M.S. XIII. ನಂಬರ್ - 4 ಪುಟ - 738

3. ನಾಗರಾಜ್.ಎಂ.ಜಿ. ''ಬೆಂಗಳೂರು ಜಿಲ್ಲೆಯಲ್ಲಿ ಗೌಡ ಇತಿಹಾಸ -

ಯಲಹಂಕ ವಂಶದ ಕೆಂಪೇಗೌಡ

ದೊರೆಗಳು ಜೀವನ ಸಂಗತಿಗಳು. ಇದರಲ್ಲಿ : ಬೆಳ್ಳಬಾಗಿನ. ಒಕ್ಕಲಿಗರ ಸಂಘದ

ರಜತ ಮಹೋತ್ಸವ ಸಂಚಿಕೆ (ಬೆಂಗಳೂರು)

4. Internet

5. ಎ.ಕ.9. ಮಾಗಡಿ - 1

6. ಎ.ಕ.9. ಬೆಂಗಳೂರು ಅನುಬಂಧ. ನೆಲಮಂಗಲ : 107-109

7. ಕೃಷ್ಣರಾವ್ ಎಂ.ವಿ. ಬೆಂಗಳೂರು ಕೆಂಪೇಗೌಡ. ಪುಟ - 182

8. ಡಾ॥ ಗೋಪಾಲ್‌ರಾವ್.ಹೆಚ್.ಎಸ್., ನೆಲದಸಿರಿ,

(ನೆಲಮಂಗಲ ಕನ್ನಡ ಸಾಹಿತ್ಯ ಪರಿಷತ್ತು - 1997) ಪುಟ - 57

9. ದೇ.ಜವರೇಗೌಡ - ಬೆಂಗಳೂರು ಕೆಂಪೇಗೌಡ (ಮೈಸೂರು) ಪುಟ - 39-40

10. ನರಸಿಂಹಯ್ಯ.ಎಸ್.ಕೆ. ಮಾಗಡಿ ಕೆಂಪೇಗೌಡ

(ಬೆಂಗಳೂರು - 1924) ಪುಟ - 27

11. ನಾಗರಾಜ್.ಎಂ.ಜಿ. ವಡವಟ್ಟದ ದಿವಂಗತ ಈಶ್ವರರಾವ್‌ರವರಿಂದ

ತಿಳಿದ ವಿಚಾರ

12. ಎ.ಕ - 9. ಬೆಂಗಳೂರು - 14

13. ಎ.ಕ - 12. ಕುಣಿಗಲ್ - 10

14. ಎ.ಕ - 12 ಕುಣಿಗಲ್ - 23

15. ಎ.ಕ - 9. ಬೆಂಗಳೂರು ಅನುಬಂಧ - ನೆಲಮಂಗಲ - 109

16. ಎ.ಕ - 9 ಬೆಂಗಳೂರು ಅನುಬಂಧ - ನೆಲಮಂಗಲ - 107

17. ಬಿ.ಪಾಂಡುಕುಮಾರ್ - 1600 ವರ್ಷಗಳ ಒಕ್ಕಲಿಗರ ಇತಿಹಾಸ

18. M.Fazlul hasan - Banglore through centuries P.N-15

19. ಅದೇ

20. ಹ.ಕ.ರಾಜೇಗೌಡ - ಯಲಹಂಕ ಪ್ರಭು - ಪುಟ ಸಂಖ್ಯೆ - 33

21. ಹ.ಕ.ರಾಜೇಗೌಡ - ಯಲಹಂಕ ಪ್ರಭು - ಪುಟ ಸಂಖ್ಯೆ - 51

22. ಅನಕೃ - ಕೆಂಪೇಗೌಡ - ಪುಟ ಸಂಖ್ಯೆ - 49

23. ಹ.ಕ.ರಾಜೇಗೌಡ - ಯಲಹಂಕ ಪ್ರಭು - ಪುಟ ಸಂಖ್ಯೆ - 52

24. ಅದೇ ಪುಟ ಸಂಖ್ಯೆ - 54-55

25. ಕರ್ಲ ಮಂಗಲ ಶ್ರೀಕಂಠಯ್ಯ ಕೆಂಪೇಗೌಡ ಜಯ ಪ್ರಶಸ್ತಿ.

26. C.Hayavadana Rao, Mysore gazetteer - vol - II - P - 1608

ಅಧ್ಯಾಯ 4 : ಕೆಂಪೇಗೌಡರ ಬೆಂಗಳೂರು ನಿರ್ಮಾಣ

ಕೆಂಪಭೂಪತಿಯ ಧರ್ಮಪತ್ನಿ ಚನ್ನಾಂಬೆ - ಇವನ ತಾಯಿ ವಯೋಧರ್ಮಕ್ಕನುಗುಣವಾಗಿ ಅವನಿಗೆ ಲೌಕಿಕ, ವೈದಿಕ ಶಿಕ್ಷಣವಾಯಿತು. ಹೆಂಡತಿ- ಚನ್ನಮಾಂಬೆ, ಮಗ - ಇಮ್ಮಡಿಕೆಂಪೇಗೌಡ.

4.1 ಪ್ರಾರಂಭ

ಒಂದು ದಿನ ತನ್ನ ಮಂತ್ರಿ ವೀರಣ್ಣನೊಡನೆ ವಿಹಾರಕ್ಕೆ ಹೊರಟ ಕೆಂಪೇಗೌಡ ಯಲಹಂಕಕ್ಕೆ 10 ಮೈಲಿ ದೂರದಲ್ಲಿದ್ದ ಶಿವನಸಮುದ್ರ ಎಂಬ ಹಳ್ಳಿಯಲ್ಲಿ ವಿಶ್ರಾಂತಿಗೆ ತಂಗಿದರು. ಹಿಂದೆ ಅವರು ಶಿವನಸಮುದ್ರಕ್ಕೆ ಅನೇಕ ಸಲ ಬಂದಿದ್ದರೂ ಅವರಿಗಂದು ಒಂದು ವಿಶೇಷ ಯೋಚನೆ ಹೊಳೆಯಿತು. ಅದು ''ಈ ಶಿವನಸಮುದ್ರವನ್ನೇ ವಿಸ್ತರಿಸಿ ಏಕೆ ಒಂದು ಹೊಸ ರಾಜ್ಯವನ್ನು ಸ್ಥಾಪಿಸಬಾರದು''? ಎಂಬುದಾಗಿತ್ತು. ಕಾರಣ ಯಲಹಂಕ ಕೋಟೆ ಕೊತ್ತಳ ಕಟ್ಟುವುದಕ್ಕೆ ಯೋಗ್ಯವಲ್ಲ. ಶಿವನಸಮುದ್ರದ ಬಳಿ ಇರುವ ಬೆಂಗಳೂರು ಆಯಕಟ್ಟಿನ ಪ್ರದೇಶ ಎಂಬುದಾಗಿತ್ತು.

ಕೆಂಪೇಗೌಡರು ಕಾಲವಿಳಂಬ ಮಾಡದೇ ನೂತನ ರಾಜಧಾನಿ, ಕೋಟೆ ಕೊತ್ತಳಗಳ ನಿರ್ಮಾಣ ಕಾರ್ಯದ ಬಗ್ಗೆ ಯೋಚಿಸಲಾರಂಭಿಸಿದರು ಅವರ ಪತ್ನಿ ಚನ್ನಮಾಂಬೆ, ಬಂಧುಗಳು, ವೀರಣ್ಣಗೌಡ, ಗಿಡ್ಡೇಗೌಡ ದೊರೆಯ ಜೊತೆಗೂ ದುಡಿಯಲಾರಂಭಿಸಿದರು.

ಬೆಂಗಳೂರು ನಗರ, ಕೋಟೆಗಳನ್ನು ನಿರ್ಮಾಣ ಮಾಡುವ ನಿಶ್ಚಯವನ್ನು

ಕಾರ್ಯೋನ್ಮುಖ ಮಾಡುವುದಕ್ಕೆ ಪೂರ್ವಭಾವಿಯಾಗಿ ವಿಜಯನಗರದವರ ಅಪ್ಪಣೆ ಪಡೆಯಬೇಕಾಗಿತ್ತು. ಅಲ್ಲದೇ ಅಪಾರ ಹಣದ ಅವಶ್ಯಕತೆಯಿತ್ತು. ವೀರಣ್ಣಗೌಡ ವಿಜಯನಗರದ ಪ್ರಭುಗಳ ಸಹಾಯವನ್ನು ಕೇಳೋಣ ಎಂದು ಹೇಳಿದ. ಅಪ್ಪಣೆಯನ್ನೂ, ಹಣ ಸಹಾಯವನ್ನೂ ಕೇಳೋಣ ಅಲ್ಲದೇ ಅಲ್ಲಿಗೆ ಹೋಗಿ ಬರುವವರೆಗೆ ಸುಮ್ಮನಿರುವುದು ಬೇಡ. ಕಾರ್ಯಾರಂಭ ಮಾಡೋಣ. ಹಣಕ್ಕೆ ನಾವೇ ಒಂದು ಟಂಕಸಾಲೆ ಸ್ಥಾಪಿಸಿ ಭೈರವ ವರಹಗಳನ್ನು ಮುದ್ರಿಸೋಣ ಎಂದು ಕೆಂಪೇಗೌಡ ಹೇಳಿದರು.

ಯಲಹಂಕ ಭೂಪಟದ ರಾಯಭಾರಿಯಾಗಿ ಗಿಡ್ಡೇಗೌಡ ವಿಜಯನಗರಕ್ಕೆ ಹೊರಟ. ಅಲ್ಲಿಂದ ಅಪ್ಪಣೆಯೂ ಬಂತು. ಅದಕ್ಕಿಂತ ಮುಂಚೆ ಕೆಂಪೇಗೌಡರು ಕೆಂಪಾಂಬುಧಿ ಕೆರೆ, ಗವಿ ಗಂಗಾಧರೇಶ್ವರ ದೇವಾಲಯ ನಿರ್ಮಾಣಕ್ಕೆ ಶಂಕು ಸ್ಥಾಪನೆ ಮಾಡಿಸಿ ಕಾರ್ಯಾರಂಭ ಮಾಡಿದರು. ಅಲ್ಲದೇ ಅಚ್ಯುತದೇವರಾಯರು ಬೆಂಗಳೂರು, ಸುತ್ತಮುತ್ತಲಿರುವ ಹಲಸೂರು ಮುಂತಾದ ಗ್ರಾಮಗಳನ್ನು 30 ಸಾವಿರ ವರಹಗಳ ಆದಾಯವುಳ್ಳ 12 ಹೋಬಳಿಗಳನ್ನು ಅನುಗ್ರಹಿಸಿದ್ದಾರೆ. ಟಂಕಸಾಲೆ ನಿರ್ಮಿಸುವುದಕ್ಕೆ ಅಪ್ಪಣೆಯನ್ನು ದಯಪಾಲಿಸಿದ್ದರು.

ಇದಾದ ನಂತರ ಗೌಡರು ಗಂಗಾಧರೇಶ್ವರ ದೇವಾಲಯ, ಕೆಂಪಾಂಬುಧಿ ಕೆರೆಯ ನಿರ್ಮಾಣ ಕಾರ್ಯವನ್ನು ಇತರರಿಗೆ ವಹಿಸಿ ತಾವು ಕೋಟೆ, ನಗರ ನಿರ್ಮಾಣಗಳಲ್ಲಿ ತಲ್ಲೀನರಾದರು.

ಗೌಡರು ದೂರದರ್ಶಿಗಳೆಂಬುದನ್ನು ಅವರು ಸಿದ್ದಗೊಳಿಸಿದ ಬೆಂಗಳೂರು

ನಕ್ಷೆಯೇ ಹೇಳುತ್ತಿತ್ತು. ನಗರಕ್ಕೆ 9 ಬಾಗಿಲುಗಳಿರಬೇಕು. ಒಂದೊಂದು ಭಾಗಕ್ಕೂ ಒಂದೊಂದು ಕೆರೆ.[1]

ಒಂದು ದಿನ ಪಶ್ಚಿಮದ ಯಲಹಂಕಕ್ಕೆ ತನ್ನ ಸಚಿವ ವೀರಣ್ಣ ಮತ್ತು ಸಲಹೆಗಾರ ಗಿಡ್ಡೇಗೌಡನ ಜೊತೆ ವಿಹಾರಕ್ಕೆ ಹೋದಾಗ ಯಲಹಂಕದಿಂದ ಸುಮಾರು 10 ಮೈಲಿ (16ಕಿ.ಮೀ) ದೂರವಿರುವ ಶಿವನಸಮುದ್ರದ (ಹೆಸರುಘಟ್ಟ ಬಳಿ) 1 ಮರದ ಕೆಳಗೆ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದಾಗ ಆ ಸಮತಟ್ಟು ಪ್ರದೇಶ, ಅದರ ಸುತ್ತಮುತ್ತಲಿನ ಭಾಗವನ್ನು ಕಂಡಂತಹ ಕೆಂಪೇಗೌಡ ಭವಿಷ್ಯದ ನಗರವನ್ನಾಗಿ ಮಾಡಲು ಯೋಚಿಸುತ್ತಾನೆ. ನಗರಕ್ಕೆ ಬೇಕಾದ ಕೋಟೆ, ನೀರಿನ ಟ್ಯಾಂಕ್,cantonment, ದೇವಸ್ಥಾನ ಮತ್ತು ವಿವಿಧ ವೃತ್ತಿಯ ಜನರು ಇಲ್ಲಿ ವಾಸಿಸಲು ಬೇಕಾದ ಎಲ್ಲಾ ವ್ಯವಸ್ಥೆಯನ್ನು ಮಾಡುವಂತಹ 1 ಯೋಜನೆಯನ್ನು ರೂಪಿಸಿದರು, ಆದರೆ ಕೆಂಪೇಗೌಡನಿಗೆ ಒಂದು ಒಪ್ಪಿಗೆ ಬೇಕಾಗಿತ್ತು. ಅದು ವಿಜಯನಗರದ ಅರಸನಾದ ಅಚ್ಯುತರಾಯನಿಂದ. (ದಾಸರಹಳ್ಳಿ Record dated 1532) ಅವನಿಂದ ಒಪ್ಪಿಗೆಯೂ ಸಿಕ್ಕಿತು. ನಂತರ ಬೆಂಗಳೂರಿನಲ್ಲಿ ಕೋಟೆ-ಕೊತ್ತಲೆಗಳು ಮತ್ತು ನಗರವು ನಿರ್ಮಾಣವಾಯಿತು - 1537ರಲ್ಲಿ. ನಗರ ನಿರ್ಮಾಣವಾದ ನಂತರ ಕೆಂಪೇಗೌಡನ ರಾಜಧಾನಿ ಯಲಹಂಕದಿಂದ ಹೊಸನಗರವಾದ ಬೆಂಗಳೂರಿಗೆ ವರ್ಗಾವಣೆಯಾಯಿತು.

ಬೆಂಗಳೂರು (Bengalooru) ಎಂಬ ಹೆಸರು ಬರಲು ಒಂದು ಕಥೆಯಿಂದ. ಅದೇನೆಂದರೆ ಹೊಯ್ಸಳದ ರಾಜನಾದ ವೀರ ಬಲ್ಲಾಳ II, ತನ್ನ ಆಳ್ವಿಕೆಯ ಸಂದರ್ಭದಲ್ಲಿ ದಾರಿ ತಪ್ಪಿ ಬೇಟೆಯಾಡುವುದಕ್ಕಾಗಿ, ಪ್ರವಾಸವನ್ನೇರ್ಪಡಿಸಿದ್ದ. ಅಂತಹ ಸಂದರ್ಭದಲ್ಲಿ ಬೆಂಗಳೂರಿಗೆ ಬಂದಾಗ ಬೇಟೆಯಾಡಲ್ಲಿಕ್ಕೆ ಗುಡಿಸಲಿನ ಬಳಿಗೆ ಬರುತ್ತಾನೆ. ಆಗ ಆ ಮುದುಕಿ

ಹಸಿದ ರಾಜನನ್ನು ಊಟಕ್ಕೆ ಕರೆದಳು. ಅವಳು ಬೇಯಿಸಿದ Beansನ್ನು ಹಸಿದ ರಾಜನಿಗೆ ನೀಡಿದಳು. ಹಸಿದ ರಾಜ ಅದನ್ನು ತಿಂದು ತನ್ನ ಹಸಿವನ್ನು ನೀಗಿಸಿಕೊಂಡನು. ಇದಾದ ಮೇಲೆ ರಾಜ ಆಪ್ರದೇಶಕ್ಕೆ Benda ಕಾಳೂರು (Benda - Kaalu - ooru) (ಇದರ ಅರ್ಥ Boiled Beans Town) ಇವೆಲ್ಲ ಸೇರಿ ಕೊನೆಗೆ ಬೆಂದಕಾಳೂರು ಅಂತ ಆಯಿತು. ಆದರೆ ಐತಿಹಾಸಿಕವಾಗಿ ಈ ಕಥೆಯನ್ನು ಸ್ವೀಕರಿಸಲು ಸಾಧ್ಯವಿಲ್ಲ.

ಕೆಂಪೇಗೌಡ ನಿರ್ಮಾಣವಾದ ಹೊಸ ರಾಜಧಾನಿಗೆ ಬಂದು ಮಣ್ಣಿನ ಕೋಟೆಯನ್ನು ಕಟ್ಟಲು ಪ್ರಾರಂಭಿಸಿದನು. ನಂತರ ಕೋಟೆಯ ನಿರ್ಮಾಣವಾದ ಮೇಲೆ ಬಾಗಿಲನ್ನು ನಿಲ್ಲಿಸಲಾಯಿತು.[2]

ಹೀಗೆ ಹೆಚ್ಚು ಕಡಿಮೆ ಕೋಟೆಯ ಕೆಲಸಗಳು ಮುಗಿದಿತ್ತು. ಮುಂಜಾನೆ ಎದ್ದು ಗೌಡರು ಪೂಜಾ ಕಾರ್ಯದಲ್ಲಿ ಮಗ್ನರಾಗಿದ್ದರು. ಇಂತಹ ಸಂದರ್ಭದಲ್ಲಿ ಕೋಟೆಯನ್ನು ಕಾಯುತ್ತಿದ್ದ ಭಟರು ಓಡಿ ಬಂದು ದೊರೆಗಳ ಮುಂದೆ ನಡುಗುತ್ತಾ ನಿಂತರು. ಕೆಂಪೇಗೌಡರು - ಏನು ಸಮಾಚಾರ? ಎಂದು ಕೇಳಿದಾಗ, ಭಟರು - ಅದಕ್ಕೆ ಗೂಟಗಳು ಕಳಚಿಕೊಂಡು, ಬಾಗಿಲು ಕೆಳಕ್ಕೆ ಬಿದ್ದಿದೆ ಎಂದರು. ಗೌಡರು ಕೋಟೆಯ ಬಳಿಗೆ ಬಂದು ನೋಡಿದಾಗ ಭಟರು ಹೇಳಿದಂತೆ ಕೋಟೆಯ ಬಾಗಿಲು ಕೆಳಕ್ಕೆ ಬಿದ್ದಿತ್ತು. ನಂತರ ಪುನಃ ತಜ್ಞರೊಂದಿಗೆ ಸಮಾಲೋಚಿಸಿ ಮತ್ತೆ ಬಾಗಿಲನ್ನು ನಿಲ್ಲಿಸಿದರು. ಮಾರನೆಯ ಬೆಳಗಾಗುವುದರೊಳಗೆ ಕೋಟೆಯ ಬಾಗಿಲು ಪುನಃ ಕೆಳಕ್ಕೆ ಬಿದ್ದಿತ್ತು. ಇದರಿಂದ ಕಂಗಾಲಾದ ಗೌಡರು - ''ಕೆಂಪಾಂಬಿಕೆ ನಾನು ಮಾಡಿದ ಅಪರಾಧವೇನು? ನನ್ನನ್ನು ಹೀಗೇಕೆ

ಪರೀಕ್ಷೆಮಾಡುತ್ತಿರುವೆ? ಕೋಟೆಯ ಬಾಗಿಲು ಭದ್ರವಾಗದಿದ್ದರೆ ಕೋಟೆ ಕಟ್ಟಿದ್ದು ನಿರರ್ಥಕವಾಗಿ ಹೋಗುತ್ತದೆ. ನನ್ನಲ್ಲಿ ಅಪಾರ ನಂಬಿಕೆ ಇಟ್ಟಿರುವ ವಿಜಯನಗರದ ಪ್ರಭುಗಳಿಗೆ ಏನು ಹೇಳಲಿ? ಹೇಗೆ ಮುಖ ತೋರಿಸಲಿ? ಎಂದು ಪೇಚಾಡಿದರು.

ಹೀಗೆ ದುಃಖಿತರಾದ ಗೌಡರನ್ನು ರಾಣಿ ಚೆನ್ನಮಾಂಬೆ ಸಂತೈಸುತ್ತಾ, ಸಮಾಧಾನ ತಂದುಕೊಳ್ಳಿ, ಜ್ಯೋತಿಷ್ಯರನ್ನು ಬರಮಾಡಿಕೊಂಡು, ಅಭಿಪ್ರಾಯ ಕೇಳಿ, ವಿಶೇಷ ಪೂಜೆ - ಪುನಸ್ಕಾರ ಮಾಡಬೇಕಿದ್ದರೆ ಮಾಡಿದರಾಯಿತು, ಎಂದು ಹೇಳುತ್ತಾರೆ.

ಊರಿನ ಗಣ್ಯರು, ಜ್ಯೋತಿಷ್ಯರು, ಇನ್ನು ಮುಂತಾದವರು ಒಂದು ಕಡೆ ಸೇರಿ ಆಳವಾಗಿ ವಿಚಾರವಮಾಡಿ ಒಂದು ನಿರ್ಧಾರಕ್ಕೆ ಬಂದರು. ಆದರೆ ಆ ನಿರ್ಧಾರವನ್ನು ದೊರೆಗಳಿಗೆ ಹೇಳಲು ಯಾರಿಗೂ ಧೈರ್ಯ ಸಾಲದೇ ಕೊನೆಗೆ ನಾರಾಯಣಪ್ಪನವರನ್ನು ಆ ಕೆಲಸಕ್ಕೆ ನಿಯಮಿಸಿದರು. ನಂತರ ನಾರಾಯಣಪ್ಪನವರನ್ನು ಕಂಡ ಗೌಡರು ಜ್ಯೋತಿಷ್ಯರು ನಿರ್ಣಯಕ್ಕೆ ಬಂದರೇ? ಎಂದು ಕೇಳಲಾಗಿ ನಾರಾಯಣಪ್ಪನವರು ನಿರ್ಣಯಕ್ಕೆ ಬಂದಿದ್ದಾರೆ. ಆದರೆ ಅದನ್ನು ಹೇಳಲು ಭಯವಾಗುತ್ತಿದೆ ಎನ್ನಲು, ಕೊನೆಗೆ ''ಕೋಟೆಯ ಬಾಗಿಲು ಗಟ್ಟಿಯಾಗಿ ನಿಲ್ಲಲು ಒಬ್ಬ ತುಂಬು ಗರ್ಬಿಣಿಯ ಬಲಿ ಕೊಡಬೇಕಂತೆ'' ಎಂದರು.

ಗೌಡರು, ಉದ್ವೇಗದಿಂದ ಇದು ಸಾಧ್ಯವಿಲ್ಲ, ವಿಜಯನಗರದರಸರಿಗೆ ಏನು ಹೇಳುವುದು? ಅವರು ನಮ್ಮನ್ನೇ ನಂಬಿರುವರಲ್ಲ ಎಂದು ಪೇಚಾಡಿದರು. ಇದನ್ನೆಲ್ಲಾ ಕೇಳಿಸಿಕೊಂಡ ತುಂಬು ಗರ್ಬಿಣಿಯೊಬ್ಬಳು ತಾನೇ ಸಾವಿಗೆ ಶರಣಾದಳು.

ಮಾರನೆಯ ಬೆಳಿಗ್ಗೆ ಕೋಟೆಯ ಭಟರು ದೊರೆಗಳ ಬಳಿಗೆ ಬಂದು ನಿಂತರು. ಕೋಟೆಯ ಬಾಗಿಲು ನಿಂತಿದೆ ಎಂದಾಗ ಅದನ್ನು ಅವರು ನಂಬದೆ, ಗೌಡರು ಮತ್ತು ರಾಣಿಯಿಬ್ಬರು ಬಂದು ನೋಡಲಾಗಿ ಆ ಹೆಬ್ಬಾಗಿಲು ಬುಡದಲ್ಲಿ ಸ್ತ್ರೀಯ ದೇಹ-ಅದು ಸೊಸೆ ಲಕ್ಷ್ಮಮ್ಮನ ದೇಹವಾಗಿತ್ತು. ಇವಳು ಇಮ್ಮಡಿ ಕೆಂಪೇಗೌಡನ ಪತ್ನಿಯಾಗಿದ್ದಳು. ಎಲ್ಲರೂ ಕಣ್ಣಿನಲ್ಲಿ ಕೈತೊಳೆದರು. ಕೊನೆಗೆ ಇಮ್ಮಡಿ ಕೆಂಪೇಗೌಡ (ಗದ್ಗದ ಕಂಠನಾಗಿದ್ದ) ತಂದೆ, ತಾಯಿ, ಪುರಜನರನ್ನು ಸಂತೈಸುತ್ತಾ ಲಕ್ಷ್ಮಮ್ಮನ ಜನ್ಮ ಸಾರ್ಥಕವಾಯಿತು. ಅವಳ ಅಮರ ತ್ಯಾಗದಿಂದ ನಾಡು ಬದುಕಿತು ಎಂದು ಹೇಳಿದ.

ಅಲ್ಲದೇ ಲಕ್ಷ್ಮಮ್ಮನ ಜನ್ಮಸ್ಥಳವಾದ ಕೋರಮಂಗಲದಲ್ಲಿ ಅವಳ ಜ್ಞಾಪಕಾರ್ಥವಾಗಿ ಒಂದು ದೇವಾಲಯವನ್ನು ಕಟ್ಟಲು ಹಿರಿಯ ಕೆಂಪೇಗೌಡರು ಆಜ್ಞಾಪಿಸಿದರು. ಇವರು ಕೈಗೊಂಡಿದ್ದ ಯೋಜನೆಗಳನ್ನು ಪೂರೈಸಲು 3 ವರ್ಷಗಳೇ ಹಿಡಿದವು.[3]

ಕೆಂಪೇಗೌಡನು ಯಲಹಂಕದಿಂದ 10,12 ಮೈಲಿ ದೂರವಿರುವ ಇಂದಿನ ಬೆಂಗಳೂರಿಗೆ ತನ್ನ ಹಿತೈಷಿಯೂ, ಮಂತ್ರಿಯೂ ಆಗಿದ್ದ ಲಿಂಗಣ್ಣನೊಂದಿಗೆ ಬಂದು ನೋಡಿದನು. ಸಮತಟ್ಟಾದ, ಫಲವತ್ತಾದ ಭೂಮಿ ಅಲ್ಲಲ್ಲಿ ಕೆರೆ, ಕುಂಟೆಗಳನ್ನು ಕಂಡು ಇಲ್ಲೊಂದು ಪಟ್ಟಣವನ್ನು ಕಟ್ಟಬೇಕೆಂದು ತೀರ್ಮಾನಿಸಿದನು. ಆ ನಗರ ಬೆಂಗಳೂರು, ಬೆಂದಕಾಳೂರು ಇತ್ಯಾದಿ ಹೆಸರಿನ ಬಗ್ಗೆ ಸಾಕಷ್ಟು ಅಭಿಪ್ರಾಯ ಭೇದವಿದೆ. ಕ್ರಿ.ಶ.16ನೇ ಶತಮಾನದಲ್ಲಿ (ಕ್ರಿ.ಶ.1530ರಲ್ಲಿ ಆರಂಭ) ನಗರ ನಿರ್ಮಾಣ ಆರಂಭವಾಯಿತು. ಇಂದಿನ

ಚಿಕ್ಕಪೇಟೆ ಚೌಕವೇ ಅಂದು ರಸ್ತೆಗಳು ನಿರ್ಮಾಣಕ್ಕೆ ಕೇಂದ್ರಬಿಂದುವಾಯಿತು. ಪೂರ್ವಕ್ಕೆ ಹಲಸೂರು ಹೆಬ್ಬಾಗಿಲು, ಪಶ್ಚಿಮಕ್ಕೆ ಸೊಂಡೇಕೊಪ್ಪ ಹೆಬ್ಬಾಗಿಲು, ಉತ್ತರಕ್ಕೆ ಯಲಹಂಕ ಹೆಬ್ಬಾಗಿಲು, ದಕ್ಷಿಣಕ್ಕೆ ದೆಹಲಿ ಹೆಬ್ಬಾಗಿಲು ಎಂಬುದಾಗಿ ಹೆಸರಿಸಿ 4 ಹೆಬ್ಬಾಗಿಲುಗಳನ್ನು ನಿರ್ಮಿಸಲಾಯಿತು. ಪ್ರಮುಖ ಬೀದಿಗಳನ್ನಾಗಿಸಿ ಒಂದೊಂದು ಬೀದಿಗೂ ಇಕ್ಕೆಲಗಳಲ್ಲಿ ಮಳಿಗೆಗಳು, ಮನೆಗಳನ್ನು ವ್ಯವಸ್ಥಿತ ರೀತಿಯಲ್ಲಿ ನಿರ್ಮಿಸಿದ.

ಬೆಂಗಳೂರು ಪಟ್ಟಣದ 8 ದಿಕ್ಕುಗಳಿಗೂ 8 ಕಾವಲು ಗೋಪುರಗಳನ್ನು ನಿರ್ಮಿಸಿದನು. ಈ ಕಾವಲು ಗೋಪುರಗಳು ಇಂದಿಗೂ ಅಸ್ತಿತ್ವದಲ್ಲಿವೆ ಹಾಗೂ ಬೆಂಗಳೂರು ಮಹಾನಗರ ಪಾಲಿಕೆ ತನ್ನ ಚಿಹ್ನೆಯಲ್ಲಿ ಈ ಕಾವಲು ಗೋಪುರವನ್ನು ಬಳಸಿಕೊಂಡಿದೆ. ಇತ್ತೀಚೆಗೆ ಅದು ಕಾರ್ಪೋರೇಷನ್ ಸರ್ಕಲ್‌ನಲ್ಲಿ ಬಹಳ ಎತ್ತರದ ಕಂಬದ ಮೇಲೆ ಗೋಪುರ ನಿರ್ಮಿಸುವುದರ ಮೂಲಕ ಕೆಂಪೇಗೌಡನಿಗೆ ತನ್ನ ಕೃತಜ್ಞತೆ ಸಲ್ಲಿಸಿದೆ.[4]

ಬೆಂಗಳೂರು ನಗರ ನಿರ್ಮಾಣದ ಬಗೆಗೆ ಖಚಿತವಾದ ಚಾರಿತ್ರಿಕ ಆಧಾರಗಳು ದೊರೆಯುತ್ತವೆ. ಒಂದನೆಯ ಕೆಂಪೇಗೌಡನ ಕಾಲದಲ್ಲಿ ಈ ಭಾಗ ಕಾಡಾಗಿತ್ತು ಎಂದೂ ಅಲ್ಲಿ ಈ ಹಿಂದೆಯೇ ಒಂದು ನಗರವಿತ್ತು ಎಂದೂ ವಾದವಿವಾದಗಳೆದ್ದಿವೆ. ಅದೇನೇ ಇರಲಿ, ಬೆಂಗಳೂರು ನಗರ ನಿರ್ಮಾಣದ ಬಗೆಗೆ ಒಂದು ಸ್ಪಷ್ಟ ತೀರ್ಮಾನಕ್ಕೆ ಬರುವುದು ಸಾಧ್ಯ. ಏಕೆಂದರೆ ಒಂದನೆಯ ಕೆಂಪೇಗೌಡ ವಿಜಯನಗರದ ಅರಸರಾದ ಕೃಷ್ಣದೇವರಾಯ ಮತ್ತು ಅಚ್ಯುತರಾಯ ಇವರಿಗೆ ಬಹಳ ಆಪ್ತನಾಗಿದ್ದವನು. ಇವನ ಕಾಲದಲ್ಲಿ ಯಲಹಂಕ ನಾಡು ಸಂಪತ್ತು ಮತ್ತು ಸಮೃದ್ಧಿಯ ನಾಡಾಗಿತ್ತು. ದಕ್ಷಿಣದಿಂದ ವಿಜಯನಗರದ ಪ್ರಬಲ

ರಕ್ಷಣೆಯಾಗಿದ್ದುದು ಯಲಹಂಕ ನಾಡು. ಇದೇ ಕಾಲದಲ್ಲಿಯೇ ವಿಜಯನಗರ ಲೋಕವಿಖ್ಯಾತ ಮಹಾನಗರವಾಗಿತ್ತು. ಪ್ರಾಯಃ ಈ ಅದ್ದೂರಿಯ ರಾಜಧಾನಿ ಕೆಂಪೇಗೌಡನ ಮೇಲೆ ಬಹಳ ಪರಿಣಾಮ ಮಾಡಿದ್ದಿರಬೇಕು. ಪ್ರಭಾವತಃ ಮಹತ್ವಾಕಾಂಕ್ಷಿಯೂ, ಸಮರ್ಥನೂ ಆದ ಕೆಂಪೇಗೌಡನಿಗೆ ತಾನೇಕೆ ಇಂತಹ ನಾಡನ್ನು ನಿರ್ಮಾಣ ಮಾಡಬಾರದು ಎಂದು ಅನ್ನಿಸಿರಬೇಕು. ಈ ಕಾರ್ಯಕ್ಕೆ ಬೇಕಾದ ಚಕ್ರವರ್ತಿಯ ಅನುಮೋದನೆ ದೊರೆಯುವುದರಲ್ಲಿ ಅವನಿಗೇನೂ ಅನುಮಾನವಿರಲಿಲ್ಲ. ಏಕೆಂದರೆ 1ನೇಯ ಕೆಂಪೇಗೌಡ ವಿಜಯನಗರದ ಆಪ್ತನೂ ಅತ್ಯಂತ ಸಮರ್ಥನೂ ಆದ ಸಾಮಂತ ರಾಜನಾಗಿದ್ದ. ಈ ಎಲ್ಲ ಪೂರ್ವ ತಯಾರಿಗಳನ್ನು ಕೆಂಪೇಗೌಡ ಮಾಡಿಕೊಂಡು ಒಂದು ಸೂಕ್ತ ಸ್ಥಳ ಮತ್ತು ಒಳ್ಳೆಯ ಮುಹೂರ್ತವನ್ನು ಕಾಯುತ್ತಿದ್ದ. ಆಗ ಯಲಹಂಕದಿಂದ ಅನತಿ ದೂರದಲ್ಲಿಯೇ ಇದ್ದ ಈಗಿನ ಬೆಂಗಳೂರು ಭಾಗ ಅವನ ಮನಸ್ಸಿಗೆ ಬಂದಿರಬೇಕು. ಆ ಭಾಗಕ್ಕೆ ಶಿವನಸಮುದ್ರ ಎಂಬ ಹೆಸರಿದ್ದಿತೆಂದೂ ಅದನ್ನು ವಿಜಯನಗರದ ಅರಸರು ನಿರ್ಮಾಣ ಮಾಡಿ ಕೆಂಪೇಗೌಡನಿಗೆ ಕೊಟ್ಟರೆಂದೂ ಕೆಲವು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ವಿಜಯನಗರದ ಅರಸರು ಶಿವನಸಮುದ್ರ ಪ್ರಾಂತ್ಯವನ್ನು ಯಲಹಂಕ ನಾಡಿಗೆ ವಹಿಸಿದ ಉಲ್ಲೇಖವೇನೋ ಶಾಸನಗಳಲ್ಲಿ ದೊರೆಯುತ್ತದೆ.

4.2 ಬೆಂಗಳೂರಿನ ಬಗ್ಗೆ ಇರುವ ಕಥೆಗಳು

ಬೆಂಗಳೂರು ನಗರವನ್ನು ಒಂದನೆಯ ಕೆಂಪೇಗೌಡ ಮೊಟ್ಟಮೊದಲಿಗೆ ಸ್ಥಾಪಿಸಿದನೆ? ಅಥವಾ ಈ ಹಿಂದೆಯೇ ಅಲ್ಲಿ ಒಂದು ಗ್ರಾಮವೋ, ನಗರವೋ ಇದ್ದಿತೆ ಎಂಬ ಬಗೆಗೆ ಇತ್ತೀಚಿನ ವಾದವಿವಾದಗಳು ನಡೆದಿವೆ. ಬೆಂಗಳೂರು ನಿರ್ಮಾಣವಾದ ಬಗ್ಗೆ

ಖಚಿತವಾದ ಚಾರಿತ್ರಿಕ ಆಧಾರಗಳು ದೊರೆಯುತ್ತವೆ. ಈ ನಗರ ನಿರ್ಮಾಣವಾದ ಬಗೆಗೆ ಮೂರು ಕಥೆಗಳು ಹುಟ್ಟಿಕೊಂಡಿವೆ.

ಮೊದಲನೆಯದು - ಒಮ್ಮೆ ಹೊಯ್ಸಳ ಚಕ್ರವರ್ತಿ ಬಲ್ಲಾಳರಾಯ ಬೇಟೆಗಾಗಿ ಈ ಪ್ರದೇಶದ ಕಾಡಿಗೆ ಬಂದ. ಮೃಗವೊಂದನ್ನು ಅಟ್ಟಿಸಿಕೊಂಡು ಹೊರಟ ಭರದಲ್ಲಿ ಅವನು ತನ್ನ ಹಿಂಬಾಲಕರಿಂದ ದೂರವೂ ಬೇರೆಯೂ ಆದ. ಈಗಿನ ಬೆಂಗಳೂರು ಪ್ರದೇಶಕ್ಕೆ ಬಂದಾಗ ಮೃಗ ಕಣ್ಣಿಗೆ ಕಾಣದಾಯಿತು. ಆಗ ಬಲ್ಲಾಳರಾಯ ಅಲ್ಲಿಯ ಮರದ ನೆರಳಲ್ಲಿ ವಿಶ್ರಮಿಸಲಾರಂಭಿಸಿದರು. ಊಟದ ಸಮಯ ಮೀರಿ ಹಸಿವು ಕಿತ್ತು ತಿನ್ನಲಾರಂಭಿಸಿತು. ತಿನ್ನಲು ಏನಾದರೂ ಹಣ್ಣು ಹಂಪಲು, ಗೆಡ್ಡೆ-ಗೆಣಸು ದೊರೆಯುವುದೇ ಎಂದು ಆತ ಸುತ್ತಲೂ ನೋಡಿದ. ಅನತಿ ದೂರದಲ್ಲಿ ಹೊಗೆ ಏಳುವುದು ಕಂಡಿತು. ಹತ್ತಿರ ಹೋಗಿ ನೋಡಿದಾಗ ಅದೊಂದು ಗುಡಿಸಲು ಅಲ್ಲಿ ಮುದುಕಿಯೊಬ್ಬಳಿದ್ದಳು. ಬಲ್ಲಾಳರಾಯ ಹಸಿವಿನಿಂದಾಗಿ ತಿನ್ನಲು ಏನಾದರೂ ದೊರೆಯುವುದೇ ಎಂದು ಆ ಮುದುಕಿಯನ್ನು ಕೇಳಿದ. ಆಕೆ ತನ್ನಲ್ಲಿದ್ದ ಬೆಂದ ಹುರುಳಿಕಾಳನ್ನು ಅವನಿಗೆ ನೀಡಿದಳು. ಇದರಿಂದ ಸಂತೃಪ್ತನಾದ ಅವನು ಇದು ಅನ್ನ ದೊರೆಯುವ ಪುಣ್ಯಭೂಮಿ ಎಂದು ನಗರ ನಿರ್ಮಾಣ ಮಾಡಿದ. ಅದಕ್ಕೆ ಬೆಂದಕಾಳೂರು ಎಂದು ಹೆಸರಿಟ್ಟ. ಅದು ಮುಂದೆ ಬೆಂಗಾಳೂರಾಗಿ ಬೆಂಗಳೂರಾಯಿತು.

ಎರಡನೆಯದು - ಮೇಲಿನ ಕಥೆಯನ್ನೇ ಒಂದನೆಯ ಕೆಂಪೇಗೌಡನಿಗೆ ಅನ್ವಯಿಸಿ ಹೇಳುತ್ತಾರೆ. ಬಹುಶಃ ಇದು ನಂಬಬಹುದಾದಂತಹ ಕಥೆ. ಏಕೆಂದರೆ ದೂರದ ದ್ವಾರ ಸಮುದ್ರದಿಂದ ಬಲ್ಲಾಳರಾಯ ಇಲ್ಲಿಗೆ ಬೇಟೆಗೆ ಬಂದ ಎನ್ನುವುದಕ್ಕಿಂತ ಹತ್ತಿರದ

ಯಲಹಂಕದಲ್ಲಿದ್ದ 1ನೆಯ ಕೆಂಪೇಗೌಡ ಬೇಟೆಗೆ ಬಂದಿದ್ದ ಎನ್ನುವುದು ಹೆಚ್ಚು ಸತ್ಯವಾಗುತ್ತದೆ.

ಮೂರನೆಯದು - ರಾಜನೊಬ್ಬ ಇಲ್ಲಿಗೆ ಬೇಟೆಗೆ ಬಂದ. ಆಗ ಮೊಲವೊಂದು ನಾಯಿಯನ್ನು ಎದುರಿಸಿ ನಿಂತಿತು. ಇದು ಗಂಡುಭೂಮಿ ಎಂದು ಅರಿತ ಅವನು ಇಲ್ಲಿ ನಗರ ನಿರ್ಮಿಸಿದ. ಆ ಯಾವ ಕಥೆಯೂ ಬೆಂಗಳೂರು ನಿರ್ಮಾಣದ ಬಗೆಗಿನ ಖಚಿತ ಚಾರಿತ್ರಿಕ ಆಧಾರಗಳಾಗುವುದಿಲ್ಲ.[5]

4.3 ವಿವಿಧ ಕಾಲಗಳಲ್ಲಿ ಇದ್ದಿತು ಎಂಬುವುದಕ್ಕೆ ಆಧಾರಗಳು

ಬೆಂಗಳೂರು ನಗರದ ಸ್ಥಾಪನೆ ಮತ್ತು ಪ್ರಾಚೀನತೆಯ ಬಗೆಗೆ ಮತ್ತೊಂದು ಹೇಳಿಕೆ ಹೀಗಿದೆ -

ಕ್ರಿ.ಶ.900ರ ಪೂರ್ವದಲ್ಲಿ ಬೆಂಗಳೂರು ದಿವ್ಯನಗರವಾಗಿತ್ತೆಂಬುದು ಈಗಿನ ಬೆಂಗಳೂರಿನ ದಕ್ಷಿಣಕ್ಕೆ ಸುಮಾರು 8 ಮೈಲಿ ದೂರದಲ್ಲಿರುವ ಬೇಗೂರು ಗ್ರಾಮದಲ್ಲಿ ದೊರೆತ ಶಾಸನವೊಂದರಿಂದ (ಬೆಂಗಳೂರು 83) ತಿಳಿದುಬಂದಿದೆ.

ಇಲ್ಲಿಯ ನಾಗೇಶ್ವರ ದೇವಸ್ಥಾನದ ಮುಂಗಡೆಯ ಹಜಾರದ ಗೋಡೆಯೊಳಗೆ ಎಂದು ಜೈನ ಶಾಸನವಿದೆ. ಈ ಶಾಸನದಲ್ಲಿ ಬೆಂಗಳೂರು ಎಂಬ ಪದವಿದೆ.[6]

ಕೋಟೆಯ ವೆಂಕಟೇಶ್ವರ ದೇವಾಲಯ ಕುರಿತ ಲೇಖನವೊಂದರಲ್ಲಿ ವೆಂಕಟೇಶ್ವರ

ಊರು ವೆಂಕಟೂರು, ವೆಂಗಳೂರು, ಬೆಂಗಳೂರಾಗಿಬಹುದು ಎಂಬ ಅಭಿಪ್ರಾಯವಿದೆ. ಬೆಂಗಳೂರು ಎಂಬ ಹೆಸರಿನ ಬಗ್ಗೆ ಇನ್ನೂ ಅನೇಕ ಊಹೆಗಳನ್ನು ಮಾಡಬಹುದು. ಉದಾ:-ಕೆಂಪುಕಲ್ಲು ಕೆಂಗಲ್ ಆದ ಹಾಗೆ ಬೆಣಚುಕಲ್ಲು ಅಥವಾ ಬಿಳಿಯಕಲ್ಲು ಬೆಂಗಲ್ ಆಗಿ ಆನಂತರ ಬೆಂಗಲ್ಲೂರು ಬೆಂಗಳೂರಾಗಿರಬಹುದು.[7]

ಮತ್ತೊಂದು, ಇದು ಬಹಳ ಹಿಂದೆ ಜೈನ ಕ್ಷೇತ್ರವಾಗಿದ್ದಿತೆಂದೂ ಇಲ್ಲಿ ಅನೇಕ ಮುನಿಗಳು ಇದ್ದರೆಂದು ಚರಿತ್ರೆಕಾರರು ಹೇಳಿದ್ದಾರೆ. ಜೈನಮುನಿಗಳು ಬೆಂದಕಲ್ಲಿನ ಮೇಲೆ ತಪಸ್ಸು ಮಾಡಿದ ಕಥೆ ನಮಗೆ ದೊರೆಯುತ್ತದೆ. ''ಭಟಾರರ್ ಚರಿಗೆ ವೋದರನ್ನೆಗಂ ಪಿಂದೆ ಪಾಪ ಕರ್ಮಂ ಯೋಗಶಿಲೆಯ ಮೇಗುಮುಂಕೆವಿಗುಮುಂ ಬಳಸಿಯಂ ಪಲವು ಪಿರಿಯು ವಪ್ಪ ತರಯ ಪುಳ್ಳಿಗಳಂ ಕಡಿದೊಟ್ಟಿ ಕಿಚ್ಚನಿಕ್ಕೆ ಸುಟ್ಟ ಕಿಚ್ಚಿನ ಬಣ್ಣದಂತಾಗಿ ಶಿಲೆಯ ಮಾಡಿ ಎಂಬಂತಹ ಹೇಳಿಕೆಗಳಿವೆ.[8]

ಬೆಂಗಳೂರು ಒಂದು ಕಾಲಕ್ಕೆ ಮಹಾನಗರವಾಗಿದ್ದಿತೆಂದೂ, ಆನಂತರ ಕಾರಣಾಂತರಗಳಿಂದ ನಾಳವಾಯಿತೆಂದೂ ಚರಿತ್ರೆಕಾರರ ಅಭಿಪ್ರಾಯವೆಂದಾಗುತ್ತದೆ. ಈ ವಿಷಯವನ್ನು ತಿಳಿದಿದ್ದ ಒಂದನೆಯ ಕೆಂಪೆಗೌಡ ಆನಗರವನ್ನು ಪುನರ್‌ನಿರ್ಮಿಸಲು ಮನಸ್ಸು ಮಾಡಿದ. ಒಂದು ವೇಳೆ ಇದೊಂದು ಮಹಾನಗರವಾಗಿದ್ದು, ಅದು ನಾಶವಾಗಿದ್ದು, ಈ ವಿಷಯ ಕೆಂಪೇಗೌಡನಿಗೆ ಗೊತ್ತಿದ್ದಿದ್ದರೆ ಅವನು ಖಂಡಿತ ಇಲ್ಲಿ ನಗರ ನಿರ್ಮಿಸುತ್ತಿರಲಿಲ್ಲ. ಹಾಳಾದ ಊರನ್ನು ಮತ್ತೆ ನಿರ್ಮಿಸುವುದು ಹಿಂದೂ ಸಂಪ್ರದಾಯಕ್ಕೆ ವಿರುದ್ಧ. ಅಲ್ಲದೇ ರೋಮನ್‌ನಾಣ್ಯಗಳಷ್ಟೇ ಇದು ಮಹಾನಗರವಾಗಿತ್ತೆಂಬುದನ್ನು ಪ್ರತಿಪಾದಿಸಲು ಒಳ್ಳೆಯ

ಆಧಾರವಾಗುವುದಿಲ್ಲ. ಈ ಜಾಗದಲ್ಲಿ ಮಹಾನಗರವೊಂದಿದ್ದ ಬಗೆಗೆ ಅವಶೇಷಗಳು ದೊರೆಯದೆ ಕೇವಲ ನಾಣ್ಯಗಳಿಂದ ತೀರ್ಮಾನಕ್ಕೆ ಬರಲು ಆಗುವುದಿಲ್ಲ. ಆದುದರಿಂದ ಗಂಗರ ಬೆಂಗಾವಲು ಪಡೆಯ ವೀರರಿಗಾಗಿ ನಿರ್ಮಾಣಗೊಂಡ ಬೆಂಗಳೂರು ಒಂದನೆಯ ಕೆಂಪೇಗೌಡನಿಂದ ನಗರವಾಗಿ ಪರಿವರ್ತಿತವಾಗಿ ಯಲಹಂಕನಾಡಿನ ಮೂರನೆಯ ರಾಜಧಾನಿಯಾಯಿತೆಂದು ಹೇಳಬಹುದು.

ಬೆಂಗಳೂರು ನಿರ್ಮಾಣಕ್ಕೆ ಕೇಂದ್ರದಿಂದ ಅನುಮತಿ ದೊರೆತಿದ್ದಿತಾದರೂ, ಇಂತಹ ಭವ್ಯ ನಗರವನ್ನು ಸಾಮಂತನೊಬ್ಬ ನಿರ್ಮಿಸಿಯಾನೆಂದು ಅವರಿಗೆ ಅನಿಸಿರಲಿಲ್ಲ.[9]

ಸಾಲು ಮರಗಳ ಮಾರ್ಗ (ಇಂದಿನ ಅವಿನ್ಯೂ ರಸ್ತೆ / ಅವಿನ್ಯೂ ಅಂದರೆ ಸಾಲುಮರಗಳ ಮಾರ್ಗ ಎಂದರ್ಥ) ವನ್ನು ನಿರ್ಮಿಸಿದ ಕೆಂಪೇಗೌಡನು ತನ್ನ ಪ್ರಜೆಗಳ ಕಸುಬು ವ್ಯಾಪಾರಿ ಸರಕುಗಳನ್ನಾಧರಿಸಿ, ಒಂದೊಂದು ವೃತ್ತಿಗೂ ಒಂದೊಂದು ಬೀದಿಯನ್ನು ಮಾಡಿ ಅಕ್ಕಪಕ್ಕದ ರಾಜ್ಯಗಳಿಂದ ವೃತ್ತಿಪರರು ಬಂದು ನೆಲೆಸಲು ಅನುಕೂಲಮಾಡಿಕೊಟ್ಟ, ಚಿಕ್ಕಪೇಟೆ, ದೊಡ್ಡಪೇಟೆ, ಕುಂಬಾರರಪೇಟೆ, ನಗರ್ತರ ಪೇಟೆ, ದೇಶದ ಪೇಟೆ, ಬಳೆಪೇಟೆ, ಹರಳೇಪೇಟೆ, ಎಂಬ ಹೆಸರುಗಳನ್ನಿಟ್ಟ. ಇಂದಿಗೂ ಇದೇ ಹೆಸರುಗಳನ್ನು ಉಳಿಸಿಕೊಂಡಿರುವುದು ಅಂದಿನ ಇತಿಹಾಸಕ್ಕೆ ಹಿಡಿದ ಕನ್ನಡಿಯಾಗಿದೆ. ಬೆಂಗಳೂರು ಪೌರರ ಕುಡಿಯುವ ನೀರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಧರ್ಮಾಂಬುದಿ ಕೆರೆ, ಸಂಪಂಗಿ ಕೆರೆಗಳನ್ನು ನಿರ್ಮಿಸಿದ. ವೃಷಭಾವತಿ ನದಿಗೆ ಅಡ್ಡಗಟ್ಟಿ ತಮ್ಮ ಮನೆದೇವರಾದ

ಕೆಂಪಮ್ಮಳ ಹೆಸರಿನಲ್ಲಿ ಕೆಂಪಾಂಬುಧಿ ಕೆರೆ, ಪಟ್ಟಮಹಿಷಿ ಚೆನ್ನಮ್ಮಳ ಹೆಸರಿನಲ್ಲಿ ಚನ್ನಮ್ಮನ ಕೆರೆ ತನ್ನ ಸಮೀಪ ಬಂಧು (ಚಿಕ್ಕಮ್ಮ) ಸಿದ್ದಮ್ಮಳ ಹೆಸರಿನಲ್ಲಿ ಸಿದ್ದಿಕಟ್ಟೆ (ಈಗಿನ City market)ಕೆಂಪಾಪುರ, ಅಗ್ರಹಾರದ ಕೆರೆ, ಮಾವಳ್ಳಿ ಕೆರೆ, ಜಕ್ಕರಾಯನ ಕೆರೆ, ಹಲಸೂರು ಕೆರೆ, ವೈಯ್ಯಾಟಿಕಾವಲಿನ ಕೆರೆ, ಯಡಿಯೂರು ಕೆರೆ ಇವೇ ಮೊದಲಾದ ಕೆರೆಕುಂಟೆಗಳೇ ಅಲ್ಲದೇ ಕಲ್ಯಾಣಿಗಳನ್ನು ಸಾಕಷ್ಟು ಪ್ರಮಾಣದಲ್ಲಿ ನಿರ್ಮಿಸಿದ ಆದರೆ ಈ ಕಲ್ಯಾಣಗಳನ್ನು ಕ್ರಮೇಣ ಮುಚ್ಚಿ ನಗರ ನಿರ್ಮಿಸಿರುವುದನ್ನು ಕಾಣಬಹುದು. ಕೆಲವಾರು ವರ್ಷಗಳ ಹಿಂದೆ ಗಂಗಾರಾಂ ಕಟ್ಟಡ ಬಿದ್ದುಹೋದ ಜಾಗದಲ್ಲಿ ಕಲ್ಯಾಣಿ ಇತ್ತೆಂದು ಕಂಡುಬಂತು. ಈ ಮೇಲ್ಕಂಡ ಕೋಟೆಗಳನ್ನು ನಿರ್ಮಿಸಬೇಕಾದ ಸಮಯದಲ್ಲಿ ಕೋಟೆಯ ಬಾಗಿಲು ನಿಲ್ಲದೇ ಬೆಳಗಾಗುವಷ್ಟರಲ್ಲಿ ಬಿದ್ದು ಹೋಗುತ್ತಿರಲು ಇದಕ್ಕೆ ಕಾರಣವೇನೆಂದು ಕೇಳಲು ಒಬ್ಬ ಮಹಿಳೆಯ ಬಲಿ ಅಗತ್ಯವೆಂದು ತಿಳಿಯಿತು.[10]

ಬೆಂಗಳೂರು ಸ್ಥಾಪಕ ಕೆಂಪೇಗೌಡ, ಶಿವಗಂಗೆಯ ಗಂಗಾಧರೇಶ್ವರ ಮತ್ತು ಹುತ್ರಿದುರ್ಗದ ಶಂಕರೇಶ್ವರನನ್ನು ಆರಾಧಿಸಿ, ಮಾಕುಲಿಯಲ್ಲಿ ತಪಸ್ಸಾಚರಿಸುತ್ತಿದ್ದ ಮಾಂಡವ್ಯ ಮುನಿಗಳಿಗೆ ನಮಸ್ಕರಿಸಿ ಆಶೀರ್ವಾದ ಕೋರಿದನು. ಮಾಂಡವ್ಯ ಮುನಿಗಳು ನ್ಯಾಯ ನೀತಿ ಧರ್ಮದಿಂದ ಬಾಳುವ ನಿನಗೆ ದೇವರ ಅನುಗ್ರಹವಿದೆ, ನಿನ್ನಿಂದ ಮಹಾತ್ಕಾರ್ಯವಾಗಬೇಕೆಂದು ನಿಧಿಯಿರುವ ಜಾಗವನ್ನು ತೋರಿಸಿ ಅಗೆಯಲು ಹೇಳಿ ಆಶೀರ್ವದಿಸಿದರು. ಇದರಿಂದಾಗಿ ಆ ಸ್ಥಳಕ್ಕೆ ಮಹಾಲಕ್ಷ್ಮಿಗಣಿ ಅಥವಾ ಮಹಾಗಣಿ ಎಂಬ ಹೆಸರು ಬಂತು. ಕಾಲಕ್ರಮೇಣ ಮಹಾಗಣಿ ಮಾಗಡಿಯಾಗಿರಲು ಸಾಧ್ಯ ಈ ಮಹಾಗಣಿಯ

ಕೃಪೆಯಿಂದ ಬೆಂಗಳೂರು ಸ್ಥಾಪನೆಗೊಂಡಿತೆಂಬ ಪುರಾಣಗಳಿವೆ.[11]

ಇನ್ನೊಂದು ವರದಿಯ ಪ್ರಕಾರ - 1972ರಲ್ಲಿ ಹ.ಕ.ರಾಜೇಗೌಡರು ಕೆಂಗೇರಿಯ ವಿದ್ಯಾಪೀಠದಲ್ಲಿ ನಡೆದ ಬರಹಗಾರ ಕೂಟದಲ್ಲಿ ಎರಡು ತಿಂಗಳ ಕಾಲ ಇದ್ದಾಗ, ಅವರಿಗೆ ಆಗ ಅಲ್ಲಿಯ ಪಕ್ಕದ ಜಮೀನೊಂದರ ಒಡೆಯ ಚನ್ನೇಗೌಡ ಎಂಬ ವೃದ್ಧರ ಪರಿಚಯವಾಯಿತು. ಆಗ ಅವರು ತಮ್ಮ ವಂಶದ ಪೂರ್ವಿಕರ ಬಗ್ಗೆ ಕಥೆಯೊಂದನ್ನು ಹೇಳಿದರು. ಅದರಂತೆ ಅವರ ಹಿರಿಯರು ಗಂಗರ ಬೆಂಗಾವಲು ಸೇನೆಯಲ್ಲಿದ್ದರಂತೆ ಆ ಸೈನ್ಯ ಒಮ್ಮೆ ಯುದ್ಧವೊಂದರಲ್ಲಿ ತೊಡಗಿದ್ದಾಗ ಅವರು ಗಾಯಗೊಂಡರು. ಹೀಗೆ ಗಾಯಗೊಂಡ ಗಂಗರ ಬೆಂಗಾವಲು ಪಡೆಯ ಶೂರರುಗಳಿಗಾಗಿ ಒಂದು ಗ್ರಾಮವನ್ನು ನಿರ್ಮಿಸಿದರು. ಅದೇ ಬೆಂಗಾವಲಾಳೂರು. ಮುಂದೆ ಅದು ಜನರ ಬಾಯಲ್ಲಿ ಬೆಂಗಳೂರಾಯಿತು. ಇದಕ್ಕೆ ಪೋಷಕವಾಗಿ ಇದೇ ಹೋಬಳಿಯ ಅಗರ ಗ್ರಾಮದ ಶಾಸನವೊಂದನ್ನು ಗಮನಿಸಬೇಕು. Judging from the inscription E.C.IX Bangalore 70 at this village, it appears to be an old place and a subordinate of the ganga king Satyavakya Permadi in the 9th century. Inscriptions were in existance in the 8th century. The artillery practice ground is on the garam plain.[12]

ಕೆಂಗೇರಿಯ ಹಿರಿಯರೊಬ್ಬರು ಹೇಳಿದ ತಮ್ಮ ಪೂರ್ವಿಕರ ಕಥೆಯೂ ಸಂಬಂಧವಿದ್ದಂತೆ ಕಂಡುಬರುತ್ತದೆ. ಅಷ್ಟೇ ಅಲ್ಲ ವಿವಾದಕ್ಕೊಳಗಾಗಿರುವ ಬೆಂಗಳೂರು

ಹೆಸರಿನ ಬಗ್ಗೆಯೂ ಇದು ಹೊಸ ಬೆಳಕನ್ನು ಚೆಲ್ಲುತ್ತದೆ. ಆದುದರಿಂದ ಬೆಂಗಳೂರು ಗಂಗರ ಬೆಂಗಾವಲಾಳುಗಳಿಗಾಗಿ ಕಟ್ಟಿದ ಸ್ಥಳವಾಗಿ ಅನಂತರ ಬೆಂಗಳೂರಾಗಿದೆ ಎಂದು ಊಹಿಸಲವಕಾಶವಿದೆ.

ಬೆಂಗಳೂರು ನಗರ ನಿರ್ಮಾಣಕ್ಕೆ ಅನುಮತಿ ನೀಡಿದ ಬಗೆಗೆ ಸ್ಪಷ್ಟವಾದ ಆಧಾರಗಳು ದೊರೆಯುತ್ತವೆ. ಕೃಷ್ಣದೇವರಾಯ ಪಟ್ಟಕ್ಕೆ ಬಂದ ಮೇಲೆ ತನ್ನ ಹತೋಟಿಯನ್ನು ಮತ್ತೆ ಗಳಿಸಿಕೊಂಡು ಅದರ ಆಡಳಿತವನ್ನು ಯಲಹಂಕ ನಾಡಿನ ದೊರೆಗಳಿಗೆ ವಹಿಸಿಕೊಟ್ಟ ಉಲ್ಲೇಖವಿದೆ. Devanahalli 81 dated in 1425 A.D. refer to the grant of a village in the shivanasamudram sime of the yelahanka Nad, part of the present Bangalore district was in those times and long after known as shivanasamudra sime.[13] ಅಂದರೆ ಈ ಹೇಳಿಕೆಯಂತೆ ಕೃಷ್ಣದೇವರಾಯನಿಗಿಂತ ಮುಂಚೆಯೇ ಈ ಭಾಗದ ಒಂದು ಹಳ್ಳಿ ಯಲಹಂಕ ನಾಡು ಪ್ರಭುಗಳಿಗೆ ದೊರೆಯಿತು. ಉಮ್ಮತ್ತೂರಿನ ರಾಜರ ಆಡಳಿತಕ್ಕೆ ಬರುವುದಕ್ಕಿಂತ ಮೊದಲು A - sub division caused chikkagangavadi or the lesser gangavadi occupied the valley of the shimsha with Honganur channapattena as its cheif town.[14]

ಇದರಿಂದ ಗಂಗರ ಕಾಲದಿಂದಲೂ ಈ ಭಾಗ ಅಭಿವೃದ್ಧಿ ಹೊಂದಿತ್ತೆಂಬುದಾಗಿ

ತಿಳಿಯುತ್ತದೆ.

In Banglore 79 dated about 870 A.D. sathavakya II is mentioned. During this reign the Nagattaru chief is said to have fixed sluices to 2 tanks at agara (Near Bangalore east) and constructed a third. Bangalore 83 dated about A.D. 890 ereyappa is referred to as ruling over the counrty.[15]

ಈ ಎಲ್ಲಾ ವಿಷಯಗಳನ್ನು ಗಮನಿಸಿದಾಗ ಗಂಗರ ಕಾಲದಿಂದಲೂ ಈ ಭಾಗ ಅಭಿವೃದ್ಧಿಯಲ್ಲಿದ್ದ ವಿಷಯ ಸ್ಪಷ್ಟವಾಗುತ್ತದೆಯಷ್ಟೇ ಅಲ್ಲ ಬೆಂಗಾವಲಾಳೂರು ಎಂಬ ಹೆಸರಿಗೆ ಒತ್ತಾಸೆಯಾಗುತ್ತದೆ. ಈ ಹೇಳಿಕೆಗಳಲ್ಲಿ ನಗರ ನಿರ್ಮಾಣಕ್ಕಾಗಿ ಯಲಹಂಕನಾಡ ದೊರೆಗೆ ಅನುಮತಿ ನೀಡಿದ ಸ್ಪಷ್ಟ ಉದಾಹರಣೆ ದೊರೆಯುತ್ತದೆ. ವಿಜಯದಶಮಿ ದರ್ಬಾರಿನಲ್ಲಿ ಕೃಷ್ಣದೇವರಾಯ ತನ್ನ ಸಾಮಂತನೊಬ್ಬನಿಗೆ ರಾಯ ಎಂಬ ಬಿರುದು ಮತ್ತು ನಗರ ನಿರ್ಮಾಣಕ್ಕೆ ಐವತ್ತು ಸಾವಿರ ವರಹ ಕೊಟ್ಟುದಾಗಿ ಪ್ರವಾಸಿಯೊಬ್ಬ ಹೇಳಿದ್ದಾರೆ. ಈ ಕಾರಣಗಳಿಂದಾಗಿ ಒಂದನೆಯ ಕೆಂಪೇಗೌಡ ಒಟ್ಟಾರೆ ಒಂದು ನಗರ ನಿರ್ಮಾಣದ ಅನುಮತಿಯನ್ನು ಪಡೆದು ಬೆಂಗಳೂರನ್ನು ನಿರ್ಮಿಸಿರಬೇಕು.

ಯಲಹಂಕ ನಾಡಪ್ರಭುಗಳು ಅರ್ಥಾತ್ ಮರಸು ಒಕ್ಕಲಿಗರು ತೆಲುಗರೆಂಬ ಅಭಿಪ್ರಾಯ ಹೇಗೋ ಹುಟ್ಟಿಕೊಂಡಿದೆ. ಇದು ಇತ್ತೀಚಿನ ಬೆಳವಣಿಗೆ ಎಂದು ಕಾಣುತ್ತದೆ.

ಏಕೆಂದರೆ ವಿಜಯನಗರದ ಕಾಲ ಮತ್ತು 4ನೆಯ ಮೈಸೂರು ಯುದ್ಧದ ನಂತರ ಹೈದರಾಬಾದಿನ ಪ್ರಭಾವಕ್ಕೆ ಒಳಗಾದ ಭಾಗಗಳಲ್ಲಿ ತೆಲುಗು ಪ್ರಭಾವ ಅತಿಯಾಗಿ ಆಯಿತು. ಅಲ್ಲದೇ 15ನೆಯ ಶತಮಾನದಲ್ಲಿ ಆಂಧ್ರದಲ್ಲಿ ಉಂಟಾದ ಕ್ಷಾಮದಲ್ಲಿ ಅನೇಕ ರೆಡ್ಡಿ ಜನಾಂಗದ ರೈತರು ಕರ್ನಾಟಕದ ಭಾಗಗಳಿಗೆ ವಲಸೆ ಬಂದರು. ಬಂದವರು ಕ್ರಮೇಣವಾಗಿ ಇಲ್ಲಿನ ಮೊರಸು ಒಕ್ಕಲಿಗರೊಂದಿಗೆ ಬೆರೆತರು. ಹೀಗಾಗಿ ಅವರ ಮಾತೃಭಾಷೆ ಕನ್ನಡವಾಗಿಯೂ ಬೆಳೆದುಬಂದಿದೆ. ಆ ಕಾರಣದಿಂದಲೇ The Marasu okkalas speak both canerese and telagu, the section known as Reddi and play adasime speaking telagu and the Rest canarese ಎಂದು ಅಭಿಪ್ರಾಯ ಪಡಲಾಗಿದೆ. ಮೇಲಿನ ಹೇಳಿಕೆ ಹೊರಗಿನಿಂದ ಬಂದವರು ಮಾತ್ರ ತೆಲುಗು ಮಾತನಾಡುತ್ತಾರೆಂಬುದನ್ನು ಸ್ಪಷ್ಟಪಡಿಸುತ್ತದೆ.

ಅಡಿಟಿಪ್ಪಣಿ

1. ಅನಕೃ. ಕೆಂಪೇಗೌಡ . ಪುಟ - 10

2. Internet

3. ಅನಕೃ. ಕೆಂಪೇಗೌಡ . ಪುಟ - 10

4. ಡಾ|| ಬಿ.ಪಾಂಡುಕುಮಾರ್ - 1600 ವರ್ಷಗಳ ಒಕ್ಕಲಿಗರ ಇತಿಹಾಸ

5. ಹ.ಕ.ರಾಜೇಗೌಡ - ಯಲಹಂಕ ಪ್ರಭು - ಪುಟ -27 - 29

6. ಕರ್ನಾಟಕ ಇತಿಹಾಸ ದರ್ಶನ - ಪುಟ - 505

7. ಹ.ಕ.ರಾಜೇಗೌಡ - ಯಲಹಂಕ ಪ್ರಭು - ಪುಟ -30

8. ಡಿ.ಎಲ್. ನರಸಿಂಹಾಚಾರ್ (ಸಂ) ವಡ್ಡಾರಾಧನೆ - ಪುಟ - 114

9. ಹ.ಕ.ರಾಜೇಗೌಡ - ಯಲಹಂಕ ಪ್ರಭು - ಪುಟ -31 - 32

10. ಡಾ|| ಬಿ.ಪಾಂಡುಕುಮಾರ್ - 1600 ವರ್ಷಗಳ ಒಕ್ಕಲಿಗರ ಇತಿಹಾಸ

11. ಡಾ|| ಮುನಿರಾಜಪ್ಪ - ಮಾಗಡಿ ಸೀಮೆ ಇತಿಹಾಸ - ಸಂಸ್ಕೃತಿ ಪುಟ - 17

12. ಎಸ್.ತೆ. ರಾಮಚಂದ್ರರಾವ್. ಸುಧಾವಾರಪತ್ರಿಕೆ

13. Mysore gazetteer - Vol - V P-41

14. ಅದೇ


15. Mysore gazetteer - Vol - V P-38

16. The Mysore tribes and castes - vol - IV P - 227

ಅಧ್ಯಾಯ 5 : ಆಡಳಿತ

5.1 ರಾಜಕೀಯ ಪರಿಸ್ಥಿತಿ

ಯಲಹಂಕ ನಾಡಪ್ರಭುಗಳ ಆಡಳಿತ ಸ್ವರೂಪವನ್ನು ತಿಳಿಯಲು ಸಹಕಾರಿಯಾಗುವ ಆಡಳಿತ ವ್ಯವಸ್ಥೆಯ ಪಟ್ಟಿಯೊಂದನ್ನು ಡಾ॥ ವಿ.ಶ್ರೀನಿವಾಸನ್ ವಿವಿಧ ಆಕರಗಳನ್ನು ಆಧರಿಸಿ ತಯಾರಿಸಿದ್ದಾರೆ. ಇದು ಯಲಹಂಕ ನಾಡಪ್ರಭುಗಳ ಆಡಳಿತ ಲಕ್ಷಣಗಳನ್ನು ಒಳಗೊಂಡಿದೆ.



ಬೆಂಗಳೂರಿನ ಯಲಹಂಕ ಪ್ರಭುಗಳೂ ನಾಡಪ್ರಭುಗಳಾಗಿ ಬಹಳ ಕಾಲ ಆಡಳಿತ ನಡೆಸಿದರು. ಅಧಿಕಾರ ವ್ಯಾಪ್ತಿಯನ್ನು ಬಲಪಡಿಸಿಕೊಳ್ಳಲು ಮತ್ತು ರಾಜ್ಯ ವಿಸ್ತರಿಸಲು ಹವಣಿಸಿದರು. ಇದರಿಂದಾಗಿ ಯಲಹಂಕ ಪ್ರಭುಗಳು ಹಿರಿಯ ಅಥವಾ 1ನೇ ಕೆಂಪೇಗೌಡನ ಕಾಲದಲ್ಲಿ (1513-1569) ಅಚ್ಯುತರಾಯನಿಂದ ಬೆಂಗಳೂರು, ವರ್ತೂರು, ಬೇವೂರು, ಹಲಸೂರು, ಕೆಂಗೇರಿ, ತಲಘಟ್ಟಪುರ, ಹೆಸರುಘಟ್ಟ ಮೊದಲಾದ 12 ಸ್ಥಳಗಳ ಮೇಲೆ ಅಧಿಕಾರ ವಿಸ್ತರಣೆಗೆ ಮನ್ನಣೆ ಪಡೆದರು. ಬೆಂಗಳೂರು ನಗರದಲ್ಲಿ ಕೋಟೆ-ಕೊತ್ತಲಗಳನ್ನು ನಿರ್ಮಿಸಿದರು. ಇದರಿಂದಾಗಿ ಯಲಹಂಕದ ನಾಡಪ್ರಭುಗಳಾಗಿದ್ದ ಕೆಂಪೇಗೌಡರ ಮನೆತನ ಒಂದು ಪಾಳೆಯ ಪಟ್ಟಿನ ಅಥವಾ ಸಾಮಂತ ರಾಜರ ಸ್ಥಾನಮಾನಕ್ಕೇರಿತು.[1]

ಯಲಹಂಕ ನಾಡಿನ ದೊರೆಗಳ ಸಾಮ್ರಾಜ್ಯ ನಿಷ್ಠೆ ಮತ್ತು ಧರ್ಮನಿಷ್ಠೆಗಳು ಚಕ್ರವರ್ತಿಗಳಿಗೆ ಮತ್ತು ಜನತೆಗೆ ಪ್ರೀತಿಪಾತ್ರವಾಗಿದ್ದವು. ವಿವಿಧ ಹಂತದ ಆಡಳಿತದಲ್ಲಿನ ಬದಲಾವಣೆಗಳು ಕಾರ್ಯರೂಪಕ್ಕೆ ಬರುವಂತೆ ಏರ್ಪಾಟು ಮಾಡಿದ್ದರು ಕೆಂಪೇಗೌಡರು.

ಅರಮನೆಯಲ್ಲಿ ಒಡ್ಡೋಲಗದ ವಿಶಾಲ ಚಾವಡಿಯಲ್ಲಿ ದರ್ಬಾರು ನಡೆಸುವುದು ಪ್ರಾರಭವಾಯಿತು. ಅದರಲ್ಲಿ ಅರಮನೆ ಅಧಿಕಾರಿಗಳು, ವಿದ್ವಾಂಸರು ಊರ ಪ್ರಮುಖರು ಕೂಡ ಸೇರಬೇಕು. ಇಲ್ಲಿ ಕಾರ್ಯಭಾರದ ವರದಿ ಮಂಡಿತವಾಗುತ್ತಿತ್ತು. ಅದರ ಬಗ್ಗೆ ನ್ಯಾಯ ವಿತರಣೆಗೆ ನಡೆಯತೊಡಗಿತು.

ಅರಮನೆ ಮುಂಭಾಗದಲ್ಲಿ 5 ಚಾವಡಿಗಳಾದವು. ಅಟವಣೆ, ಬೊಕ್ಕಸ, ಠಾಣ್ಯ, ಗೋವು, ಸುಂಕದ ಚಾವಡಿಗಳೆಂದು ವಿಂಗಡಿಸಲಾಯಿತು. ಒಂದೊಂದು ಚಾವಡಿಗೂ ಪ್ರತ್ಯೇಕ

ಅಧಿಕಾರಿ, ಆತನ ಕೈಕೆಳಗೆ ಸಿಬ್ಬಂದಿಯಿರುತ್ತಿದ್ದರು.

ಚಾವಡಿಯಲ್ಲಿ ಆಡಳಿತ ಕ್ರಮಗಳು 8 ವಿಭಾಗಗಳಾಗಿ ವಿಂಗಡಣೆಯಾಗಿದ್ದವು.

1. ಭೂಮಿ ಅಳತೆ ಮಾಡಿ, ಸ್ಥಳ ಮತ್ತು ಗುಣವನ್ನರಿತು ರಿವಾಜು ಪ್ರಕಾರ ಕಂದಾಯ ನಿಗದಿ ಮಾಡಲಾಗಿತ್ತು.

2. ಅರಮನೆಗೆ ಸೇರಿದ ಜಮೀನು ಸಾಗುವಳಿ ವಿವರ

3. ಅರಮನೆಯ ಖಾಸಾಗದ್ದೆ, ಬೈಲು, ತೋಟ, ತುಡಿಕೆ ಸಾಗುವಳಿ ವಿವರ

4. ಕೆರೆಕಟ್ಟೆಗಳ ವಿಚಾರಣೆ, ವರದಿ, ದುರಸ್ತಿ ವಿವರ

5. ಭೂಗಂದಾಯ, ಕಾಣಿಕೆ, ಸುಂಕ ಸಿದ್ಧಾಯಗಳ ವಸೂಲಿಗಳ ವಿವರ

6. ಅರಮನೆ ಬೇಸಾಯ ಮತ್ತು ಧಾನ್ಯ ವಸೂಲಿ ವಿವರಗಳು

7. ಗ್ರಾಮ ನೌಕರರು, ಪಾರು ಪತ್ತೇದಾರರು, ಕರಣೀಕ, ರೆಡ್ಡಿ, ಗೌಡ, ಬ್ರಾಹ್ಮಣರ ಅಗ್ರಹಾರ, ಮಾನ್ಯಗಳ ದಾಖಲೆಗಳು

8. ವರ್ತಕರ ವಿವರ, ವ್ಯಾಪಾರಕ್ರಮ, ಬೆಲೆಹತೋಟಿ, ನಾಣ್ಯ ಚಲಾವಣೆ ವಿವರಗಳು ಇದ್ದವು.

ಆಟವಣೆ ಚಾವಡಿಗೆ ಒಬ್ಬ ಸುಭಾದಾರ, ಇಬ್ಬರು ಶಿರಸ್ತೇದಾರರು, ನಾಲ್ವರು

ರಾಯಸದವರು, ಒಬ್ಬರಿಗೆ ಹಸ್ತಾಂತರಿಗಳಿದ್ದರೆ ಅವರಿಗೆ ಗೊಲ್ಲ, ಪಾರು ಪತ್ತೆದಾರ ಕಾವಲುಗಾರ, ಊಳಿಗದವರು, ಬೀಗ ಮುದ್ರೆಯವರು, ಸಿಬ್ಬಂದಿ ಹೀಗೆಲ್ಲಾ ನೇಮಕವಾಗಿದ್ದರು.

ಠಾಣ್ಯದ ಚಾವಡಿಯಲ್ಲಿ ಒಬ್ಬ ಗುರಿಕಾರ, ಇಬ್ಬರು ಶ್ಯಾನುಭೋಗರು, 10 ಓಲೆಕಾರರಿಗೆ ಒಬ್ಬ ದಫೇದಾರ, 20 ಓಲೆಕಾರರಿಗೆ ಒಬ್ಬ ಹೋಬಳಿಗಾರ, 50 ಜನರಿಗೆ ಒಬ್ಬ ಸೇರೆಗಾರ, 100 ಮಂದಿಗೆ ಒಬ್ಬ ಗುರಿಕಾರ ಇದ್ದರು. 10 ಠಾಣ್ಯದ ಗುರಿಕಾರರು, 20 ಸೇರೆಗಾರರು, 50 ಹೋಬಳಿಗಾರರು, 100 ದಫೇದಾರರು, ಸಾವಿರ ಓಲೆಕಾರರು ಸೇರಿ ಆಯಾದಿನದ ವಿದ್ಯಮಾನಗಳ ಸಮಯದಲ್ಲಿ ದೊರೆಗಳಿಗೆ ವರದಿ ಒಪ್ಪಿಸುತ್ತಿದ್ದ. ದೊರೆಗೆ ಅಂದಂದಿನ ವರ್ತಮಾನ ಅಂದಂದೇ ಅಥವಾ ಒಂದೆರಡು ದಿನಗಳಲ್ಲಿ ರಾಜ್ಯದ ಪ್ರತಿಯೊಂದು ಘಟನೆ ವರದಿಯಾದರೆ ಅದರ ಆಧಾರದ ಮೇಲೆ ಪರಿಹಾರ ಹುಡುಕುವಂತೆ ಏರ್ಪಾಡಾಯಿತು.

ಅರಮನೆಗೆ ನೇಮಿಸಿದ ನೌಕರರಿಗೆ ಸಂಬಳ,ಸಾರಿಗೆ ಭತ್ಯೆ ಮುಂತಾಗಿ ನೀಡಲಾಗುತ್ತಿತ್ತು. ಕೆಲವರಿಗೆ ಪೂರ್ತಿಯಾಗಿ ನಗದು ಸಂಬಳ ದೊರಕಿದರೆ, ಮಿಕ್ಕವರಿಗೆ ಅರೆ ನಗದು, ಮಿಕ್ಕ ಅರೆ ಸಂಬಳಕ್ಕೆ ದವಸಧಾನ್ಯ ನೀಡಲಾಗುತ್ತಿತ್ತು. ಮತ್ತೆ ಕೆಲವರಿಗೆ ಅವರಿಂದ ಬರಬೇಕಿದ್ದ ಕಂದಾಯ, ತೆರಿಗೆ ಮಾಫಿಮಾಡಿ, ಉಳಿದವುಗಳಲ್ಲಿ ರಿಯಾಯಿತಿ ತೋರಲಾಗುತ್ತಿತ್ತು.

ರಾಜ್ಯಕ್ಕೊಳಪಟ್ಟಿದ್ದ ಪ್ರದೇಶವನ್ನು ಸೀಮೆಗಳಾಗಿ ವಿಂಗಡಣೆ ಮಾಡಲಾಗಿತ್ತು. 1

ಸೀಮೆಯನ್ನು 15 ಅಥವಾ 20 ಹೋಬಳಿಗಳಾಗಿ ವಿಂಗಡಿಸಲಾಗಿತ್ತು. ಹೋಬಳಿಗೆ ಒಬ್ಬ ಪಾರುಪತ್ತೇಗಾರ, ಗ್ರಾಮ ಹುಟ್ಟುವಳಿಗೆ ರೆಡ್ಡಿ, ತೋಟಿ, ತಳವಾದ, ನೀರಗಂಟಿಗಳ ನೇಮಕವಾಗಿತ್ತು. ಅವರಿಗೆಲ್ಲಾ ಸಾಮಾನ್ಯವಾಗಿ ದವಸ ಧಾನ್ಯವನ್ನೇ ವೇತನವಾಗಿ ನೀಡಲಾಗುತ್ತಿತ್ತು.

ಗ್ರಾಮಗಳಲ್ಲಿ ಪಂಚಾಯ್ತಿ ಕ್ರಮವನ್ನು ಜಾರಿಗೊಳಿಸಲಾಯಿತು. ಊರ ಮುಖಂಡರಾಗಿ ಪಟೇಲ, ಯಜಮಾನ, ಪದ್ಧತಿಯಿಂದ ಊರಸುಧಾರಣೆ ಸಾಧ್ಯವಾಗಿತ್ತು. ಇತರು ತಮ್ಮ ಕೈಕೆಳಗಿದ್ದ ರಡ್ಡಿ, ತೋಟಿ, ತಳವಾರರ ಮೂಲಕ ಗ್ರಾಮದ ಜವಾಬ್ದಾರಿಗಳನ್ನು ನಿರ್ವಹಿಸುತ್ತಿದ್ದರು. ಸಣ್ಣಪುಟ್ಟ ಮನಸ್ತಾಪ, ಜಗಳಗಳಿದ್ದರೆ ಪಂಚಾಯ್ತಿಯನ್ನು ಸೇರಿಸಿ ಸುಸೂತ್ರವಾಗಿ ಬಗೆಹರಿಸುತ್ತಿದ್ದರು.

ಸೈನ್ಯದ ವ್ಯವಸ್ಥೆ :- ರಾಜ್ಯದ ರಕ್ಷಣೆಗೆ ರೂಪಿಸಿದ್ದ ಸೈನ್ಯದಲ್ಲಿನ ಸಾವಿರಾರು ಮಂದಿಗೆ ಹಲವು ಬಗೆಯ ಸವಲತ್ತು ನೀಡಲಾಗಿತ್ತು. ಸೈನಿಕರು ಕತ್ತಿ, ಗುರಾಣಿ, ಬಿಲ್ಲು, ಬಾಣ, ಖಡ್ಗತೋವಾ ಮುಂತಾದ ಆಯುಧಗಳೊಂದಿಗೆ ಸದಾ ಸಜ್ಜಾಗಿರಬೇಕಾಕಿತ್ತು. ತರಬೇತಿ ಪಡೆದ ಸೈನಿಕರು ಕರೆ ಬಂದಾಗ ಹಾಜರಾಗಿರದಿದ್ದರೆ ಅದಕ್ಕೆ ಆತ ಸರಿಯಾದ ಕಾರಣ ಕೊಡದಿದ್ದರೆ ಆತನಿಗೆ ಮರಣದಂಡನೆಯ ಶಿಕ್ಷೆ ನೀಡಲಾಗುತ್ತತ್ತು.

ಸೈನಿಕರ ಬೇಸಾಯದ ತರಬೇತಿಯನ್ನೂ ಕೊಡಲಾಗುತ್ತಿತ್ತು. ಯುದ್ಧಕ್ಕೆ ಹೋದಾಗ ಅವರ ಕೆಲಸವನ್ನು ಇತರರು ಮಾಡಬೇಕಾಗಿತ್ತು.

ಶಾಂತಿಕಾಲದ ಪಡೆಯನ್ನು ಪ್ರತ್ಯೇಕವಾಗಿ ತರಬೇತಿ ನೀಡಿ ಇಟ್ಟುಕೊಳ್ಳಲಾಗಿತ್ತು. ದಳವಾಯಿ ಒಂದು ರೀತಿಯಲ್ಲಿ ರಾಜ್ಯದ ಸರ್ವಾಧಿಕಾರಿ ಈತನಿಗೆ ರಾಜನ ವಿಶ್ವಾಸ ಮತ್ತು ಪ್ರಜೆಗಳ ಗೌರವಾದರಗಳು ದೊರಕುತ್ತಿದ್ದವು.

ಅಡಿಟಿಪ್ಪಣಿ

1. ಬಿ.ಪಾಂಡುಕುಮಾರ್ - 1600 ವರ್ಷಗಳ ಒಕ್ಕಲಿಗರ ಇತಿಹಾಸ ಪುಟ - 19

2. ಜಾಣಗೆರೆ ವೆಂಕಟರಾಮಯ್ಯ - ಮಾಯಾನಗರಿ ಶಿಲ್ಪಿ

   ಬೆಂಗಳೂರು ಕೆಂಪೇಗೌಡ ಪುಟ - 111-114

5.2 ಸಾಮಾಜಿಕ ಪರಿಸ್ಥಿತಿ

ರಾಜ್ಯಕ್ಕೆ, ಸಮಾಜಕ್ಕೆ ಉತ್ತಮ ಸೇವೆ ಸಲ್ಲಿಸಿದವರಿಗೆ ಗೌರವಾರ್ಪಣೆ ಪದ್ಧತಿ ಜಾರಿಯಾಗಿತ್ತು. ಅದನ್ನು ಸೈನ್ಯ, ಸಾಮಾಜಿಕ ಜೀವನ, ಸಾಂಸ್ಕೃತಿಕ ಲೋಕ ಮುಂತಾದ ಕ್ಷೇತ್ರಗಳಿಗೂ ವಿಸ್ತರಿಸಿ ಗೌರವ ನೀಡುವಂತಾಯಿತು. ಅವರನ್ನು ಹಬ್ಬ ಹರಿದಿನಗಳಲ್ಲಿ ಆದರಿಸಲಾಗುತ್ತಿತ್ತು.

ರಾಜ್ಯದಲ್ಲಿ ಎಲ್ಲಾ ಜಾತಿ ಜನರೂ ಇರುವಂತೆ, ಅವರ ಸಂಖ್ಯೆಗನುಗುಣವಾಗಿ ಅವರಿಗೆಲ್ಲಾ ಸೌಲಭ್ಯ, ಸವಲತ್ತುಗಳನ್ನು ನೀಡಲು ಯೋಜಿಸಲಾಯಿತು. ಅದರಿಂದಾಗಿ ರಾಜ್ಯದಲ್ಲಿ ಗೌಡರು, ವೀರಶೈವರು, ಗೊಲ್ಲರು, ಕುರುಬರು, ಕುಂಬಾರರು, ಪಾಂಚಾಳರು, ವಡ್ಡರು, ಕೊರಚರು, ಕೊರಮರು, ಬಣಜಿಗಳು, ಮೇದರು, ಬೇಡರು, ಮಾದರು, ಬೆಸ್ತರು, ನಾಪಿತರು, ಬಲಗೈನವರು, ಎಡಗೈನವರು, ಹೀಗೆ ಅನೇಕ ಜನಾಂಗದವರು ಸಾಮರಸ್ಯದಿಂದ ಜೀವಿಸಲು ಕಟ್ಟೆಚ್ಚರ ವಹಿಸಲಾಗಿತ್ತು.[1]

ಅಮಾಯಕ ಹೆಣ್ಣುಮಕ್ಕಳನ್ನು ಬಲಿಕೊಡುವುದು ತರವಲ್ಲವೆಂದು ತಿಳಿದ ಕೆಂಪೇಗೌಡನ ಸೊಸೆ ಲಕ್ಷ್ಮಿದೇವಿಯು ರಾತ್ರಿ ಯಾರಿಗೂ ತಿಳಿಯದಂತೆ ಮನೆಯಿಂದ ಹೊರಬಿದ್ದು ಕೋಟೆ ಬಾಗಿಲಿಗೆ ಬಂದು ಬಲಿಯಾದಳು. ಪ್ರೊ॥ಎಂ.ವಿ.ಕೃಷ್ಣರಾವ್ ಹೀಗೆ ಉಲ್ಲೇಖಿಸುತ್ತಾರೆ. ಕೆಂಪೇಗೌಡನು ನಿರ್ಮಿಸಲು ಹೊರಟ ಕೋಟೆಯ ಬಾಗಿಲು ನಿಲ್ಲದಿದ್ದಾಗ ಆತನ ಸೊಸೆ ಲಕ್ಷ್ಮಮ್ಮನ ಸುಂದರವಾದ ವಿಗ್ರಹವೊಂದನ್ನು ಮಾಡಿಸಿ ಪ್ರತಿಷ್ಠಾಪನೆ ಮಾಡಿಸಿದ. ಕ್ರಮಾನುಗತವಾಗಿ ಅಲ್ಲಿ ಪೂಜಾರಿಗಳು ನೆಡಯುವಂತೆ ಏರ್ಪಾಡು ಮಾಡಿದ.[2]

ಸಮಾಜದಲ್ಲಿ ಅನುಚಾನವಾಗಿ ನಡೆದು ಬಂದಿದ್ದ ಕೆಲವು ಅನಿಷ್ಟ ಪದ್ಧತಿಗಳನ್ನು ತೊಡೆದು ಹಾಕಲೇಬೇಕಾಗಿತ್ತು. ಗೌಡಕುಲಗಳಲ್ಲಿ ವಿವಾಹವಾಗಲಿರುವ ತರುಣಿಯರ ಬೆರಳೊಂದನ್ನು ಕತ್ತರಿಸಿ ಅದನ್ನು ದೇವರಿಗೆ ಒಪ್ಪಿಸುವ ಪದ್ಧತಿ ಬಹಳ ಕಾಲದಿಂದ ನಡೆದುಬಂದಿತ್ತು. ಇದನ್ನು ಕಂಡ ಕೆಂಪೇಗೌಡನಿಗೆ ಬಹಳ ನೋವಾಯಿತು ತಕ್ಷಣ ಇಂತಹ ಪದ್ಧತಿಯನ್ನು ಎಲ್ಲರೂ ಕೈಬಿಡಬೇಕು. ಮಾಡಿದ್ದೇ ಆದರೆ ಶಿಕ್ಷೆಗೆ ಗುರಿಪಡಿಸಲಾಗುವುದು ಎಂದು ಎಚ್ಚರಿಸಲಾಯಿತು. ಈ ಕ್ರಮವನ್ನು ಕೆಲವು ಸಂಪ್ರದಾಯಸ್ಥರು ವಿರೋಧಿಸಲು ಪಿತೂರಿ ನಡೆಸಿದರು. ಆದರೆ ಅಂತಹವರನ್ನು ತಣಿಸಲು ಬೆರಳನ್ನು ಅಮಾನುಷವಾಗಿ ಕತ್ತರಿಸಿ ದೇವರಿಗೆ ಅರ್ಪಿಸುವ ಬದಲು ಚಿನ್ನ ಅಥವಾ ಬೆಳ್ಳಿಯಲ್ಲಿ ಬೆರಳು ಮಾಡಿಸಿ ಅದನ್ನು ದೇವರಿಗೆ ಅರ್ಪಿಸಿಕೊಳ್ಳಬಹುದು ಎಂದೂ ಆಜ್ಞೆ ವಿಧಿಸಿದಾಗ ಪ್ರಜೆಗಳು ಸಂಪ್ರದಾಯವಾದಿಗಳು ಕ್ರಮೇಣ ಒಪ್ಪಿಕೊಂಡರು.[3]

ಅಷ್ಟೇ ಅಲ್ಲದೇ ಈ ಮನೆತನದ ಹೆಣ್ಣುಮಕ್ಕಳು ವಿವಾಹ ಪೂರ್ವದಲ್ಲಿ ಬಂಡಿದೇವರಿಗೆ ಬಲಗೈ ಕಿರುಬೆರಳನ್ನು ಕತ್ತರಿಸುವ ಕ್ರೂರ ಸಂಪ್ರದಾಯವನ್ನು ತಪ್ಪಿಸಿದ ಕೀರ್ತಿ ಹಿರಿಯ ಕೆಂಪೇಗೌಡನಿಗೆ ಸಲ್ಲುತ್ತದೆ. ಇದು ಸಾಮಾಜಿಕ ಕ್ಷೇತ್ರದಲ್ಲೊಂದು ಕ್ರಾಂತಿಕಾರಿಯಾಗಿದೆ.[4]

ಕೆಂಪೇಗೌಡನು ಬಲಿಕೊಟ್ಟು ಯಾವ ಕಾರ್ಯವನ್ನು ಮಾಡುವ ಜಾಯಮಾನದವನಲ್ಲ. ಕಾರಣವೇನೆಂದರೆ ಒಕ್ಕಲಿಗರ ಮತ್ತೊಂದು ಪಂಗಡವಾದ ಬೆರಳು ಕೊಡುವ ಒಕ್ಕಲಿಗರು ಆತನ ಕಾಲದಲ್ಲಿ ಆ ಮನೆತನದ ಹಿರಿಯ ಮಗ ಇಲ್ಲದೇ ಹಿರಿಯಮಗಳು ಬೆರಳನ್ನು ಕತ್ತರಿಸಿ ದೇವರಿಗೆ ಅರ್ಪಿಸುತ್ತಿದ್ದರಂತೆ. ಈ ಪದ್ಧತಿಯನ್ನು

ಕೆಂಪೇಗೌಡನು ತಪ್ಪಿಸಿದನು. ಇಂದಿಗೂ ಈ ಪಂಗಡದವರೂ ಬೆರಳಿನ ಬದಲು ಸಾಂಕೇತಿಕವಾಗಿ ಎಲೆ ಇಲ್ಲವೇ ಪತ್ರೆಯನ್ನು ದೇವರಿಗೆ ಅರ್ಪಿಸುತ್ತಾರೆ.

ಅಲ್ಲದೇ ಪೌರರ ಕುಡಿಯುವ ನೀರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಧರ್ಮಾಂಬುದಿ ಕೆರೆ, ಸಂಪಂಗಿ ಕೆರೆಗಳನ್ನು ನಿರ್ಮಿಸಿದ. ವೃಷಭಾವತಿ ನದಿಗೆ ಅಡ್ಡಗಟ್ಟಿ ತಮ್ಮ ಮನೆದೇವರಾದ ಕೆಂಪಮ್ಮಳ ಹೆಸರಿನಲ್ಲಿ ಕೆಂಪಾಂಬುಧಿಕೆರೆ ಪಟ್ಟಮಹಿಷಿಚೆನ್ನಮ್ಮಳ ಹೆಸರಿನಲ್ಲಿ ಚನ್ನಮ್ಮನ ಕೆರೆ, ತನ್ನ ಸಮೀಪ ಬಂಧು (ಚಿಕ್ಕಮ್ಮ) ಸಿದ್ದಮ್ಮಳ ಹೆಸರಿನಲ್ಲಿ ಸಿದ್ದಿಕಟ್ಟೆ (ಈಗಿನ city market) ಕೆಂಪಾಪುರ ಅಗ್ರಹಾರದ ಕೆರೆ, ಮಾವಳ್ಳಿ ಕೆರೆ, ಜಕ್ಕರಾಯನ ಕೆರೆ, ಹಲಸೂರು ಕೆರೆ, ವೈಯ್ಯಾಲಿ ಕಾವಲಿನ ಕೆರೆ, ಯಡಿಯೂರು ಕೆರೆ ಇವೇ ಮೊದಲಾದ ಕೆರೆಕುಂಟೆಗಳೇ ಅಲ್ಲದೇ ಕಲ್ಯಾಣಿಗಳನ್ನು ಸಾಕಷ್ಟು ಪ್ರಮಾಣದಲ್ಲಿ ನಿರ್ಮಿಸಿದನು.[5]

ಸಮಾಜದಲ್ಲಿ ಕುರುಬರು, ಅಗಸರು, ಕಮ್ಮಾರರು, ಬಡಗಿಗಳು, ನೇಕಾರರು, ಹಜಾಮರು, ಬೆಸ್ತರು ಹೀಗೆ ಮುಂತಾದ ಜನರು ಸಮಾಜದಲ್ಲಿ ವಾಸಮಾಡುತ್ತಿದ್ದರು. ಇವರೆಲ್ಲರೂ ಒಟ್ಟಾಗಿ ಅನ್ಯೋನ್ಯತೆಯಿಂದ ಬಾಳ್ವೆ ನಡೆಸುತ್ತಿದ್ದರು.

ಅಡಿಟಿಪ್ಪಣಿ

1. ಜಾಣಗೆರೆ ವೆಂಕಟರಾಮಯ್ಯ , ಮಾಯಾನಗರಿಶಿಲ್ಪಿ,

ಬೆಂಗಳೂರು ಕೆಂಪೇಗೌಡ - ಪುಟ - 114

2. ಡಾ॥ ಎಂ.ವಿ.ಕೃಷ್ಣರಾವ್ ಬೆಂಗಳೂರು ಕೆಂಪೇಗೌಡ (1964) ಪುಟ - 187

3. ಜಾಣಗೆರೆ ವೆಂಕಟರಾಮಯ್ಯ, ಮಾಯಾನಗರಿಶಿಲ್ಪಿ,

ಬೆಂಗಳೂರು ಕೆಂಪೇಗೌಡ - ಪುಟ - 114

4. ಡಾ॥ ಮುನಿರಾಜಪ್ಪ, ಮಾಗಡಿ ಸೀಮೆ ಇತಿಹಾಸ ಮತ್ತು ಸಂಸ್ಕೃತಿ ಪುಟ - 39

5. ಡಾ॥ ಬಿ.ಪಾಂಡುಕುಮಾರ್ - 1600 ವರ್ಷಗಳ ಒಕ್ಕಲಿಗರ

ಇತಿಹಾಸ ಪುಟ - 34

5.3 ಆರ್ಥಿಕ ಪರಿಸ್ಥಿತಿ

ಮುಖ್ಯ ಕಸುಬು ವ್ಯವಸಾಯವಾಗಿತ್ತು. ಭೂಮಿ ಹೊಂದಿದ ಪ್ರತೀ ಪ್ರಜೆಯು ರಾಜ್ಯಕ್ಕೆ ನಿಷ್ಠೆ ಹೊಂದಿ ಅದರಲ್ಲಿ ಬೆಳೆಯನ್ನು ಧೋರಣೆ ಹೊಂದುವಂತೆ ಮಾಡಲಾಗಿತ್ತು.[1] ಹಿರಿಯಕೆಂಪೇಗೌಡ ಸ್ವತಂತ್ರ ಭೈರವ ನಾಣ್ಯವನ್ನು ಟಂಕಿಸಿದ ಹಿನ್ನಲೆಯಲ್ಲಿ ಬಂಧಿಸಲ್ಪಟ್ಟನೆಂಬುದು ಬಹುಮಂದಿ ಲೇಖಕರ ಅಭಿಪ್ರಾಯ. ಈ ಕಾರಣವನ್ನು ಐತಿಹಾಸಿಕವಾಗಿ ಸಮರ್ಥಿಸಲಾಗದಿದ್ದರೂ ಕ್ಷೇತ್ರಾಧ್ಯಯನ ಸಂದರ್ಭದಲ್ಲಿ ವಿಚಾರಗಳು ನಂಬಿಕೆ ಹುಟ್ಟಿಸುತ್ತವೆ. ತನ್ನ ಮನೆ ದೇವರಾದ ಭೈರವನ ಹೆಸರಿನಲ್ಲಿ ಟಂಕಿಸಿದ್ದ ಅವರೇಕಾಳು ಗಾತ್ರದ ನಾಣ್ಯದ ಲಕ್ಷ್ಮೀಪುರ (ವಡವಟ್ಟ) ದ ಬೇಡುಕಲ್ಲಿನ ಬಳಿ ದೊರೆತಿದ್ದು, ಇದನ್ನು ಹಳ್ಳಿಗರು ವಿಜಯ ಎಂದು ಕರೆಯುತ್ತಿದ್ದರಂತೆ.

ಇಲ್ಲಿ ಹಿರಿಯಕೆಂಪೇಗೌಡ ವಿಜಯನಗರದ ಅನುಮತಿಯಲ್ಲದೇ ನಾಣ್ಯವನ್ನು ಟಂಕಿಸಿದನೆಂಬುದನ್ನು ನಂಬಲಾಗದು. ಏಕೆಂದರೆ ಕೆಳದಿ ಮುಂತಾದ ನಾಯಕರಿಗೆ ಸ್ವತಂತ್ರನಾಣ್ಯ ಟಂಕಿಸುವ ಅಧಿಕಾರ ನೀಡಲಾಗಿತ್ತು. ಆದರೆ ನಾಣ್ಯಕ್ಕಿಟ್ಟ ಹೆಸರಿನಿಂದ ಮನಸ್ತಾಪ ಬಂದು ಅನುಮತಿ ನಂತರ ಭೈರವ ನಾಣ್ಯಕ್ಕೆ '<u>ವಿಜಯ</u>' ಎಂಬ ಹೆಸರು ಬಂದಿರುವ ಸಾಧ್ಯತೆಗಳನ್ನು ಕಡೆಗಣಿಸಲಾಗದು.[2] ಅಲ್ಲದೇ ವರ್ಷಕ್ಕೆ 30,000 ಪಗೋಡಗಳ ಆದಾಯವಿರುವ ಬೇಗೂರು, ಹಲಸೂರು, ವರ್ತೂರು, ಜಿಂಜಿ, ತಳಗಟ್ಟಪುರ, ಕುಂಬಳಗೂಡು, ಕೆಂಗೇರಿ ಮತ್ತು ಬಾಣಾವರಗಳನ್ನು ಇವನ್ನು ಹೊಂದಿದ್ದನು.[3]

ಅಷ್ಟೇ ಅಲ್ಲದೆ ಆಗ ನಾಣ್ಯ ಚಲಾವಣೆ ಕಡಿಮೆಯಿದ್ದಿದ್ದರಿಂದ ದವಸಧಾನ್ಯಗಳಿಗೆ

ಪ್ರಾಧಾನ್ಯತೆ ನೀಡಲಾಗತ್ತಿತ್ತು. ಈ ವ್ಯವಸ್ಥೆಯಿಂದಾಗಿ ಧನದ ಏರಿಳಿತಗಳು ಕಡಿಮೆಯೇ ಅನ್ನಬೇಕು.[4]

ರಾಗಿ, ಆರಕ, ಸಜ್ಜೆ, ನವಣೆ, ಜೋಳ ಮತ್ತು ದ್ವಿದಳ ಧಾನ್ಯಗಳಾದ ಹುರುಳಿ, ಅವರೆ, ತೊಗರಿ, ಹೆಸರು, ಉದ್ದು, ತಗಣೆ ಮತ್ತು ಎಣ್ಣೆಕಾಳುಗಳಾದ ನೆಲಗಡಲೆ, ಉಚ್ಚೆಳ್ಳು, ಎಳ್ಳು, ಹರಳು, ಸಾಸಿವೆ ಮುಂತಾದವು ಕಾಡಾರಂಭದ ಮುಖ್ಯ ಬೆಳೆಗಳು ಮಾಗಡಿ ಸೀಮೆಯಲ್ಲಿ ಕೆರೆ, ಕಟ್ಟೆ, ಬಾವಿಗಳನ್ನು ನಿರ್ಮಿಸಿ ಬೇಸಾಯಕ್ಕೆ ಬೇಕಾದ ನೀರಾವರಿಯನ್ನು ಒದಗಿಸಲಾಗಿದೆ. ನಿರ್ಮಾಣಗೊಂಡಿರುವ ಕೆರೆಕಟ್ಟೆ ಕಲ್ಯಾಣಿಗಳಿಗೆ ಸಂಬಂಧಿಸಿದಂತೆ ಅಲ್ಲಲ್ಲಿ ಶಾಸನಾಧಾರಗಳಿವೆ.[5]

ಪ್ರಾಚೀನಕಾಲದಿಂದರೂ ಭಾರತದಲ್ಲಿ ಭೂಕಂದಾಯವೇ, ರಾಜ್ಯಾದಾಯದ ಮೂಲಾಂಶ ಕೆಲವು ಆಧಾರಗಳಿವೆ. ಉತ್ಪಾದನೆಯ 1/4 ಭಾಗವನ್ನು ರಾಜ್ಯಖಜಾನೆಗೆ ಕೊಡಬೇಕಾಗಿತ್ತು.[6]

ಆದರೆ ಶಾಸನಾಧಾರಗಳಂತೆ ಗದ್ದೆಗೆ 1/3 ಭಾಗ, ಹೊಲಕ್ಕೆ 1/5 ಭಾಗ ಕಂದಾಯ ತೆರಬೇಕಾಗಿತ್ತು.[7]

ಕಂದಾಯ ವಸೂಲಿಯ ಜವಾಬ್ದಾರಿಗೌಡ, ಶಾನುಭೋಗ, ಕರಣಿಕ ಮಣೆಗಾರ ಮುಂತಾದವರಿಗಿತ್ತು. ಕಂದಾಯ ನಿಗದಿ ಮತ್ತು ವಸೂಲಿಯಲ್ಲಿ ಸ್ಥಳೀಯ ಆಡಳಿತಗಾರರಿಗೆ ಹೆಚ್ಚಿನ ಅಧಿಕಾರವಿತ್ತು. ಮಾಗಡಿ ಸೀಮೆಯಲ್ಲಿ ಭೂಕಂದಾಯದ ಪ್ರಕಾರಗಳನ್ನು ಶಾಸನಗಳು ಉಲ್ಲೇಖಿಸಿವೆ. ಬೆಟ್ಟಾದಾಯ[8] ದವಸಾದಾಯ , ಸುವರ್ಣದಾಯ, ಚರಾದಾಯ

ಮತ್ತು ಗ್ರಾಮಾದಾಯ.[9]

ಗಟ್ಟಿಪುರದ ಬೆಟ್ಟದ ಮೇಲೆ ಗುಹೆಯಲ್ಲಿದ್ದ ಗದ್ದಿಗೆ ಜೀರ್ಣೋದ್ಧಾರ ಸಂದರ್ಭದಲ್ಲಿ ಕುಡಿಕೆಯಲ್ಲಿ ದೊರೆತ ಚಿನ್ನದ ನಾಣ್ಯಗಳ ಮೇಲೆ ಬಸವನ ಚಿತ್ರವಿತ್ತೆಂದು ಹೇಳಲಾಗುತ್ತದೆ. ಮೊಗಡಿಸೀಮೆಯ ಶಾಸನಗಳು ವರಹ,[10] ಬಂಗಾರ, ಹಣ, ಹೊನ್ನು ಮುಂತಾದ ನಾಣ್ಯಗಳನ್ನು ಉಲ್ಲೇಖಿಸುತ್ತವೆ. ಪ್ರಾಕ್ಚಾರಿತ್ರಿಕ ಆಧಾರಗಳಿಂದ ನಾಣ್ಯಗಳು ನಾಡಿನ ರಾಜಕೀಯ, ಆರ್ಥಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಇತಿಹಾಸದ ಮೇಲೆ ಯಶಸ್ವಿಯಾಗಿ ಬೆಳಕು ಚೆಲ್ಲುತ್ತವೆ. ಆದರೆ ನಾಣ್ಯಗಳು ದೊರೆಯುವುದೇ ಕಷ್ಟಕರ.[11]

ಕೃಷಿ ಭಾಂದವರು ವರ್ಷಕ್ಕೊಮ್ಮೆ ಅಡದಿ ಎಂಬ ಕಂದಾಯವನ್ನು ನೀಡುತ್ತಿದ್ದರು. ಅಷ್ಟೆ ಅಲ್ಲದೇ ಇವನು ತನ್ನ ಕಾಲದಲ್ಲಿ ವ್ಯವಸಾಯದ ಜೊತೆಗೆ ತೋಟಗಾರಿಕೆ ಬೆಳೆಗಳನ್ನು ಬೆಳೆಯಲು ಇವನು ಪ್ರೋತ್ಸಾಹಿಸಿದನು. ಇವನು ಉದ್ಯಾನವನಗಳನ್ನು ನಿರ್ಮಿಸಲು ಪ್ರೋತ್ಸಾಹಿಸಿದನು. ಇವನು ಉದ್ಯಾನವನಗಳನ್ನು ನಿರ್ಮಿಸಲು ಪ್ರೋತ್ಸಾಹಿಸಿದ ಜೊತೆಗೆ ಹಣ್ಣಿನ ಬೆಳೆಗಳನ್ನು ಬೆಳೆಯುವುದಕ್ಕೆ ಪ್ರೋತ್ಸಾಹಿಸಿದ ಜೊತೆಗೆ ಹಣ್ಣಿನ ಬೆಳೆಗಳನ್ನು ಬೆಳೆಯುವುದಕ್ಕೆ ಪ್ರೋತ್ಸಾಹವನ್ನು ನೀಡಿದ. ಹೀಗೆ ಇವನ ಕಾಲದಲ್ಲಿ ರಾಜ್ಯ ಸುಭಿಕ್ಷವಾಗಿತ್ತು. ಅಷ್ಟು ಮಾತ್ರವಲ್ಲದೇ ವ್ಯವಸಾಯವನ್ನು ಪ್ರೋತ್ಸಾಹಿಸುವ ಸಲುವಾಗಿ ಹಲವಾರು ಕಡೆ ಕೆರೆ - ಕಟ್ಟೆಗಳನ್ನು ನಿರ್ಮಿಸಿದ. ಅದರಿಂದ ವ್ಯವಸಾಯಕ್ಕೆ ಅಗತ್ಯವಾದ ನೀರು, ಕಾಲ-ಕಾಲಕ್ಕೆ ಸರಿಯಾಗಿ ಸಿಗುವಂತಾಯಿತು. ಕೋಟೆಯ ಸುತ್ತ ಮಾವು, ಹಲಸು, ಹುಣಸೆ, ನೇರಳೆ ಮುಂತಾದ ತೋಪುಗಳಿಗೆ ಭೂಮಿ ಮೀಸಲಿಡಬೇಕು ಎಂದು ಆಜ್ಞೆ ಮಾಡಿದ್ದನು.[12]

ಅಡಿಟಿಪ್ಪಣಿ

1. ಜಾಣಗೆರೆ ವೆಂಕಟರಾಮಯ್ಯ - ಬೆಂಗಳೂರು ಕೆಂಪೇಗೌಡ

2. ಡಾ॥ ಮುನಿರಾಜಪ್ಪ - ಮಾಗಡಿ ಸೀಮೆ ಇತಿಹಾಸ ಮತ್ತು ಸಂಸ್ಕೃತಿ

3. Internet

4. ಜಾಣಗೆರೆ ವೆಂಕಟರಾಮಯ್ಯ - ಬೆಂಗಳೂರು ಕೆಂಪೇಗೌಡ

5. ಡಾ॥ ಮುನಿರಾಜಪ್ಪ - ಮಾಗಡಿ ಸೀಮೆ ಇತಿಹಾಸ ಮತ್ತು ಸಂಸ್ಕೃತಿ

6. Q.J.M.S - ಸಂ - XXIII

7. ಎ.ಕ.10. ಮುಳಬಾಗಿಲು - 99

8. ಎ.ಕ.12. ಕುಣಿಗಲ್ - 23

9. ಎ.ಕ. 9. ಬೆಂಗಳೂರು ಅನುಬಂಧ ಮಾಗಡಿ - 86

10. ಡಾ॥ ಮುನಿರಾಜಪ್ಪ - ಮಾಗಡಿಸೀಮೆ ಇತಿಹಾಸ ಮತ್ತು ಸಂಸ್ಕೃತಿ

11. ಎ.ಕ.9. ಮಾಗಡಿ - 63,27,18,491 ಎ.ಕ.9. ಬೆಂಗಳೂರು ಅನುಬಂಧ ಮಾಗಡಿ

12. Internet

5.4 ಧಾರ್ಮಿಕ ಪರಿಸ್ಥಿತಿ

ಕೆಂಪೇಗೌಡನ ಕಾಲದಲ್ಲಿ ಕುಲದೈವಗಳಾದ ಕಾಲಭೈರವ ಮತ್ತು ಕೆಂಪಮ್ಮ ದೇವತೆಯರ ಪೂಜಾವಿಧಿಗಳನ್ನು ವ್ಯವಸ್ಥಿತವಾಗಿ ನಡೆಸಲಾಗುತ್ತಿತ್ತು. ವಿಶೇಷವಾಗಿ ಕೆಂಪೇಗೌಡರಿಗೆ ಶೈವಧರ್ಮದ ಬಗ್ಗೆ ನಂಬಿಕೆ ಬಲವಾಗಿದ್ದರಿಂದ ಅಗತ್ಯವಿರುವೆಡೆಯೆಲ್ಲಾ ಶಿವ ದೇವಾಲಯ ನಿರ್ಮಿಸಲು ಸಹಕರಿಸಿದ್ದಾರೆ ಮಿಕ್ಕಂತೆ ವೈಷ್ಣವ ಧರ್ಮಾವಲಂಬಿಗಳಿಗೆ ಅನುಕೂಲವಾಗಲು ವಿಷ್ಣು ದೇವಾಲಯಗಳ ನಿರ್ಮಾಣವೂ, ಪೂಜಾ ವಿಧಿಗಳನ್ನು ನಡೆಸಲು ಹಿಂಜರಿಯಲಿಲ್ಲ.

ಗುಡಿಸ ಮಂದಿರ ಇತ್ಯಾದಿಗಳಲ್ಲಿ ಪೂಜೆ ಸಲ್ಲಿಸುವ ಅರ್ಚಕರನ್ನು ಗೌರವದಿಂದ ನೋಡಿಕೊಳ್ಳುವ ಅವರ ಯೋಗ್ಯ ಜೀವನಕ್ಕೆ ಸೌಲಭ್ಯ ಕಲ್ಪಿಸುವ ಯೋಜನೆ ಜಾರಿಯಾಯಿತು.[1]

ಎಂ.ವಿ. ಕೃಷ್ಣರಾವ್‌ರವರು ಒಂದು ಕಡೆ ಹೀಗೆ ಉಲ್ಲೇಖಿಸುತ್ತಾರೆ. ಕೆಂಪೇಗೌಡ ನಿರ್ಮಿಸಲು ಹೊರಟ ಕೋಟೆಯ ಬಾಗಿಲು ನಿಲ್ಲದಿದ್ದಾಗ ಆತನ ಸೊಸೆ ಲಕ್ಷ್ಮಮ್ಮನ ಸುಂದರವಾದ ವಿಗ್ರಹವೊಂದನ್ನು ಮಾಡಿಸಿ ಪ್ರತಿಷ್ಠಾಪನೆ ಮಾಡಿದ. ಕ್ರಮಾಗತವಾಗಿ ಅಲ್ಲಿ ಪೂಜಾದಿಗಳು ನಡೆಯುವಂತೆ ಏರ್ಪಾಡು ಮಾಡಿದ.[2]

ಈ ವಿಗ್ರಹವನ್ನು ಪರೀಕ್ಷಿಸಿದ ಡಾ॥ ಕೊಂಡಿರೆಡ್ಡಿಯವರು, ಲಕ್ಷ್ಮಿವಿಗ್ರಹವು ಪೀಠದ ಮೇಲೆ ಪದ್ಮಾಸನದಲ್ಲಿ ಕುಳಿತು 4 ಕೈಗಳನ್ನು ಹೊಂದಿದ್ದು ಅಭಯ ವರದ ಕಮಲದ ಮೊಗ್ಗುಗಳನ್ನು ಧರಿಸಿದೆ. ಇದನ್ನು ಕೆಂಪೇಗೌಡನ ಸೊಸೆ ಲಕ್ಷ್ಮಮ್ಮನ ಸಮಾಧಿಯ ಮೇಲೆ

ಸ್ಥಾಪಿಸಿರುವ ಶಿಲ್ಪವೆಂದು ಹೇಳಲಾಗುತ್ತದೆ.[3]

1533ರ ಶಾಸನವೊಂದರ ಬೌದ್ಧವಾಸಾ ಮಹಾಪುರೀ ಕಲವತೀತ ವಿಖ್ಯಾತವೆತ್ತ ಹರಿಗಾವಲಿ ಎಂಬ ಉಲ್ಲೇಖವನ್ನು ಡಾ||ಎಂ.ಚಿದಾನಂದಮೂರ್ತಿಯವರು ಮಾಗಡಿಸೀಮೆಯೊಂದಿಗೆ ಬೆಸೆಯುತ್ತಾರೆ. ದೇವಾಲಯಗಳಲ್ಲಿ ಪೂಜೆ-ಪುನಸ್ಕಾರಗಳನ್ನು ಸಲ್ಲಿಸುವ ಅರ್ಚಕರನ್ನು ಗೌರವದಿಂದ ನೋಡಿಕೊಳ್ಳುವ, ಅವರ ಯೋಗ್ಯ ಜೀವನಕ್ಕೆ ಸೌಲಭ್ಯ ಒದಗಿಸುವ, ಯೋಜನೆ ಜಾರಿಯಾಯಿತು.

ಬೆಂಗಳೂರು ನಿರ್ಮಾಣವಾದಾಗ ಒಂದೊಂದು ಪ್ರದೇಶದಲ್ಲಿಯೂ ಒಂದು ಪ್ರಮುಖ ದೇವಾಲಯವಿರುವಂತೆ ನೋಡಿಕೊಂಡನು.

ಅಡಿಟಿಪ್ಪಣಿ

1. ಜಾಣಗೆರೆ ವೆಂಕಟ ರಾಮಯ್ಯ - ಮಾಯಾನಗರಿಶೆಟ್ಟಿ, ಬೆಂಗಳೂರು ಕೆಂಪೇಗೌಡ 1964 - ಪುಟ - 114
2. ಎಂ.ವಿ.ಕೃಷ್ಣರಾವ್ - ಬೆಂಗಳೂರು ಕೆಂಪೇಗೌಡ 1964 - ಪುಟ-197
3. ಪ್ರೊ.ಎಂ.ಹೆಚ್.ಕೃಷ್ಣಯ್ಯ - ಡಾ॥ ದೇವರ ಕೊಂಡಾರೆಡ್ಡಿ - ಬೆಂಗಳೂರು-ಪುಟ 83

5.5 ಶಿಕ್ಷಣ

ಇವರ ಕಾಲದಲ್ಲಿ ಶಿಕ್ಷಣವನ್ನು ಅಗ್ರಹಾರಗಳಲ್ಲಿ ನೀಡಲಾಗುತ್ತಿತ್ತು. ಅಲ್ಲದೇ ಬ್ರಾಹ್ಮಣರಿಗೆ ತೆರಿಗೆ,ದಾಳಿ ಹಿಂಸೆಯಿಂದ ಮುಕ್ತವಾದ ಸ್ಥಳವನ್ನು ನೀಡಿ ಅವರಿಂದ ವಿದ್ಯಾದಾನ ಮಾಡಿಸಿ ಪುಣ್ಯ ಸಂಪಾದಿಸುವ ಸಂಪ್ರದಾಯವೇ ಅಗ್ರಹಾರ ಸ್ಥಾಪನೆ ಪ್ರಮುಖ ಅಗ್ರಹಾರಗಳೆಂದರೆ - ಶಿವಗಂಗೆ ಅನಂತಪುರ ಅಗ್ರಹಾರ, ಬೆಂಗಳೂರು ಕೆಂಪಾಪುರ ಅಗ್ರಹಾರ ಇತ್ಯಾದಿ. ಬೆಂಗಳೂರು ನಿರ್ಮಾಪಕ ಕೂಡ ಗುರುಕುಲ ಮಾದರಿಯ ಒಂದು ಶಾಲೆಯಲ್ಲಿ ಕಲಿತ ಐವರುಕಂದಪುರ (Aigondapura) ಹೆಸರುಘಟ್ಟದ ಬಳಿಯಿರುವ ಒಂದು ಹಳ್ಳಿ. ಹೀಗೆ ಗುರುಕುಲ, ಅಗ್ರಹಾರ, ಘಟಕಸ್ಥಾನ (ಉಚ್ಚ ಶಿಕ್ಷಣಕೇಂದ್ರ)ಗಳಲ್ಲಿ ಶಿಕ್ಷಣವನ್ನು ನೀಡಲಾಗುತ್ತಿತ್ತು. ಅಲ್ಲದೇ ಶಿಕ್ಷಣ ದಾಸೋಹಕ್ಕೆ ಮೀಸಲಾಗಿದ್ದವು ಮಠಗಳು. ಅಷ್ಟೇ ಅಲ್ಲದೇ ಶಿಕ್ಷಣದಲ್ಲಿ ವೇದ, ಪುರಾಣ, ಇತಿಹಾಸ, ವ್ಯಾಕರಣ, ಕಾವ್ಯಮೀಮಾಂಸೆ, ನಾಟಕ, ಸಂಗೀತ, ಧರ್ಮಶಾಸ್ತ್ರ, ಖಗೋಳಶಾಸ್ತ್ರ, ಗಣಿತಶಾಸ್ತ್ರ, ಅರ್ಥಶಾಸ್ತ್ರ, ಶುಕಶಾಸ್ತ್ರಗಳನ್ನು ಅಧ್ಯಯನದ ವಿಷಯಗಳಾಗಿ ಬೋಧಿಸಲಾಗುತ್ತಿತ್ತು. ಅಗ್ರಹಾರಗಳು ಅಂದಿನ ಶಿಕ್ಷಣದ ಕೇಂದ್ರಗಳಾಗಿ ಕಾರ್ಯನಿರ್ವಹಿಸಿ ತನ್ನದೇ ಆದ ಕೀರ್ತಿಯನ್ನು ಮೆರೆದಿದೆ. ಕೆಂಪೇಗೌಡ ಶಿಕ್ಷಣಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ನೀಡಿದ್ದನು.

ಅಗ್ರಹಾರ ಮಠಗಳು ವಿದ್ಯಾಕೇಂದ್ರಗಳಾಗಿ ಧರ್ಮ ಮತ್ತು ಶಿಕ್ಷಣ ಪ್ರಸಾರದೊಂದಿಗೆ ನ್ಯಾಯ ನೀತಿಯ ನೆಲೆಗಳಾಗಿ ಜನಮನದಲ್ಲಿ ಬೇರೂರಿದ್ದವು. ನಾಗರೀಕತೆಯ ಚಲನೆಗೆ ಚೈತನ್ಯದಾಯಕವಾಗಿ, ನೈತಿಕ ಪ್ರಜೆಯುಳ್ಳ ಮೌಲ್ಯಾಧಾರಿತ

ಸಮಾಜ ನಿರ್ಮಾಣದ ಸತ್ಕಾರದಲ್ಲಿ ತೊಡಗಿದ್ದ ಇವುಗಳ ಅಭಿವೃದ್ಧಿಗಾಗಿ, ದಾನದತ್ತಿ ನೀಡಿ ಜನಮನ್ನಗೆ ಗಳಿಸುವುದು ರಾಜಮನೆತನದವರಿಗೂ ಅನಿವಾರ್ಯವಾಗಿತ್ತು. ತೆಲುಗು ಮತ್ತು ಕನ್ನಡ ಭಾಷೆಗಳು ಜಾರಿಯಲ್ಲಿದ್ದವು. ಅಲ್ಲದೇ ಹೆಚ್ಚಾಗಿ ಕನ್ನಡ ಭಾಷೆ ಇವನ ಕಾಲದಲ್ಲಿ ಆಡುಭಾಷೆ ಮತ್ತು ಶಿಕ್ಷಣದ ಮಾಧ್ಯಮವೂ ಕೂಡ ಆಗಿತ್ತು. ಅಷ್ಟೇ ಅಲ್ಲದೇ ಕೆಂಪೇಗೌಡನ ಭಾಷೆಯೂ ಕನ್ನಡವೇ ಆಗಿತ್ತು.[1]

ಗುರುಕುಲ, ಬೋಧನಾ ಮಂದಿರ ಮುಂತಾದವುಗಳಿಗೆ ಅಗ್ರಹಾರ ಕಟ್ಟಿಸಿ ಅಲ್ಲಿ ಪಂಡಿತರು, ವಿದ್ವಾಂಸರು ನೆಲೆಸಲು ಅವಕಾಶ ಕಲ್ಪಿಸಲಾಯಿತು.[2]

ಅಡಿಟಿಪ್ಪಣಿ

1. ಡಾ॥ ಮುನಿರಾಜಪ್ಪ - ಮಾಗಡಿಸೀಮೆ ಇತಿಹಾಸ ಮತ್ತು ಸಂಸ್ಕೃತಿ

2. ಜಾಣಗೆರೆ ವೆಂಕಟರಾಮಯ್ಯ, ಮಾಯಾನಗರಶಿಲ್ಪಿ ಬೆಂಗಳೂರು ಕೆಂಪೇಗೌಡ

5.6 ಕಲೆ ಮತ್ತು ವಾಸ್ತುಶಿಲ್ಪ

ಕೆಂಪೇಗೌಡನ ಹಲವಾರು ದೇವಾಲಯಗಳು, ಉದ್ಯಾನವನಗಳು, ಗೋಪುರಗಳು, ಕೆರೆ-ಕಟ್ಟೆಗಳು ನಿರ್ಮಾಣವಾದವು. ಅಷ್ಟೇ ಅಲ್ಲದೇ ಕೋಟೆ-ಕೊತ್ತಲಗಳು ಅರಮನೆಗಳನ್ನು ನಿರ್ಮಿಸಿದನು. ಗಂಗಾಧರೇಶ್ವರ ದೇವಾಲಯ, ವಿನಾಯಕ, ಆಂಜನೇಯ, ದೊಡ್ಡ ಬಸವನಗುಡಿ, ದೊಡ್ಡ ವಿನಾಯಕ, ದೊಡ್ಡ ಆಂಜನೇಯ ವೀರಭದ್ರೇಶ್ವರ ದೇವಾಲಯಗಳು ನಿರ್ಮಾಣವಾದವು. ಇವುಗಳಗೋಸ್ಕರ ಭೂಮಿಯನ್ನು ದತ್ತಿಗೆ ಬಿಡಲಾಯಿತು. ಇವುಗಳಿಂದ ಬರುವ ಆದಾಯದಿಂದ ದಿನನಿತ್ಯದ ಪೂಜೆ, ವಿಶೇಷದಿನಗಳಲ್ಲಿ ನಡೆಯುವ ಪೂಜೆಗಳಿಗೆ ಅದರ ವಿನಿಯೋಗವಾಗುತ್ತಿತ್ತು.[1]

ಗವಿಗಂಗಾಧರೇಶ್ವರನ ಗುಡಿಯಲ್ಲಿನ ಒಂದು ವಿಶೇಷವೆಂದರೆ ಗರ್ಭಗುಡಿಯ ಗಂಗಾಧರನ ಲಿಂಗದ ಮೇಲೆ ವರ್ಷಕ್ಕೊಮ್ಮೆ ಬರುವ ಮಕರ ಸಂಕ್ರಮಣದಂದು ಸೂರ್ಯನ ಕಿರಣಗಳು ದೇವಾಲಯವನ್ನು ಹಾದುಲಿಂಗದ ಮೇಲೆ ಬೀಳುವಂತಹ ಕುಶಲಗಾರಿಕೆಯ ತಂತ್ರವನ್ನು ಅಳವಡಿಸಲಾಗಿವೆ. ಇದೊಂದು ಸುಂದರವಾದ ದೇವಾಲಯವಾಗಿದೆ.

ಶಿವಗಂಗೆಯಲ್ಲಿ ಹೊನ್ನಾದೇವಿಯ ಗರ್ಭಗುಡಿ ಮತ್ತು ಅಂಕಣದ ಆವರಣಗಳನ್ನು ವಿಶಾಲವಾಗಿ ನಿರ್ಮಿಸಿದರು.

ಅಷ್ಟೇ ಅಲ್ಲಿ ಒಂದು ವಿಶಾಲವಾದ ಹಜಾರವೊಂದನ್ನು ನಿರ್ಮಿಸಿದರು.

ಬೆಂಗಳೂರಿನಲ್ಲಿ ಕೆಲವು ದೊಡ್ಡ ಉದ್ಯಾನವನಗಳನ್ನು ತೋಟಗಳಂತೆಯೇ ನಿರ್ಮಿಸಿದರು. ಇದರಲ್ಲಿ ಪ್ರವೀಣರಾದ ತಿಗಳರನ್ನು ಕರೆಸಿ, ಅವರ ವಸತಿಗಾಗಿ ತಿಗಳದ

5.6 ಕಲೆ ಮತ್ತು ವಾಸ್ತುಶಿಲ್ಪ

ಕೆಂಪೇಗೌಡನ ಹಲವಾರು ದೇವಾಲಯಗಳು, ಉದ್ಯಾನವನಗಳು, ಗೋಪುರಗಳು, ಕೆರೆ-ಕಟ್ಟೆಗಳು ನಿರ್ಮಾಣವಾದವು. ಅಷ್ಟೇ ಅಲ್ಲದೇ ಕೋಟೆ-ಕೊತ್ತಲಗಳು ಅರಮನೆಗಳನ್ನು ನಿರ್ಮಿಸಿದನು. ಗಂಗಾಧರೇಶ್ವರ ದೇವಾಲಯ, ವಿನಾಯಕ, ಆಂಜನೇಯ, ದೊಡ್ಡ ಬಸವನಗುಡಿ, ದೊಡ್ಡ ವಿನಾಯಕ, ದೊಡ್ಡ ಆಂಜನೇಯ ವೀರಭದ್ರೇಶ್ವರ ದೇವಾಲಯಗಳು ನಿರ್ಮಾಣವಾದವು. ಇವುಗಳಗೋಸ್ಕರ ಭೂಮಿಯನ್ನು ದತ್ತಿಗೆ ಬಿಡಲಾಯಿತು. ಇವುಗಳಿಂದ ಬರುವ ಆದಾಯದಿಂದ ದಿನನಿತ್ಯದ ಪೂಜೆ, ವಿಶೇಷದಿನಗಳಲ್ಲಿ ನಡೆಯುವ ಪೂಜೆಗಳಿಗೆ ಅದರ ವಿನಿಯೋಗವಾಗುತ್ತಿತ್ತು.[1]

ಗವಿಗಂಗಾಧರೇಶ್ವರನ ಗುಡಿಯಲ್ಲಿನ ಒಂದು ವಿಶೇಷವೆಂದರೆ ಗರ್ಭಗುಡಿಯ ಗಂಗಾಧರನ ಲಿಂಗದ ಮೇಲೆ ವರ್ಷಕ್ಕೊಮ್ಮೆ ಬರುವ ಮಕರ ಸಂಕ್ರಮಣದಂದು ಸೂರ್ಯನ ಕಿರಣಗಳು ದೇವಾಲಯವನ್ನು ಹಾದುಲಿಂಗದ ಮೇಲೆ ಬೀಳುವಂತಹ ಕುಶಲಗಾರಿಕೆಯ ತಂತ್ರವನ್ನು ಅಳವಡಿಸಲಾಗಿವೆ. ಇದೊಂದು ಸುಂದರವಾದ ದೇವಾಲಯವಾಗಿದೆ.

ಶಿವಗಂಗೆಯಲ್ಲಿ ಹೊನ್ನಾದೇವಿಯ ಗರ್ಭಗುಡಿ ಮತ್ತು ಅಂಕಣದ ಆವರಣಗಳನ್ನು ವಿಶಾಲವಾಗಿ ನಿರ್ಮಿಸಿದರು.

ಅಷ್ಟೇ ಅಲ್ಲಿ ಒಂದು ವಿಶಾಲವಾದ ಹಜಾರವೊಂದನ್ನು ನಿರ್ಮಿಸಿದರು.

ಬೆಂಗಳೂರಿನಲ್ಲಿ ಕೆಲವು ದೊಡ್ಡ ಉದ್ಯಾನವನಗಳನ್ನು ತೋಟಗಳಂತೆಯೇ ನಿರ್ಮಿಸಿದರು. ಇದರಲ್ಲಿ ಪ್ರವೀಣರಾದ ತಿಗಳರನ್ನು ಕರೆಸಿ, ಅವರ ವಸತಿಗಾಗಿ ತಿಗಳದ

ಪೇಟೆಯೊಂದನ್ನು ನಿರ್ಮಿಸಿ ಅವರ ಆರಾಧ್ಯದೈವವಾದ ಧರ್ಮರಾಯಸ್ವಾಮಿಯ ದೇವಾಲಯ ನಿರ್ಮಿಸಿದರು. ಅವರ ಸಂಪ್ರದಾಯದ ಕರಗ ಉತ್ಸವವನ್ನು ಆಚರಿಸಲು ಪ್ರೋತ್ಸಾಹಿಸಿದರು.

ಬೆಂಗಳೂರು ನಗರದಲ್ಲಿರುವ ಅರಮನೆ ಇವರ ಕಾಲದಲ್ಲಿಯೇ ನಿರ್ಮಾಣವಾಯಿತು.

ಹಲಸೂರಿನಲ್ಲಿರುವ ಸೋಮೇಶ್ವರ ದೇವಾಲಯನನ್ನು ಪುನರ್‌ನಿರ್ಮಿಸುವ ಕಾರ್ಯವನ್ನು ಕೈಗೆತ್ತಿಕೊಂಡಿದ್ದರು.[2]

ಗವಿಗಂಗಾಧರೇಶ್ವರ ಗುಡಿಯು ಸ್ವಾಭಾವಿಕ ಗುಹೆಯಿಂದಾಗಿದ್ದು ದ್ರಾವಿಡ ಶೈಲಿಯ ರಚನೆಯಿಂದಾದ ಗುಡಿಯಾಗಿದೆ. ಅಲ್ಲದೇ ಹೊನ್ನಾದೇವಿ ಮತ್ತು ಗವಿಗಂಗಾಧರೇಶ್ವನ ಗುಡಿಯಲ್ಲಿ ಬಂಡೆಯ ಮೇಲೆ ಕಟ್ಟಿರುವ ಶಿಖರದಲ್ಲಿ ಋಷಿ, ಗಣಪತಿ, ತಾಂಡೇವೇಶ್ವರ, ಪಾರ್ವತಿ, ವೀರಭದ್ರ, ನಾರದ ಇನ್ನು ಮುಂತಾದವರ ಮೂರ್ತಿಗಳಿವೆ. ಇಲ್ಲಿನ ಮುಖ ಮಂಟಪದಲ್ಲಿ ಲಕ್ಷ್ಮಿ ಮತ್ತು ವಿಷ್ಣು ಡೋಲು ಹೊಡೆಯುತ್ತಿರುವುದು, ಶೈವ ಮತ್ತು ವೈಷ್ಣವ ಧರ್ಮದ ತಾತ್ರಿಕ ಸಂಘರ್ಷದ ಕುರುಹಾಗಿದೆ. ಶಿವಗಂಗೆಯ ಗಂಗಾಧರೇಶ್ವರನ ಗುಡಿಯಲ್ಲಿ ಕೈಮುಗಿದು ನಿಂತಿರುವ ಮೊದಲನೆಯ ಕೆಂಪೇಗೌಡನ ಹಾಗೂ ಕೆಂಪಸೋಸಣ್ಣ ಮತ್ತು ಊಳಿಗದ ಬಸವಯ್ಯನ ಕಂಚಿನ ಮೂರ್ತಿ ಮತ್ತು ಅಷ್ಟಭುಜ, ಖಡ್ಗಧಾರಿಗೆ, ನಾಗಪಾಶ, ಗಂಡುಕೊಡಲಿ, ಚಕ್ರ, ಗುರಾಣಿ, ಗಂಟೆ ಶಂಖ, ತ್ರಿಶೂಲ ಹಸ್ತಗಳಲ್ಲಿರುವ ಐದೂವರೆ ಅಡಿ ಎತ್ತರದ ಹೊನ್ನಾದೇವಿಯ ಉಗ್ರಶಿಲ್ಪವಿದೆ.

ಗಂಡಭೇರುಂಡದ ಕಿರೀಟ ಧರಿಸಿ, ಪಂಚಾಕ್ಷರರುಂಡ ಮಾಲೆ, ಪಾಲನೇತ್ರ, ಸೊಂಟಕ್ಕೆ, ನವರಾಕ್ಷಸರ ರುಂಡಮಾಲೆ ಧರಿಸಿ ಕೋರೆಹಲ್ಲು ಹೊರಚಾಚಿ ನಿಂತಿರುವ ಹೊನ್ನಮ್ಮನ ಉಗ್ರರೂಪ ನೋಡಿದರೆ ಭಯಂಕರವೆನಿಸುತ್ತದೆ.[4]

ಅಷ್ಟೇ ಅಲ್ಲದೆ ಸೊಸೆಯಾದ ಲಕ್ಷ್ಮಿದೇವಿಯ ನೆನೆಪಿಗೋಸ್ಕರ ಲಕ್ಷ್ಮೀದೇವಿ ದೇವಾಲಯನ್ನು ನಿರ್ಮಿಸಿದ್ದರು. ಲಕ್ಷ್ಮೀದೇವಿಯ ವಿಗ್ರಹ ಬಹಳ ಸುಂದರವಾಗಿ ಕಂಗೋಳಿಸುತ್ತಿತ್ತು.

ಇವುಗಳು ಮಾತ್ರವೇ ಅಲ್ಲದೇ ಬೆಂಗಳೂರು ನಿರ್ಮಿಸುವಾಗ ನಾಲ್ಕು ದಿಕ್ಕುಗಳಿಗೂ 4 ಕಾವಲು ಗೋಪುರಗಳನ್ನು ನಿರ್ಮಿಸಿದ್ದಾನೆ. ಪೂರ್ವಕ್ಕೆ ಹಲಸೂರು ಹೆಬ್ಬಾಗಿಲು, ದಕ್ಷಿಣಕ್ಕೆ ದೆಹಲಿ ಹೆಬ್ಬಾಗಿವೆ. ಉತ್ತರಕ್ಕೆ ಯಲಹಂಕ ಹೆಬ್ಬಾಗಿಲು, ಪಶ್ಚಿಮಕ್ಕೆ ಸೂಂಡೇಕೊಪ್ಪಲು ಹೆಬ್ಬಾಗಿಲು ಎಂಬುದಾಗಿ ಹೆಸರಿಸಲಾಗಿದೆ.[5]

ಬೆಂಗಳೂರಿನಲ್ಲಿರುವ ಕೋಟೆಯ ವೆಂಕಟರಮಣಸ್ವಾಮಿ ದೇವಾಲಯ ಒಂದನೆಯ ಕೆಂಪೇಗೌಡ ಕೋಟೆಯ ರಕ್ಷಣೆಗಾಗಿ ನಿರ್ಮಿಸಿದ ಕಾಲಭೈರವ ದೈವಾಲಯ. ಭೈರವನಿಗೆ ಬಾಗಿಲ ಭೈರವ ಎಂಬ ಅಂಕಿತವೂ ಇದೆ. ಮೈಸೂರು ಅರಸರು ಬೆಂಗಳೂರು ಅವರ ವಶಕ್ಕೆ ಬಂದ ನಂತರ ಅಂದರೆ ಮುಮ್ಮಡಿ ಕೆಂಪವೀರಪ್ಪಗೌಡನ ನಂತರ ಆ ಗುಡಿಯಲ್ಲಿ ವೆಂಕಟೇಶ್ವರ ಪ್ರತಿಷ್ಠಾಪನೆ ಮಾಡಿಸಿರಬೇಕು. ಬಹುಶಃ ಕೆಂಪೇಗೌಡ ಕೋಟೆಯನ್ನು ಕಟ್ಟಿದಾಗಲೇ ಇದು ಎದ್ದಿರಬಹುದು. ಗುಡಿಯ ವಿಮಾನವನ್ನು ನೋಡಿದರೆ ಶಕ್ತಿಯ ಕುಡಿಯಿದ್ದಂತೆ ತೋರುತ್ತದೆ.[6]

ಹೀಗೆ ಬೆಂಗಳೂರಿನ ಬಹುತೇಕ ದೇವಾಲಯಗಳು ಒಂದನೆ ಕೆಂಪೇಗೌಡನಿಂದ ನಿರ್ಮಿತವಾದವು. ಯಲಹಂಕ ನಾಡು ಮೈಸೂರಿನಲ್ಲಿ ಲೀನವಾದ ನಂತರ ಕಾಲ ಭೈರವನ ಆಲಯ ವೆಂಕಟರಮಣ ಆಲಯ ಆಗಿದೆ ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ.

ಇವುಗಳು ಮಾತ್ರವೇ ಅಲ್ಲದೇ ಬೆಂಗಳೂರಿನಲ್ಲಿ ಒಂದು ಮಣ್ಣಿನ ಕೋಟೆಯನ್ನು ಕಟ್ಟಿದ. ಈ ಕೋಟೆಯ ಬಾಗಿಲು ನಿಲ್ಲದಿದ್ದಾಗ ಒಂದು ಗರ್ಬಿಣಿಯ ಬಲಿ ಬೇಕಾಗಿರುತ್ತದೆ. ಆಗ ಕೆಂಪೇಗೌಡನ ಸೊಸೆ ಲಕ್ಷ್ಮವ್ಮ ಪ್ರಾಣಾರ್ಪಣೆ ಮಾಡಿ ಅದು ನಿಲ್ಲುವಂತೆ ಮಾಡುತ್ತಾಳೆ.

ಅಡಿಟಿಪ್ಪಣಿ

1. Internet

2. ಜಾಣಗೆರೆ ವೆಂಕಟರಾಮಯ್ಯ - ಬೆಂಗಳೂರು ಕೆಂಪೇಗೌಡ

3. M.A.R - 1915 - ಪುಟ - 12

4. ಡಾ॥ ಮುನಿಯಪ್ಪ - ಮಾಗಡಿ ಸೀಮೆ - ಇತಿಹಾಸ - ಸಂಸ್ಕೃತಿ : 203-204

5. ಡಾ॥ ಬಿ.ಪಾಂಡುಕುಮಾರ್ - 1600 ವರ್ಷಗಳ ಒಕ್ಕಲಿಗರ ಇತಿಹಾಸ

6. ಕೋಟೆ ವೆಂಕಟೇಶ್ವರ ದೇವಾಲಯ - ಸುಧಾ ವಾರಪತ್ರಿಕೆ

5.7 ಇನ್ನಿತರೆ ಅಂಶಗಳು

ಮೈಸೂರಿನ ವಿಶ್ವವಿದ್ಯಾನಿಲಯದ ಹಸ್ತಪ್ರತಿ ವಿಭಾಗದಲ್ಲಿರುವ ಕೆಂಪೇಗೌಡನ ಜಯಪ್ರಶಸ್ತಿ ಎಂಬ ಇಮ್ಮಡಿ ತಮ್ಮರಾಯ ಮತ್ತು ಕೆಂಪರಾಯ ತದಗಳು ಮತ್ತು ಕೆಂಪೇಗೌಡನ ಯಶಃ ಪ್ರತಾಪ ಕೀರ್ತನೆಗಳು, ಎಂಬ ಅಸಮಗ್ರ ಅನಾಮಧೇಯ ಹಸ್ತಪ್ರತಿಗಳನ್ನಾಧರಿಸಿ ಗೌಡಕುಲ ವಿಭೂಷಣ ಕೆಂಪೇಗೌಡ ಜಯಪ್ರಶಸ್ತಿ ಎಂಬ ಕೃತಿಯೊಂದನ್ನು ತಮ್ಮ ವಿದ್ವತ್ ಪೂರ್ಣ ಮುನ್ನುಡಿಯೊಂದಿಗೆ 1961ರಲ್ಲಿ ಪಾಂಡಿತ್ಯಕ್ಕೆ ಹೆಸರಾದ ಕರ್ಲಮಂಗಲ ಶ್ರೀಕಂಠಯ್ಯನವರು ಪ್ರಕಟಿಸಿದ್ದಾರೆ.[1]

ಶ್ರೀಕಂಠಯ್ಯ ಕರ್ಲ ಮಂಗಲ (ಸಂ) ಸದ್ಗುರು ನಂಜೇಶ್ವರ ಕವಿಯ ಗೌಡಕುಲ ವಿಭೂಷಣ ಕೆಂಪೇಗೌಡ ಜಯ ಪ್ರಶಸ್ತಿ (ಕರ್ಲ ಮಂಗಲ - 1961)

ಯಲಹಂಕ ನಾಡಪ್ರಭು ಕೆಂಪೇಗೌಡನು ಮೇಲೂರಿಗೆ ಸೇರಿದ ಗುಮ್ಮಳಾಪುರದ ಗುರು ನಂಜೇದೇವಪ್ಪನವರಿಗೆ, ದತ್ತಿ ಬಿಟ್ಟಿರುವ ವಿವರಗಳನ್ನೊಳಗೊಂಡ ಕ್ರಿ.ಶ. 1606ರ ಗುಮ್ಮಳಾಪುರ ಶಾಸನವನ್ನು ಡಾ॥ವಿ.ವಿ.ಕೃಷ್ಣಮೂರ್ತಿಯವರು ಉಲ್ಲೇಖಿಸಿ, ಗುರುನಂಜೇಶ, ಬೆಂಗಳೂರು ಕೆಂಪೇಗೌಡ, ಹೊಸಪೇಟೆಯ ಪಾಳೇಗಾರ, ಸುಗಟೂರು ಪ್ರಭು ಮುಮ್ಮಡಿ ತಮ್ಮೇಗೌಡನಿಗೂ ಗುರುವಾಗಿದ್ದ ಶಾಸನಾಧಾರಗಳಿರುವುದನ್ನು ಗಮನಿಸಿ, ಕೃತಿಯ ಕರ್ತೃವಿನ ಹೆಸರು ಇನ್ನು ಅಜ್ಞಾತವಾಗಿದೆ ಎಂದಿದ್ದಾರೆ.

ಕಲ್ಯಾಣದಿಂದ ಗುಮ್ಮಣಣ ತೆಮ್ಮಣ್ಣದೆಂಬ ಶಿವಶರಣರು ಶಿವಗಂಗೆಯ ಬಳಿ

ಗೊಮ್ಮಳಪುರಕ್ಕೆ ಬಂದು ನೆಲೆಸಿ, ಲಿಂಗಮುದ್ರೆಕಲ್ಲು ನೆಟ್ಟು, ಗುಮ್ಮಳಾಪುರದಳಲಿ ಗೂಳೂರು ಸಿದ್ದಣ್ಣ ಸ್ವಾಮಿಗಳ ಗುರುಗಳಾದ, ಗಡ್ಡದ ಸಿದ್ದವೀರಣ್ಣ ಸ್ವಾಮಿಗಳ ವಿಚಾರವನ್ನು ನಿರಂಜನ ವಂಶರತ್ನಾಕರ ತಿಳಿಸುತ್ತದೆ.[2]

ಅಷ್ಟೇ ಅಲ್ಲದೇ ಮಾಗಡಿ ಸೀಮೆಯನ್ನಾಳಿದ ನಾಡುಪ್ರಭುಗಳಾದ ಕೆಂಪೇಗೌಡನ ವಂಶಸ್ಥರನ್ನು ಕುರಿತಾದ ಜನಪದರುಗಳಿದ್ದು ಬಹುತೇಕ ಜನಪದಗಳು ಕೆಂಪೇಗೌಡನನ್ನು ಕುರಿತು ವರ್ಣಿಸುತ್ತವೆಯೇ ಹೊರತು, ಯಾವ ಕೆಂಪೇಗೌಡನೆಂದು ಸ್ಪಷ್ಟಪಡಿಸುವುದಿಲ್ಲ. ಇಂತಹ ಜನಪದಗಳನ್ನು ಸಂಗ್ರಹಿಸಿ ಪ್ರಕಟಿಸಲಾಗಿದೆ. ನಾಡಗೌಡ ಜನಪದ ಕಥನ ಗೀತೆಗಳನ್ನು ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನ ತಿಮ್ಮಲಾಪುರದ ದೊಂಬಿದಾಸರ ವೆಂಕಟಯ್ಯ ಮತ್ತು ಸಂಗಡಿಗರು ಹಾಡಿದ್ದಾರೆ. ಅದರ ಕೆಲವು ಪದಗಳು ಹೀಗಿವೆ.[3]

ಹೋಗಬೇಕು ಇನ್ನು ಈಗ
ಮಾಗಡಿ ಸೀಮೆಗ್ಹೀಗ
ಮಾಗಡಿ ಸೀಮೇಲಿ
ಕಾಸಿಗೆ ಸೇರು ರಾಗಿಯಂತೆ
ಈಚಲು ಗರಿ ತುರತಾಳೆ
ಹಿಡಿಕಲ್ಲು ಕಟ್ಟುತಾಳೆ
ಕೇಳು ಕೇಳು ಎಲ ಕೆಂಪ

ಹೇಳುವಂತ ನನ್ನ ಮಾತ
ವರುಷಕೆ ಮೂರು ರೂಪಾಯಿ
ಸಂಬಳ ನಿನ್ಗೆ ಕೊಡುತೀವಿ
ಅಯ್ಯ ಹಾಳು ಪಾಪಿ ಹಾರುವರು
ಏನು ಯೋಚನೆ ಮಾಡುತಾರ
ಕಾಯರಾರೂ ದಿಕ್ಕಿಲ್ಲ
ಆಗ ಮಾಗಡಿ ರಂಗಧಾಮ
ಏನು ಯೋಚನೆ ಮಾಡುತಾನೆ,
ಶಿವಗಂಗೆ ಊರಲಿ ಕಲ್ಪಸ್ಯಾನು

ಅಲ್ಲಿ ಕೆಂಪೇಗೌಡ್ನ ಪ್ರತಿರೂಪ ತಿದ್ದಸ್ಯಾನು.

ಇಂತಹುದೇ ಇನ್ನೊಂದು ಜನಪದ ಸಂಗ್ರಹವನ್ನು ಪಿ.ರಾಜಶೇಖರ ಮತ್ತು ಗುಡ್ಡೇನಹಳ್ಳಿಯ ಕಲ್ಲೇಶ್ವರ ಯುವಕ ಸಂಘದವರು 1975ರಲ್ಲಿ ಪ್ರಕಟಿಸಿದ್ದಾರೆ.[4]

ಅಡಿಟಿಪ್ಪಣಿ

1. ಶ್ರೀಕಂಠಯ್ಯ ಕರ್ಲ ಮಂಗಲ (ಸಂ) ಸದ್ಗುರು ನಂಜೇಶ್ವರ ಕವಿಯ ಗೌಡಕುಲ ವಿಭೂಷಣ ಕೆಂಪೇಗೌಡ ಜಯ ಪ್ರಶಸ್ತಿ (ಕರ್ಲ ಮಂಗಲ - 1961)

2. ಹಳಗಟ್ಟಿ, ಫ.ಗು. (ಸಂ) ನಿರಂಜನ ವಂಶರತ್ನಾಕರ. (ವಿಜಾಪುರ : ಶಿವಾನುಭವ ಗ್ರಂಥಮಾಲೆ ನಂ-33 1932)ಪುಟ - 24.

3. ಕೃಷ್ಣಸ್ವಾಮಿ , ಕ.ರಂ.(ಸಂ) ನಾಡಪ್ರಭು ಕೆಂಪೇಗೌಡ ಜನಪದ ಕಥನಾಗೀತೆ

(ಬೆಂಗಳೂರು : ಜನಪದ ಅಕಾಡೆಮಿ ಬೆಂಗಳೂರು, 1986)

ಪುಟಗಳು, 1, 7, 10, 17, 42

4. ರಾಜಶೇಖರ.ಪಿ. (ಸಂ) ಜಾನಪದ ಮಾಗಡಿಕೆಂಪೇಗೌಡ (ಗುಡ್ಡೇನಹಳ್ಳಿ : ಕಲ್ಲೇಶ್ವರ ಯುವಕ ಸಂಘ, 1975)

ಅಧ್ಯಾಯ 6 : ಉಪಸಂಹಾರ

ಭಾರತದ ಇತಿಹಾಸದಲ್ಲಿ ಹಲವಾರು ರಾಜವಂಶಗಳು ಆಳಿವೆ. ಅವುಗಳಿಗೆ ಸಾಮಂತರಾಗಿದ್ದು ಕೊಂಡೇ ಹೆಚ್ಚಿನ ಪ್ರಸಿದ್ಧಿಯಾಗಿರುವವರು ಇದ್ದಾರೆ. ಅಂತಹವರಲ್ಲಿ ವಿಜಯನಗರ ಸಾಮ್ರಾಜ್ಯಕ್ಕೆ ನಿಷ್ಠರಾಗಿದ್ದ ಯಲಹಂಕ ಪ್ರಭುಗಳು ಒಬ್ಬರು. ಇವರಲ್ಲಿ ಹಲವಾರು ರಾಜರು ಆಳಿದ್ದಾರೆ. ಅವರಲ್ಲಿ ಪ್ರಸಿದ್ಧನಾದವನೆಂದರೆ - ಹಿರಿಯ ಕೆಂಪೇಗೌಡ. ಅವನನ್ನು ಒಂದನೇ ಕೆಂಪೇಗೌಡ, ಬೆಂಗಳೂರು ಕೆಂಪೇಗೌಡ ಎಂಬಿತ್ಯಾದಿ ಹೆಸರುಗಳಿಂದ ಕರೆಯಲಾಗುತ್ತದೆ. ಇವನ ಕಾಲದಲ್ಲಿ ಆದ ಹಲವು ಮಾರ್ಪಾಡುಗಳು ನಮ್ಮ ಕಣ್ಮುಂದೆ ಇವೆ. ಒಂದು ಹಳ್ಳಿಯನ್ನು ಮಹಾನಗರವಾಗಿ ಮಾರ್ಪಾಡಿಸಿದ. ಅದನ್ನು ಇಂದು 'ಸಿಲಿಕಾನ್ ಸಿಟಿ' ಎನ್ನುವ ಮಟ್ಟಿಗೆ ನಿಂತಿದೆ. ಇದು ಇಂದು ಕರ್ನಾಟಕ ರಾಜ್ಯದ ರಾಜಧಾನಿಯೂ ಹೌದು. ತನ್ನ ಜೀವಿತಾವಧಿಯಲ್ಲಿ ಹಂಪೆಯಂತಹ ನಗರವನ್ನು ಕಟ್ಟಬೇಕೆಂಬ ಆಸೆಯಿಂದ ಈ ಬೆಂಗಳೂರು ನಗರವನ್ನು ನಿರ್ಮಿಸಿದ. ಅದಕ್ಕೆ ಅವನು ಹಾಕಿದ್ದ ಅವನೆಂತಹ ಮಹಾಶಿಲ್ಪಿ ಎಂಬುದು ಅದರಿಂದ ತಿಳಿಯುತ್ತದೆ.

ಇವನೊಬ್ಬ ಸಂಯಮಿ. ತಾಳ್ಮೆ ಪ್ರವೃತ್ತಿಯುಳ್ಳವನು. ಎಲ್ಲವನ್ನು ಸಮಾಧಾನ ಚಿತ್ತದಿಂದ ಕೇಳುವವನು. ಅಲ್ಲದೇ ಸದಾ ಉತ್ಸಾಹದ ಚಿಲುಮೆಯಂತಿದ್ದ. ಎಂತಹದ್ದೇ ಸಮಸ್ಯೆ ಕಷ್ಟ, ಅಪಮಾನ ಎದುರಾದರೂ ಎದೆಗುಂದದೆ ಮುಂದಡಿಯಿಡಲು ಕಾತರಿಸುತ್ತಿದ್ದ. ಇವನು ಕೃಷ್ಣದೇವರಾಯ, ಸದಾಶಿವರಾಯ, ಅಚ್ಯುತರಾಯರ ಸಮಕಾಲೀನರು ನಾಡಿನ ಕೆಚ್ಚೆದೆಯ ಎಚ್ಚವ್ವ ನಾಯಕ, ದೊಡ್ಡ ಭರಮಣ್ಣನಾಯಕ. ಅಳಿಯ ರಾಮರಾಯರಂಥವರು ಸಮಕಾಲೀನ ಆಪ್ತರಾಗಿದ್ದರು.

ಇತಿಹಾಸವನ್ನು ಅವಲೋಕನ ಮಾಡಿದಾಗ ನಮಗೆ ಲಭ್ಯವಾಗುವ ಅಂಶಗಳೆಂದರೆ ಬೆಂಗಳೂರು ಮಹಾನಗರವನ್ನು ನಿರ್ಮಿಸಿದವನು. ಹಿರಿಯ ಕೆಂಪೇಗೌಡನೆಂತಲೂ, ಆತನೇ ಯಲಹಂಕನಾಡಿನ ಪ್ರಭುವಾಗಿದ್ದನೆಂತಲೂ, ಆಮೇಲೆ ಬೆಂಗಳೂರನ್ನು ಕಟ್ಟಿ ತನ್ನ ರಾಜಧಾನಿಯನ್ನು ಯಲಹಂಕದಿಂದ ಬೆಂಗಳೂರಿಗೆ ವರ್ಗಾಯಿಸಿದನೆಂತಲೂ, ವಿಜಯನಗರ ಸಾಮ್ರಾಟ ಕೃಷ್ಣದೇವರಾಯನಿಂದ ಅಪಾರ ಮೆಚ್ಚುಗೆ ಗಳಿಸಿ 'ಕೆಂಪರಾಯ'ನೆಂಬ ಬಿರುದು ಗಳಿಸಿದ್ದನೆಂತಲೂ, ವಿಜಯನಗರ ಸಾಮ್ರಾಜ್ಯಕ್ಕೆ ಯಲಹಂಕ ನಾಡನ್ನು ದಕ್ಷಿಣದ ರಕ್ಷಣಾ ಕೋಟೆಯಂತೆ ಕಾದು ಕಾವಿಟ್ಟುಕೊಂಡವನೆಂತಲೂ ನೆರೆಯ ಅಸೂಯೆ ಪರರ ದೆಸೆಯಿಂದ ಚಕ್ರವರ್ತಿಯ ದುಡುಕು ನಿರ್ಧಾರದಿಂದ ವಿಜಯನಗರದ ಆನೆಗುಂದಿ ಸೆರೆಯಲ್ಲಿರಬೇಕಾಯಿತೆಂತಲೂ, ಸತ್ಯಸಂಗತಿ ಅರಿವಾಗುವುದರ ಜೊತೆಗೆ ಸಾಮ್ರಾಜ್ಯದ ಕ್ಷಮಾಪತಿ ಅಳಿಯ ರಾಮರಾಯನಿಗೆ ತಿಳಿದು ಬಂದ ತಕ್ಷಣವೇ ಬಿಡುಗಡೆ ಗೊಂಡನೆಂತಲೂ, ಜನಾನುರಾಗಿಯಾಗಿದ್ದಲ್ಲದೇ ಪ್ರತೀವರ್ಣ, ವರ್ಗಗಳ ಸಮೂಹಗಳಿಗೆ ಸಮಾನ ಬದುಕು ಮತ್ತು ಸೌಲಭ್ಯಗಳನ್ನು ವಿತರಿಸಿದವನೆತಂಲೂ, ರೈತಾಪಿ ಜನರಿಗೆ ಅಧಿಕವಾದ ಆಸಕ್ತಿ ತೋರಿ ಅವರನ್ನು ಪ್ರೀತ್ಯಾದರಗಳಿಂದ ಕಂಡವನೆಂತಲೂ, ಕೆರೆಕಟ್ಟೆ ನಿರ್ಮಾಣ, ದೇವಾಲಯ ನಿರ್ಮಾಣ, ತೋಟಗಳನ್ನು ಅತಿಯಾಗಿ ಪ್ರೀತಿಸುತ್ತಾ ಅವುಗಳನ್ನು ಅಭಿವೃದ್ಧಿ ಪಡಿಸಿದವನೆಂತಲೂ, ಅಂತಿಮವಾಗಿ ಇಳಿವಯಸ್ಸಿಗೆ ತಲೆಬಾಗಿ ತನ್ನ ಪುತ್ರ ಇಮ್ಮಡಿ ಕೆಂಪೇಗೌಡನಂತಹ ವೀರಾಗ್ರಣಿಗೆ ಪಟ್ಟಾಭಿಷೇಕ ಮಾಡಿ ತನ್ನ ಧರ್ಮಪತ್ನಿ ಚೆನ್ನಮಾಂಬೆಯೊಡನೆ ಶಿವಗಂಗೆಗೆ ತೆರಳಿ, ಗಂಗಾಧೇಶ್ವರ ಮತ್ತು ಹೊನ್ನಾದೇವಿಯರ ಸೇವೆಗೈಯುತ್ತಾ ಸ್ವರ್ಗಸ್ತನಾದನೆಂದು ತಿಳಿದು ಬರುತ್ತದೆ.

ಆದರೆ ಹಿರಿಯ ಕೆಂಪೇಗೌಡನ ಸತ್ಯಶೋಧನಾ ಇತಿಹಾಸ ಇವತ್ತಿನ ವಿಶ್ವಕ್ಕೆ, ಸಮಾಜಕ್ಕೆ ತೀರಾ ಅತ್ಯವಶ್ಯಕವಾಗಿರುವುದರಿಂದ, ವಾಸ್ತವ ಇತಿಹಾಸದ ಸಂಗತಿಗಳು ಜನಮನಕ್ಕೆ ಹೊಕ್ಕ ಬೇಕಾಗಿರುವುದರಿಂದ ಅಂತರ ರಾಷ್ಟ್ರೀಯ ಖ್ಯಾತಿಯ ಮಹಾನಗರದ ಶಿಲ್ಪಿಯ ಕುರಿತು ದಾಖಲಿಸಬೇಕಾಗಿದ್ದುದು ನಮ್ಮೆಲ್ಲರ ಕರ್ತವ್ಯ.

ಕೆಂಪೇಗೌಡ ಬೆಂಗಳೂರು ಕೋಟೆಗೆ ನಾಲ್ಕು ಮಹಾದ್ವಾರಗಳನ್ನಿಡಿಸಿದ್ದ - ಅವುಗಳೆಂದರೆ ಕೆಂಗೇರಿ ಬಾಗಿಲು, ಯಲಹಂಕ ಬಾಗಿಲು, ಅಲಸೂರು ಬಾಗಿಲು ಮತ್ತು ಶ್ರೀರಂಗಪಟ್ಟಣ ಬಾಗಿಲು.

ಇವುಗಳು ಆವನ ನಿರ್ಮಾಣಕ್ಕೆ ಸಾಕ್ಷಿಯಾಗಿ ನಿಂತಿವೆ. ಅನೇಕ ಶಾಸನಗಳು ಕೆಂಪೇಗೌಡನನ್ನು ಧೀರಧರ್ಮ ಪ್ರಭು ಎಂದು ಹೊಗಳುತ್ತವೆ. ಕೃಷ್ಣಗಿರಿಯಿಂದ ದಡಿಗದವರೆಗೆ ಕಾವೇರಿಯಿಂದ ಹಿಂದೂಪುರದವರೆಗೆ ಈತ ಆಳಿದ ಬಗೆಗೆ ಇಂದಿಗೂ ಕೆಂಪೇಗೌಡ ಮಂಟಪಗಳು ದೊರೆಯುತ್ತವೆ. ಅಲ್ಲದೇ ಇವನು ಮಹಾನ್ ದೈವ ಭಕ್ತನಾಗಿದ್ದ. ಅಷ್ಟುಮಾತ್ರವಲ್ಲದೇ ಬೆಂಗಳೂರಿನಾದ್ಯಂತ ಹಲವಾರು ದೇವಾಲಯಗಳು, ನೀರಿನ ಅನುಕೂಲಕ್ಕೆ ನೀರಿನ ಟ್ಯಾಂಕ್‌ಗಳು, ಕೆರೆಗಳು, ವಿವಿಧ ಜಾತಿಯವರು ನೆಲೆಸಲು ಅನುಕೂಲಮಾಡಿಕೊಟ್ಟ. ಹೀಗೆ ಯಲಹಂಕ ಪ್ರಭು ಹಿರಿಯ ಕೆಂಪೇಗೌಡ ಒಬ್ಬ ಮಹಾನ್ ವ್ಯಕ್ತಿ ಆತನ ಜೀವನ ಅನುಕರಣೀಯ.

ಇವನ ಸ್ಮರಣಾರ್ಥವಾಗಿ ಇವನು ನಿರ್ಮಿಸಿದ ಕಾವಲು ಗೋಪುರಗಳು ಇಂದಿಗೂ ಇವೆ. ಹಾಗೂ ಬೆಂಗಳೂರು ಮಹಾನಗರ ಪಾಲಿಕೆ ತನ್ನ ಚಿಹ್ನೆಯಲ್ಲಿ ಈ ಕಾವಲು

ಗೋಪುರವನ್ನು ಬಳಸಿಕೊಂಡಿವೆ. ಅಷ್ಟೇ ಅಲ್ಲದೇ ಇತ್ತೀಚೆಗೆ ಅದು Corporation ಸರ್ಕಲ್‌ನಲ್ಲಿ ಬಹಳ ಎತ್ತರದ ಕಂಬದ ಮೇಲೆ ಗೋಪುರ ನಿರ್ಮಿಸುವುದರ ಮೂಲಕ ಕೆಂಪೇಗೌಡನಿಗೆ ತನ್ನ ಕೃತಜ್ಞತೆ ಸಲ್ಲಿಸಿದೆ.

ಗ್ರಂಥಋಣ

1. ಬರ್ಟನ್ ಸ್ಟೈನ್, ಅಗ್ರೇರಿಯನ್ ಇಂಟಗ್ರೇಷನ್ ಆಫ್ ಸೌಂಡ್ ಇಂಡಿಯಾ (ನವದೆಹಲಿ - 1979)

2. ಡಾ|| ರಾಮಕೃಷ್ಣ.ಆರ್. ಇದರಲ್ಲಿ ಪ್ರೊ.ಕೃಷ್ಣಯ್ಯ.ಎಂ.ಹೆಚ್, ಡಾ||ದೇವರಕೊಂಡಾರೆಡ್ಡಿ (ಸಂ) ಕೆಂಪೇಗೌಡ ವಂಶಸ್ಥರು (ಬೆಂಗಳೂರು - ಜನತಾ ಶಿಕ್ಷಣ ಸಂಸ್ಥೆ - ವಿವೇಕಾನಂದ ಕಾಲೇಜು - 1996)

3. ರೈಸ್.ಬಿ.ಲೆವಿಸ್, ಮೈಸೂರು, ಸಂಪುಟ - 1 (ವೆಸ್ಟ್ ಮಿನಿಸ್ಟರ್ - 1897)

4. QJMS XIII

5. MAR - 1943-51

6. ನಾಗರಾಜು.ಎಂ.ಜಿ. ಇದರಲ್ಲಿ ಬೆಳ್ಳಿಬಾಗಿನ, ಒಕ್ಕಲಿಗರ ಸಂಘದ ರಜತ ಮಹೋತ್ಸವ

7. ಎಂ.ವಿ.ಕೃಷ್ಣರಾವ್ ಮತ್ತು ಟಿ.ಕೇಶವಭಟ್ಟ (ಸಂ) ಕರ್ನಾಟಕ ಇತಿಹಾಸ ದರ್ಶನ

8. ಹ.ಕ.ರಾಜೇಗೌಡ-ಯಲಹಂಕ ಪ್ರಭು - ಚೇತನ ಬುಕ್ ಹೌಸ್ 2001

9. E.C-Vol-9

10. ಎಂ.ವಿ. ಕೃಷ್ಣರಾವ್ - ಬೆಂಗಳೂರು ಕೆಂಪೇಗೌಡ

11. ತಿರುಮಲಾರ್ಯ - ಚಿಕ್ಕದೇವರಾಜ ಭಿನ್ನಪ

12. E.C - 9, ಮಾಗಡಿ - 82

13. ಹಾ.ಮಾ.ನಾಯಕ (ಪ್ರ.ಸಂ) ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ

14. ಎ.ಕ.9 ಬೆಂಗಳೂರು ಅನುಬಂಧ, ಮಾಗಡಿ - 129 MAR-1914-15

15. ಬಿ.ಪುಟ್ಟಯ್ಯ - QJMS XIII ನಂಬರ್ - 4

16. ನಾಗರಾಜು.ಎಂ.ಜಿ. ಬೆಂಗಳೂರು ಜಿಲ್ಲೆಯಲ್ಲಿ ಗೌಡ ಇತಿಹಾಸ - ಯಲಹಂಕ ವಂಶದ ಕೆಂಪೇಗೌಡ ದೊರೆಗಳು ಜೀವನ ಸಂಗತಿಗಳು. ಇದರಲ್ಲಿ ಬೆಳ್ಳಿ ಬಾಗಿನ ಒಕ್ಕಲಿಗರ ಸಂಘದ ರಜತಮಹೋತ್ಸವ ಸಂಚಿಕೆ (ಬೆಂಗಳೂರು)

17. Internet

18 ಅನಕೃ - ಕೆಂಪೇಗೌಡ

19. ಎ.ಕ . 9 ಮಾಗಡಿ - 1

20. ಎ.ಕ . 9 ಬೆಂಗಳೂರು ಅನುಬಂಧ, ನೆಲಮಂಗಲ

21. ಡಾ॥ಗೋಪಾಲ್‌ರಾವ್.ಹೆಚ್.ಎಸ್, ನೆಲದಸಿರಿ (ನೆಲಮಂಗಲ - ಕನ್ನಡ ಸಾಹಿತ್ಯ ಪರಿಷತ್ತು - 1997

22. ದೇ.ಜವರೇಗೌಡ - ಬೆಂಗಳೂರು ಕೆಂಪೇಗೌಡ (ಮೈಸೂರು)

23. ನರಸಿಂಹಯ್ಯ.ಎಸ್.ಕೆ. ಮಾಗಡಿ ಕೆಂಪೇಗೌಡ (ಬೆಂಗಳೂರು - 1924) - ಬಿ.ವಿ.ಲಕ್ಷ್ಮಣ್ - 1990

24. ನಾಗರಾಜ್.ಎಂ.ಜಿ. ವಡವಟ್ಟದ ದಿವಂಗತ ಈಶ್ವರರಾವ್‌ರವರಿಂದ ತಿಳಿದ ವಿಚಾರ

25. ಎ.ಕ . 9 - ಬೆಂಗಳೂರು - 14

26. ಎ.ಕ . 12 ಕುಣಿಗಲ್ - 10

27. ಎ.ಕ . 12 ಕುಣಿಗಲ್ - 23

28. ಎ.ಕ . 9 - ಬೆಂಗಳೂರು ಅನುಬಂಧ - ನೆಲಮಂಗಲ - 109

29. ಎ.ಕ . 9 - ಬೆಂಗಳೂರು ಅನುಬಂಧ - ನೆಲಮಂಗಲ - 107

30. M.Fazlul Hasan Bangalore through centuries.

31. ಕರ್ನಾಟಕ ಇತಿಹಾಸ ದರ್ಶನ

32. ಡಿ.ಎಲ್.ನರಸಿಂಹಾಚಾರ್ (ಸಂ) - ವಡ್ಡಾರಾಧನೆ

33. ಎಸ್.ಕೆ.ರಾಮಚಂದ್ರರಾವ್ - ಸುಧಾ ವಾರಪತ್ರಿಕೆ

34. Mysore gazettee - vol - V

35. ಜಾಣಗೆರೆ ವೆಂಕಟರಾಮಯ್ಯ - ಮಾಯಾನಗರಿಯ ಶಿಲ್ಪಿ
ಬೆಂಗಳೂರು ಕೆಂಪೇಗೌಡ - ಬೆಂಗಳೂರು - 2005

36. ಕೋಟೆ ವೆಂಕಟೇಶ್ವರ ದೇವಾಲಯ - ಸುಧಾ ವಾರಪತ್ರಿಕೆ

37. ಡಾ|| ಬಿ.ಪಾಂಡುಕುಮಾರ್ - 1600 ವರ್ಷಗಳ ಒಕ್ಕಲಿಗರ ಇತಿಹಾಸ
- ಬೆಂಗಳೂರು - 2007

38. ಡಾ॥ ಮುನಿರಾಜಪ್ಪ - ಮಾಗಡಿ ಸೀಮೆ - ಇತಿಹಾಸ - ಸಂಸ್ಕೃತಿ. ಬೆಂಗಳೂರು 2005

39. The Mysore Tribes and castes - vol - IV

40. C.Hayavadana Rao - Mysore gazetteer - vol II

41. ಕರ್ಲಮಂಗಲ - ಶ್ರೀಕಂಠಯ್ಯ - ಕೆಂಪೇಗೌಡ ಜಯಪ್ರಶಸ್ತಿ

42. ಶ್ರೀಕಂಠಯ್ಯ ಕರ್ಲಮಂಗಲ (ಸಂ) ಸದ್ಗುರು ನಂಜೇಗೌಡ ಕವಿಯ ಗೌಡಕುಲ ವಿಭೂಷಣ ಕೆಂಪೇಗೌಡ ಜಯಪ್ರಶಸ್ತಿ ೦ (ಕರ್ಲಮಂಗಲ - 1961)

43. ಹಳಕಟ್ಟಿ - ಫ.ಗು (ಸಂ) ನಿರಂಜನ ವಂಶರತ್ನಾಕರ (ವಿಜಾಪುರ : ಶಿವಾನುಭವ ಗ್ರಂಥಮಾಲೆ ನಂ.33, 1932

44. ಕೃಷ್ಣಸ್ವಾಮಿ, ಕ.ರಂ (ಸಂ) ನಾಡಪ್ರಭು ಕೆಂಪೇಗೌಡ ಜನಪದ ಕಥನಾಗೀತೆ (ಬೆಂಗಳೂರು ; ಜನಪದ ಅಕಾಡೆಮಿ ಬೆಂಗಳೂರು-1986)

45. ರಾಜಶೇಖರ.ಪಿ., (ಸಂ) ಜಾನಪದ, ಮಾಗಡಿ ಕೆಂಪೇಗೌಡ (ಗುಡ್ಡೇನಹಳ್ಳಿ : ಕಲ್ಲೇಶ್ವರ ಯುವಕ ಸಂಘ 1935)

46. ಡಾ॥ ಸೂರ್ಯನಾಥ್ ಕಾಮತ್ (ಪ್ರ. ಸಂ.) ಬೆಂಗಳೂರು ರೂರಲ್ ಡಿಸ್ಟ್ರಿಕ್ಟ್ ಗೆಜೆಟಿಯರ್ (ಬೆಂಗಳೂರು : ಕರ್ನಾಟಕ ಸರ್ಕಾರ, 1989)


ಸಂಕ್ಷಿಪ್ತಾಕ್ಷರಗಳು

M.A.R	Mysore Archaological Reports
Q.J.M.S	Quarterly Journal of the Mythic Society
ಎ. ಕ	ಎಪಿಗ್ರಫಿಯ ಕರ್ನಾಟಕ


ಚಿತ್ರಗಳು




ಹಿರಿಯ ಕೆಂಪೇಗೌಡ



ಹಿರಿಯ ಕೆಂಪೇಗೌಡ ಶಿವಗಂಗೆ




ಕೆಂಪೇಗೌಡನ ಕಾಲದ ಗೋಪುರ




ಕೆಂಪೇಗೌಡನ ಕಾಲದ ಯಲಹಂಕ ನಾಡು

ಕೃಪೆ : ಬಿ.ಎಲ್. ರೈಸ್



ಕೆಂಪೇಗೌಡನ ಕಾಲದ ಗೋಪುರ



ಕೆಂಪೇಗೌಡನ ಕಾಲದ ಯಲಹಂಕ ನಾಡು

ಕೃಪೆ : ಬಿ.ಎಲ್. ರೈಸ್